ನಮ್ಮ ಮಾನಸ

ಸಂಪುಟ : 6 ಡಿಸೆಂಬರ್ 2012 ಸಂಚಿಕೆ: 8 ಬೆಲೆ: 10/-



ನಮ್ಮ ಮಾನಸ

ಡಿಸೆಂಬರ್ 2012

ಸಂಪುಟ : 6 ಸಂಚಿಕೆ : 8

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 98804 67372 / 98869 18910

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**10–00 ರೂ.**
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	**100–00 ರೂ.**
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಪ್ರಾರಂಭ : 'ಮಾನವಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಒಳಗಿನ ಪುಟಗಳಲ್ಲಿ....

ಸಹೃದಯ ಓದುಗರಲ್ಲಿ...

ನೀವು ನಮ್ಮ ಚಿಂತನೆ–ಗುರಿಯನ್ನು ಬಲಪಡಿಸುವಿರೆಂದು ನಮಗೆ ನಂಬಿಕೆ ಇದೆ. ನೀವು ಓದುತ್ತಿರುವ ಮಾನಸವನ್ನು ಹೊರತರಲು ನಿಮ್ಮ ಆರ್ಥಿಕ ನೆರವು, ಪ್ರೋತ್ಸಾಹ ಮುಖ್ಯ. ಮಾನಸವನ್ನು ಮತ್ತೊಮ್ಮೆ ನಿರಂತರವಾಗಿ ಜೀವಂತವಾಗಿಡಲು ಸಹೃದಯ ಓದುಗರ ಬೆಂಬಲದ ಅಗತ್ಯವಿದೆ. ನೀವು ಯಾವುದಾದರೊಂದು ಬಗೆಯಲ್ಲಿ ನಮ್ಮೊಂದಿಗೆ ಕೈಜೋಡಿಸಬಹುದು.

- ◆ ಪ್ರತಿ ತಿಂಗಳಿಗೊಮ್ಮೆ ಲೇಖನಗಳನ್ನು ಬರೆಯಿರಿ ಇಲ್ಲವೇ ಬೇರೆಯವರಿಂದ ಬರೆಯಿಸಿ ಕಳುಹಿಸಿ.
- ◆ ವಾರ್ಷಿಕ ಚಂದಾದಾರರಾಗಿ ಮತ್ತು ಇನ್ನಷ್ಟು ಚಂದಾದಾರರನ್ನು ಪರಿಚಯಿಸಿ.
- ◆ ಮಾನಸದ ಒಂದು ತಿಂಗಳ ಮುದ್ರಣದ ಖರ್ಚು ರೂ. 7,000/– ರಲ್ಲಿ ಪೂರ್ತಿ ಇಲ್ಲವೇ ನಿಮಗೆ ಸಾಧ್ಯವಾದಷ್ಟು ಹಣವನ್ನು ಕೊಟ್ಟು ಬೆಂಬಲಿಸಿ ಕೈ ಜೋಡಿಸುವಿರೆಂಬ ಆಶಯದೊಂದಿಗೆ,

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

E-mail: nammamanasa@gmail.com
Contact: Disha K.R.: 9880467372, Lekha: 9686757053, Samudyatha : 88922 48351, Nirmala K.: 98869 18910

ಚಿತ್ರಕೃಪೆ: ಅಂತರಜಾಲ

ಸಂಪಾದಕೀಯ

ಹೊಸ ಹೆಜ್ಜೆಯೊಂದಿಗೆ...

ನಮ್ಮ ಮಾನಸ ನಿಮ್ಮೆಲ್ಲರ ಮಾನಸವಾಗಿ ಬಹು ಕಾಲದಿಂದಲೂ ನಡೆದುಬಂದಿದೆ. ಸ್ತ್ರೀ ಅಸ್ತಿತ್ವದೆಡೆಗೆ ನಮ್ಮೆಲ್ಲರನ್ನು ಒಗ್ಗೂಡಿಸುತ್ತಾ ತನ್ನ ಉದ್ದೇಶವನ್ನು ಪೂರೈಸುವಲ್ಲಿ ಪತ್ರಿಕೆ ಯಶಸ್ವಿಯಾಗಿದೆ. ಎರಡೂವರೆ ದಶಕಗಳಿಂದ ನಡೆದು ಬಂದಿರುವ 'ನಮ್ಮ ಮಾನಸ' ಪತ್ರಿಕೆಯನ್ನು ಮರು ಅವಲೋಕಿಸುವ, ನಮ್ಮನ್ನು ನಾವು ಮಹಿಳಾ ಚಳವಳಿಯೊಂದಿಗೆ ತೊಡಗಿಸಿಕೊಳ್ಳುವ, ನಮ್ಮ ಹಿರಿಯ ಮಹಿಳಾ ಸ್ತ್ರೀವಾದಿ ಕಾರ್ಯಕರ್ತೆಯರ ಗಮನಾರ್ಹ ಕೆಲಸವನ್ನು ಮುಂದುವರಿಸಿ ಕೊಂಡು ಹೋಗುವ ನಿಟ್ಟಿನಲ್ಲಿ 'ನಮ್ಮ ಮಾನಸ' ಪತ್ರಿಕೆಯನ್ನು ಪ್ರಕಟಿಸುವ ಜವಾಬ್ದಾರಿಯನ್ನು ನಾವು ಕೈಗೆತ್ತಿಕೊಂಡೆವು. ಪತ್ರಿಕೆಯನ್ನು ಹೊರತರುವಲ್ಲಿ ಯಶಸ್ವಿಯಾಗುವೆವೋ ಇಲ್ಲವೋ ಎಂಬ ಅಳುಕಿನಿಂದಲೇ ಮಾನಸದ ಜವಾಬ್ದಾರಿಯನ್ನು ಹೊತ್ತ ನಮಗೆ ಲೇಖನ, ಧನ, ಹಾಗೂ ಪ್ರೋತ್ಸಾಹದ ಮೂಲಕ ನಮ್ಮೊಟ್ಟಿಗೆ ನೀವು ಹೆಜ್ಜೆಯಿಡುತ್ತಾ ಬಂದಿದ್ದೀರಿ. ಅದಕ್ಕಾಗಿ ನಿಮ್ಮೆಲ್ಲರಿಗೂ ಕೃತಜ್ಞತೆಗಳು. ಸುಮಾರು ಹತ್ತು ತಿಂಗಳು 'ನಮ್ಮ ಮಾನಸ' ಪತ್ರಿಕೆಯನ್ನು ಹೊರತಂದ ಸಂತೋಷ ಹೊಸ ತಂಡದ ನಮ್ಮೆಲ್ಲರಿಗೂ ಇದೆ.

ಹೊಸ ವರುಷದ ಈ ಶುಭ ಆರಂಭದಲ್ಲಿ ಮಾನಸದ ಸಿದ್ಧಾಂತವಾಗಿರುವ ಸ್ವಾಯತ್ತತೆ ಹಾಗೂ ಪಾರದರ್ಶಕತ್ವದಂತೆ ಮಾನಸ ಪತ್ರಿಕೆಯನ್ನು ಹೊರತರುವಲ್ಲಿ ನಮಗಾದ ಅನುಭವ ಹಾಗೂ ನಮ್ಮ ಮುಂದಿನ ಹೆಜ್ಜೆಯ ಆಶಯವನ್ನು ನಿಮ್ಮ ಮುಂದಿಡಲು ಇಚ್ಛಿಸುತ್ತೇವೆ...

ಕೇವಲ ಪತ್ರಿಕೆ ಉಳಿಯಬೇಕೆಂಬ ಉದ್ದೇಶದಿಂದ ಮಾನಸದೆಡೆಗೆ ಹೆಜ್ಜೆಯಿಟ್ಟ ನಾವು ಮಾನಸದ ಪ್ರತಿಯೊಂದು ಸಭೆ, ಚರ್ಚೆ, ಚಟುವಟಿಕೆ ಹಾಗೂ ತಿಂಗಳ ಪತ್ರಿಕೆಯಿಂದ ಮಹಿಳಾ ಚಳವಳಿಯೊಂದಿಗೆ ನಮ್ಮನ್ನು ಗುರುತಿಸಿಕೊಳ್ಳಬೇಕೆಂಬ ಉದ್ದೇಶ ಹಾಗೂ ಹಂಬಲ ಹೆಚ್ಚುತ್ತಾ ಬಂದಿದೆ. ಈ ಹತ್ತು ತಿಂಗಳಲ್ಲಿ ನಾವು ಮಾನಸದಿಂದ ಕಲಿತದ್ದು ಬಹಳಷ್ಟಿದೆ. ಮುಖ್ಯವಾಗಿ ಪತ್ರಿಕೆಯ ತಾಂತ್ರಿಕ ಕೆಲಸವನ್ನೇ ಪೂರೈಸಿಕೊಂಡು ಬಂದಿರುವ ನಮಗೆ ಪತ್ರಿಕೆಯ ಸಿದ್ಧಾಂತದೊಂದಿಗೆ ಗುರುತಿಸಿಕೊಳ್ಳಲೇಬೇಕೆಂಬ ಆಕಾಂಕ್ಷೆ ಪ್ರಬಲವಾಗಿದೆ. ಪತ್ರಿಕೆಯೊಂದಿಗೆ ಕೆಲಸ ಮಾಡುವ ಮೂಲಕ ನಮಗೆ ಅರಿಯದೇ ಹೋದ ಎಷ್ಟೋ ಸಂಗತಿಗಳನ್ನು ಅರಿತೆವು. ಮಹಿಳೆಯರ ಮೇಲೆ ನಡೆದುಬರುತ್ತಲೇ ಇರುವ ದೌರ್ಜನ್ಯ, ಶೋಷಣೆ, ಅತ್ಯಾಚಾರಗಳ ಬಗ್ಗೆ ತಾತ್ವಿಕವಾಗಿ ತಿಳಿದುಕೊಂಡ ನಮಗೆ ಮಾನಸದ ಮೂಲಕ ಅದರ ಕಾರ್ಯರೂಪದ ದರ್ಶನದ ಜೊತೆಗೆ ಸಮಸ್ಯೆಯೊಂದಿಗೆ ನಮ್ಮನ್ನು ಗುರುತಿಸಿಕೊಳ್ಳಲು ಸಾಧ್ಯವಾಯಿತು. ಗಾರ್ಮೆಂಟ್ಸ್, ಪೌರ ಕಾರ್ಮಿಕ, ಕಾರ್ಪೊರೇಟ್, ಥರ್ಡ್ ಜೆಂಡರ್, ಸೆಕ್ಸ್ ವರ್ಕರ್ ಹೀಗೆ ಎಲ್ಲಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು ಎದುರಿಸುತ್ತಿರುವ ಶೋಷಣೆಯನ್ನು ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ಹೊಸ ಹೊಸ ಕ್ರೌರ್ಯದ ಪರಿಚಯ ನಮಗಾಯಿತು. ಈ ಎಲ್ಲಾ ವಿಷಯದ ಅರಿವಿನ ಸಾಧ್ಯತೆ ನಮ್ಮೆಲ್ಲರಿಗೂ ಮಾನಸದಿಂದಲೇ ಆದದ್ದೆಂದರೆ ತಪ್ಪಾಗಲಾರದು.

ಮಹಿಳಾ ಚಳವಳಿಯ ಪರಿಚಯವಾಗದಿದ್ದರೆ ಈ ಎಲ್ಲಾ ವಿಷಯಗಳ ಪರಿಚಯವು ನಮಗಾಗದೇ ಉಳಿಯುವ ಸಾಧ್ಯತೆಗಳು ಹೆಚ್ಚೆಂಬುದೇ ನಮ್ಮ ನಂಬಿಕೆ. ತಾತ್ವಿಕ ಹಾಗೂ ಕಾರ್ಯರೂಪದ ನಡುವಿರುವ ಅಂತರ ಹಾಗೂ ಪ್ರಸ್ತುತ ಸ್ಪರ್ಧಾ ಜಗತ್ತಿನ ಶಿಕ್ಷಣ ವ್ಯವಸ್ಥೆ ಬೀರುತ್ತಿರುವ ಪರಿಣಾಮದಿಂದಾಗಿ ಯುವಜನತೆಯ ಕ್ರಿಯಾಶೀಲತೆ, ಸ್ವಂತಿಕೆ, ವೈಚಾರಿಕ ಪ್ರಜ್ಞೆ, ಸೃಜನಶೀಲತೆ ಕಳೆದುಹೋಗುವುದರ ಜೊತೆಗೆ ಜೀವನ್ಮುಖಿ ಮನೋಭಾವನೆ ನಶಿಸಿಹೋಗುತ್ತಿದೆ.

ಈ ಹತ್ತು ತಿಂಗಳ ಮಾನಸದೊಂದಿಗಿನ ಒಡನಾಟ ಯುವ ಪೀಳಿಗೆಯನ್ನು ಒಗ್ಗೂಡಿಸುವ, ಮಹಿಳಾ ಸಮಸ್ಯೆಗಳೆಡೆಗೆ ಸಂವೇದನಾಶೀಲತೆಯನ್ನು ಹೆಚ್ಚಿಸುವ, ಸ್ತ್ರೀ ಅಸ್ತಿತ್ವದ ಅರಿವು ಮೂಡಿಸುವ ಹಾಗೂ ಸಮಸ್ಯೆಯ ಕಠೋರತೆಯನ್ನು ಅರಿಯುವುದರ ಜೊತೆಗೆ ಸಮಸ್ಯೆಯೊಂದಿಗೆ ಗುರುತಿಸಿಕೊಳ್ಳಬೇಕಾಗಿರುವ ನಿಟ್ಟಿನೆಡೆಗೆ ಮುಂದಿನ ಹೆಜ್ಜೆ ನಮ್ಮದಾಗಬೇಕೆಂಬುದು ಮಾನಸದ ಹೊಸ ಚಿಗುರಾದ ನಮ್ಮ ಆಶಯ.

ಪ್ರಾರಂಭದಿಂದಲೂ ವಿವಿಧ ಹಂತದಲ್ಲಿ ಸ್ವರೂಪ ಪಡೆಯುತ್ತಾ ಬಂದಿರುವ ಮಾನಸ ಯುವ ಜನತೆಯ ಧ್ವನಿಯಾಗಬೇಕೆಂಬುದು ನಮ್ಮ ಹಂಬಲ. ಇಷ್ಟು ದೂರ ನಡೆದು ಬಂದಿರುವ ಮಾನಸಕ್ಕೆ ಈಗಾಗಲೇ ಓದುಗರ ಬಳಗವಿದೆ. ಮಹಿಳಾ ವಿಚಾರಗಳಿಗೆ ಕನ್ನಡಿಯಾಗಿರುವ ಮಾನಸ ಪತ್ರಿಕೆ ಈಗಾಗಲೇ ಸಾಕಷ್ಟುವಿಚಾರ ಗಳನ್ನು ಪ್ರತಿಬಿಂಬಿಸಿದೆ. ಈ ಎಲ್ಲಾ ಪ್ರತಿಬಿಂಬಿತವಾಗಿರುವ ವಿಚಾರಗಳೆಡೆಗೆ ಕಣ್ತೆರೆಯುತ್ತಿರುವ ನಮಗೆ ಪತ್ರಿಕೆಯ ಈಗಿನ ವೈಚಾರಿಕ ನೆಲೆಯನ್ನು ಅರ್ಥೈಸಿಕೊಳ್ಳುವಲ್ಲಿ ಕಷ್ಟವಾಗುತ್ತಿರುವುದು ಸುಳ್ಳಲ್ಲ. ಈಗಾಗಲೇ ಒಂದು ಮಟ್ಟದಲ್ಲಿ ಬೆಳೆದು ನಿಂತಿರುವ ಮಾನಸದ ವಿಚಾರವನ್ನು ಹೊಸ ಕಣ್ಣುಗಳಿಂದ ನೋಡುತ್ತಿರುವ ನಮಗೆ ಅದರ ಮೂಲ ಬೇರನ್ನು ಅರ್ಥೈಸಿಕೊಂಡು ನಮ್ಮದಾಗಿಸಿ ಕೊಳ್ಳಬೇಕೆಂಬುದು ನಮ್ಮ ಉದ್ದೇವಾಗಿದೆ. ಸ್ತ್ರೀವಾದ ದೃಷ್ಟಿಯನ್ನು ಅರ್ಥಮಾಡಿ ಕೊಳ್ಳುವುದರ ಜೊತೆಗೆ ನಮ್ಮ ಪೀಳಿಗೆಯ ಯುವ ಜನರಿಗೂ ಅದನ್ನು ತಲುಪಿಸಬೇಕೆಂಬುದು ನಮ್ಮ ಅಭಿಲಾಷೆ.

ಈ ನಮ್ಮ ಉದ್ದೇಶದ ಯಶಸ್ವಿಗಾಗಿ 'ನಮ್ಮ ಮಾನಸ' ಪತ್ರಿಕೆಯ ಸ್ವರೂಪವನ್ನು ಬದಲಿಸಬೇಕಾಗಿರುವುದು ಅಗತ್ಯ. ಓದುವ ಹವ್ಯಾಸ ಕಳೆದು ಹೋಗಿರುವ ಈ ಕಾಲಕ್ಕೆ ಪತ್ರಿಕೆಯೊಂದರಿಂದಲೇ ಅರಿವು ಮೂಡಿಸುವುದು ಸಾಧ್ಯವಾಗದು. ಆದ್ದರಿಂದ ಪತ್ರಿಕೆಯೊಂದಿಗೆ ಬೀದಿ ನಾಟಕ, ಚಲನಚಿತ್ರ ಪ್ರದರ್ಶನ, ಚರ್ಚೆ, ಶಿಬಿರ, ಕಾರ್ಯಾಗಾರ ಹಾಗೂ ಹೋರಾಟಗಳಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಯುವ ಪೀಳಿಗೆಯವರನ್ನು ಒಗ್ಗೂಡಿಸಲು ಮಾನಸ ಒಂದು ವೇದಿಕೆಯಾಗಬೇಕೆಂಬುದು ನಮ್ಮ ಆಲೋಚನೆ.

ಒಂದು ತಿಂಗಳಿನ ಕಾಲಾವಕಾಶದಲ್ಲಿ ಈ ಎರಡನ್ನೂ ಸರಿದೂಗಿಸಿಕೊಂಡು ಹೋಗುವುದು ವಿದ್ಯಾರ್ಥಿಗಳಾದ ನಮಗೂ ಶ್ರಮದ ಕೆಲಸವೇ. ಆದ್ದರಿಂದ ಪತ್ರಿಕೆಯನ್ನು ಹೊಸ ಸ್ವರೂಪ ದೊಂದಿಗೆ ಮೂರು ತಿಂಗಳಿಗೊಮ್ಮೆ ತರುವುದಾಗಿಯೂ ಹಾಗೂ ಚಟುವಟಿಕೆಗಳನ್ನು ತಿಂಗಳಿಗೊಮ್ಮೆ ಹಮ್ಮಿಕೊಳ್ಳುವುದಾಗಿಯೂ ನಿರ್ಧರಿಸಿರುವೆವು. ನಮ್ಮ ಈ ನಿರ್ಧಾರಕ್ಕೆ ನಿಮ್ಮೆಲ್ಲರ ಪ್ರೀತಿ, ಬೆಂಬಲ ಹಾಗೂ ಪ್ರೋತ್ಸಾಹ ನಿರಂತರವಾಗಿ ಮುಂದುವರೆಯುವುದೆಂದು ನಂಬಿರುವೆವು. ಚಟುವಟಿಕೆಯು ಮಾನಸದ ಕಾರ್ಯರೂಪದ ಭಾಗವಾಗಿ ಹಾಗೂ ಪತ್ರಿಕೆ ತಾತ್ವಿಕ ಭಾಗವಾಗಿ ಯುವ ಪೀಳಿಗೆಗೆ ಅಗತ್ಯವಿರುವ ಕ್ರಿಯಾತ್ಮಕ ಸೃಜನಶೀಲತೆಯ ಉಳಿವಿನೆಡೆಗೆ ಮಾನಸ ನಡೆಯಬೇಕೆಂಬುದು ಈ ಕಿರಿಯರ ಕನಸು.

ಈ ಕನಸನ್ನು ಪೂರೈಸುವಲ್ಲಿ ನಮ್ಮೊಂದಿಗೆ ನೀವು ಕೈಜೋಡಿಸ ಬೇಕೆಂಬುದು ನಮ್ಮ ಅಭಿಲಾಷೆ. ಓದುಗರು ಮಾನಸಕ್ಕೆ ಧನಸಹಾಯ, ಲೇಖನ–ಕವನಗಳನ್ನು ಕಳುಹಿಸುವುದರ ಮೂಲಕ ಪ್ರೋತ್ಸಾಹಿಸಿ. ಪತ್ರಿಕೆ ಬೇಕಾಗಿರುವವರು ಮತ್ತೊಮ್ಮೆ ಚಂದಾ ನವೀಕರಿಸಿಕೊಳ್ಳುವುದರ ಜೊತೆಗೆ ಜನವರಿ 2013 ರಿಂದ ಮಾನಸ ವತಿಯಿಂದ ಹಮ್ಮಿಕೊಳ್ಳಲಾಗುವ ಚಟುವಟಿಕೆಗಳ ಮಾಹಿತಿ ಪಡೆಯಲು ನಿಮ್ಮ ದೂರವಾಣಿ, ವಿಳಾಸ, ಇ–ಮೇಲ್ ಐಡಿಯನ್ನು ನಮಗೆ ದೂರವಾಣಿ, ಎಸ್.ಎಂ.ಎಸ್., ಇ–ಮೇಲ್ ಅಥವಾ ಪತ್ರದ ಮೂಲಕ ಕಳುಹಿಸಿ ನಿಮ್ಮ ಸದಸ್ಯತ್ವವನ್ನು ದೃಢಪಡಿಸಬೇಕಾಗಿ ವಿನಂತಿ. ❑



ಸಂಶಯ

ಹಿಂಡ ಬೇಡ ನನ್ನ
ಯಾರಾದರು ನಿನ್ನ ಕೇಳ್ಯಾರು
ಹೊಡೆಯಬೇಡ ನನ್ನ
ಯಾರಾದರು ನಿನ್ನ ಹೊಡೆದಾರು

ಹೊರಿಸ ಬೇಡ ಆಪಾದನೆ
ಆಪಾದನೆಯಲ್ಲಿ ನಿನ್ನ ಸಿಲುಕಿಸ್ಯಾರು
ಕಾಡ ಬೇಡ ನನ್ನ
ಕಾಡ್ಯಾರು ಯಾರಾದರು ನಿನ್ನ

ಅರಿತುಕೊ ನನ್ನ
ಬೇರೆಯವರು ಅರಿಯುವ ಮುನ್ನ
ಒಲಿಸಿಕೊ ನನ್ನ
ಬೇರೆಯವರು ಒಲಿಸಿಕೊಳ್ಳುವ ಮುನ್ನ

'ಸಂಶಯದಿಂದ ನೋಡಬೇಡ ನನ್ನ
ಸಂಶಯದಲ್ಲಿಯೇ ಕೊನೆ ಉಸಿರು
ಎಳದಿಯೇ ನೀ ನನ್ನ

■ ಸುರೇಖಾ ಜಿ. ರಾಠೋಡ
ಕ.ರಾ.ಮ.ವಿ. ಬಿಜಾಪುರ



ಮಹಿಳಾ ಅನನ್ಯತೆಗೆ ಉತ್ತರವಾದ 'ಜೀವನದ ಹೋರಾಟ'

■ ಶೈಲಜ .ಕೆ

ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಮಹಿಳಾ ಅಸ್ತಿತ್ವ ಹಾಗೂ ಅನನ್ಯತೆಯನ್ನು ಸಾರುವ ಒಂದು ಅಪೂರ್ವ ಸಾರ್ವಕಾಲಿಕ ದಾಖಲೆಯೆನಿಸಿಕೊಂಡ ಕೃತಿ ವಾಸಂತಿಬಾಯಿ ಪಡುಕೋಣೆ (1908–1995) ಅವರ ಆತ್ಮಕಥನ 'ಜೀವನದ ಹೋರಾಟ' (ಸಾಹಿತ್ಯದೂತ, ಬೆಂಗಳೂರು, 1977). ಇದು ಕನ್ನಡದ ಮಹಿಳಾ ಆತ್ಮಕಥಾನಕಗಳ ಪರಂಪರೆಯ ಆರಂಭ ಕಾಲದಲ್ಲಿ ರಚನೆಗೊಂಡ ಅಸಾಧಾರಣ ಕೃತಿ. ಕನ್ನಡದ ಆತ್ಮಕಥನಗಳಲ್ಲೇ ವಿಭಿನ್ನ ನೆಲೆಯಲ್ಲಿ ನಿಲ್ಲುವ, ಮಹಿಳಾ ಜೀವನದ ಒಳಬೇಗುದಿಗಳನ್ನೂ, ಕೌಟುಂಬಿಕ ಇಕ್ಕಟ್ಟುಗಳನ್ನೂ ಬದುಕು ಹೈರಾಣಾಗಿಸುವ ದುಡಿಮೆಯನ್ನೂ, ತಮ್ಮ ಹುಟ್ಟಿನಿಂದ ಆರಂಭಿಸಿ ತಮ್ಮ ಜೀವಿತದ ಕೊನೆಯ ತನಕ ತಾವು ನಡೆಸಿದ ಹೋರಾಟಗಳನ್ನೂ ಧೈರ್ಯ ಮತ್ತು ಮುಕ್ತತೆಯಿಂದ ಬಿಚ್ಚಿಟ್ಟದ್ದು ಬೆರಗುಗೊಳಿಸುವ ಸಂಗತಿಯಾಗಿದೆ.

ತಾಯ್ತಂದೆಗೆ ಆರನೇ ಮಗುವಾಗಿ ಜನಿಸಿದಾಕೆ ವಾಸಂತಿ. ತನಗೆ ಮೂರು ವರ್ಷವಾಗುವಾಗಲೇ ತನ್ನ ತಂದೆಯ ಆರ್ಥಿಕ ದುಸ್ಥಿತಿಯಿಂದಾಗಿ ಮತ್ತು ಆ ಸಂದರ್ಭದಲ್ಲಿ ತಾಯ್ತಂದೆಯರಲ್ಲಿ ಹುಟ್ಟಿದ ವಿರಸದ ಪರಿಣಾಮವಾಗಿ ತನ್ನ ಬಾಲ್ಯಕಾಲವನ್ನು ಮಂಗಳೂರು, ಬೊಂಬೈ, ಬಾಗಲಕೋಟೆ, ಸಿಕಂದರಾಬಾದ್, ಮದ್ರಾಸ್ ಎಂದು ಊರೂರು ಅಲೆಯುತ್ತಾ ನೆಂಟರಿಷ್ಟರ ಮನೆಗಳಲ್ಲಿ ಕಳೆಯಬೇಕಾಗಿ ಬಂತು. ಇದರೊಂದಿಗೆ ಕುಂಟುತ್ತಾ ಸಾಗಿದ ವಿದ್ಯಾಭ್ಯಾಸ. 'ಹೆಣ್ಣೆಂದು' ಅಮ್ಮನ ನಿಯಮಾವಳಿಗಳೂ ಜೊತೆ ಸೇರಿಕೊಂಡುದರಿಂದ ವಾಸಂತಿಯವರಲ್ಲಿ ಎಳೆವಯಸ್ಸಿನಿಂದಲೇ ವಯಸ್ಸಿಗೆ ಮೀರಿದ ಗಂಭೀರತೆಯೂ, ತಮ್ಮಲ್ಲೇ ತಾವು ಆಲೋಚಿಸುವ ಸ್ವಭಾವವೂ ಅವರನ್ನು ಆವರಿಸಿಕೊಂಡಿತು. ಐದನೇ ತರಗತಿ ಮುಗಿದು ಆರನೇ ತರಗತಿಗೆ ಕಾಲಿಟ್ಟಾಗ ವಾಸಂತಿ ಪ್ರಾಯ 11 ತುಂಬಿ 12. ಮನೆಯಲ್ಲಿ ಮದುವೆಯ ಪ್ರಸ್ತಾಪ. ಗಂಡು–ಹೆಣ್ಣಿನ ಸಂಬಂಧದ ಬಗ್ಗೆ ಯಾವ ತಿಳಿವೂ ಇಲ್ಲದ ಮುಗ್ಧ ಮನಸ್ಸು, ಆಡುವ ವಯಸ್ಸಿನಲ್ಲಿ ಮದುವೆ, ವಿದ್ಯೆಗೆ ಕತ್ತರಿ. 'ಅಂದಿನ ಕಾಲಕ್ಕೆ ಮದುವೆಗೆ ಮುಂಚೆ ಮೈನೆರೆದರೆ ಅದು ಸಮಾಜದ ದೃಷ್ಟಿಯಲ್ಲಿ ಅಪರಾಧ. ಯಾರಿಗೂ ತಿಳಿಯದಂತೆ ಅದನ್ನು ರಹಸ್ಯವಾಗಿಯೇ ಮುಚ್ಚಿಡುವ ರೂಢಿಯಿತ್ತು. ಅದಕ್ಕೆ ಹುಡುಗಿಯರಿಗೆ ಅದಷ್ಟು ಬೇಗ ಮದುವೆ ಮಾಡುತ್ತಿದ್ದುದರಿಂದಲೇ ತನಗೆ ಈ ಮದುವೆ' ಎಂದು ವಾಸಂತಿ ಭಾವಿಸಿದರು. ಯಾಕೆಂದರೆ ಇದೇ ಸಂದರ್ಭದಲ್ಲಿ ವಾಸಂತಿಯ ಸಹೋದರರು ಉನ್ನತ ವಿದ್ಯಾಭ್ಯಾಸವನ್ನು ಪಡೆದಿದ್ದರು. ಒಬ್ಬ ಅಣ್ಣ ಇಂಜಿನಿಯರಿಂಗ್ ಪದವೀಧರನಾಗಿದ್ದ. ಅಂದಿನ ಕಾಲದ ಗಂಡು ಮಕ್ಕಳೆಲ್ಲಾ ಉನ್ನತ ವಿದ್ಯಾಭ್ಯಾಸಕ್ಕಾಗಿ ಪರ ಊರು, ಪರದೇಶಗಳಿಗೆ ಹೋಗುವುದು ಸರ್ವೇಸಾಮಾನ್ಯವಾಗಿತ್ತು. ಆದರೆ ಮಧ್ಯಮ, ಕೆಳ ವರ್ಗದ ಹೆಣ್ಣು ಮಕ್ಕಳಿಗೆ ಆ ಹೊತ್ತಿನಲ್ಲಿ 'ಮನೆ', 'ಮದುವೆ', 'ಮಕ್ಕಳು' ಎಂಬುದು ಬಂಧನವಾಯಿತು. ವಿದ್ಯಾಭ್ಯಾಸವೆಂಬುದು ಗಗನ ಕುಸುಮವಾಯಿತು ಎಂಬ ವಿಚಾರ ಇಲ್ಲಿ ಅತಿ ಮುಖ್ಯ.

'ನನಗೆ ಮಾತ್ರ ಮದುವೆಯ ನಿಜವಾದ ಕಾರಣ ಗೊತ್ತಿರಲಿಲ್ಲ' ಎನ್ನುವ ವಾಸಂತಿ "ಮದುವೆ ಎಂದರೆ ಗೊಂಬೆಯಾಟ ಎಂದೇ ಭಾವಿಸಿದ್ದೆ. ಮೈತುಂಬಾ ಒಡವೆ ವಸ್ತು ಹಾಕಿಕೊಳ್ಳುವುದು, ಉಟ್ಟುಕೊಳ್ಳಲು ಸೀರೆ ತರುವರು. . . . ವಿಜೃಂಭಣೆಯಿಂದ ಮದುವೆಯಾಗುವುದು ಎಂಬುದರ ಕಲ್ಪನೆಯ ವಿನಹ ಮದುವೆಯ ವಿಷಯ ಬೇರೆ ಏನೊಂದೂ ಗೊತ್ತಿರಲಿಲ್ಲ' (ಪು.39).

ಮದುವೆಯಾದ ಮೇಲೆ ಗಂಡ ಬರೆಯುತ್ತಿದ್ದ ಉದ್ದುದ್ದ ಪ್ರೇಮಪತ್ರಗಳಿಗೆ ಸರಿಯಾಗಿ ಸ್ಪಂದಿಸದ ವಯಸ್ಸು ವಾಸಂತಿಯದು. ವೈವಾಹಿಕ ಜೀವನವೆಂಬುದು ಆ ಹೊತ್ತಿಗೆ ವಾಸಂತಿಗೆ ದಿಗಿಲು ತಂದಿತು. 'ಆಗಿನ ಕಾಲದ ಪತ್ನಿಯರು ಪತಿ ಎಂದರೆ ದೇವರು ಎಂಬ ಭಾವನೆ ಇರುವವರು. . . ನಮ್ಮವರಿಗೆ ನಾನು ಸದಾ ಸರಸ ಸಲ್ಲಾಪ ಮಾಡಬೇಕೆಂಬ ಆಸೆ. ನನಗೆ ದಿಗಿಲು, ಸಂಕೋಚ. . . ಅವರು ಸಿಟ್ಟಾಗಿ ಬಾಯಿಗೆ ಬಂದಂತೆ ಬೈಯುವರು. . . . ಪತಿಯ ಆಜ್ಞೆಯನ್ನು ಶಿರಸಾವಹಿಸುವುದು ಪತ್ನಿಯ ಧರ್ಮ ಎಂಬುದೊಂದೇ ನನಗೆ ಹೇಳಿಕೊಟ್ಟಿದ್ದರು. . . . . . ಇವರ ಚಂಚಲ ಸ್ವಭಾವ, ಹಗಲು ರಾತ್ರಿ ನಾನು ಅವರ ಬಳಿಯಲ್ಲೇ ಇರಬೇಕೆಂಬ ಹಠ ಮುಂತಾದ್ದರಿಂದ ಮನೆಯಲ್ಲಿ ಕಲಹ ಹೆಚ್ಚಾಗುತ್ತಾ ಬಂತು' (ಪು.38–44). ಇಂತಹ ಅಂತರಂಗದ ಮಾತುಗಳನ್ನು ವಾಸಂತಿ ಯಾವೊಂದು ಸಂಕೋಚವೂ ಇಲ್ಲದೆ ಹೇಳಿದ್ದು ವಿಶೇಷ. ದಾಂಪತ್ಯ ಜೀವನದ ಬಗ್ಗೆ ಪ್ರಾರಂಭದಲ್ಲಿ

'ಜೀವನದ ಹೋರಾಟ'

ಆತ್ಮಕಥನ

ಲೇಖಕರು : ವಾಸಂತಿಬಾಯಿ ಪಡುಕೋಣೆ
ವರ್ಷ : 1977
ಪ್ರಕಾಶನ : **ಸಾಹಿತ್ಯದೂತ**, ಬೆಂಗಳೂರು

ವಾಸಂತಿಯಲ್ಲಿ ಭಯ, ಗೊಂದಲ, ಅಜ್ಞಾನಗಳೇ ತುಂಬಿದ್ದವು. ಹೀಗೆ ಚಿಕ್ಕಪ್ರಾಯದಲ್ಲಾದ ಮದುವೆಯಿಂದ ತಮ್ಮ ಭವಿಷ್ಯದ ಜೀವನದಲ್ಲಿ ಸಾಕಷ್ಟು ತೊಳಲಾಡಬೇಕಾಗಿ ಬಂತು.

ವೈವಾಹಿಕ ಬದುಕಿನ ಆರಂಭಿಕ ಹಂತದಲ್ಲಿ ತಮ್ಮ ನಾದಿನಿಯ ಮನೆಯಲ್ಲಿ ಆಶ್ರಯವನ್ನು ಪಡೆದುಕೊಂಡರು. 'ಕೆಲಸಕ್ಕೆ ಹೋಗಲು ಇಷ್ಟವಿಲ್ಲದ ಪತಿಯ' ಸಿಗರೇಟು ಮುಂತಾದ ಖರ್ಚಿಗೆ ವಾಸಂತಿ ತನ್ನ ಕೈಯಲ್ಲಿದ್ದ ಚಿಕ್ಕ ಚಿಕ್ಕ ಆಭರಣಗಳನ್ನು ಮಾರಿ ಹಣ ಕೊಡಬೇಕಾದ ಸಂದರ್ಭ ಒದಗಿಬಂತು. ಜತೆಗೆ ಪತ್ನಿಯ ಬಗ್ಗೆ ಗಂಡನಿಗೆ ಎಲ್ಲಿಲ್ಲದ ಸಂಶಯ ಬೇರೆ. ಆಕೆ ಇತರರೊಂದಿಗೆ ಮಾತನಾಡುವುದನ್ನು ಆತ ಸಹಿಸುತ್ತಿರಲಿಲ್ಲ. ಯದ್ವಾತದ್ವಾ ಬೈಯುತ್ತಿದ್ದರು, ವಿನಾ ಕಾರಣ ಜಗಳ ಮಾಡುತ್ತಿದ್ದರು. ಈ ಅವಸ್ಥೆಯಲ್ಲಿ ವಾಸಂತಿ ಒಮ್ಮೆ ಆತ್ಮಹತ್ಯೆಗೂ ಪ್ರಯತ್ನಿಸಿದರು.

ಮುಂದೆ ಸ್ವಂತ ಮನೆಯ ಬದುಕು ಆರಂಭವಾಯಿತು. ವಾಸಂತಿಯವರದ್ದು ಸರಿಯಾದ ತಿಳುವಳಿಕೆ, ಪರಸ್ಪರ ಅರ್ಥವಂತಿಕೆಯಿಲ್ಲದ ದಾಂಪತ್ಯವಾಗಿತ್ತು. 'ಬಾಣಂತನವೆಂಬುದರ ಅರ್ಥವೇ ಗೊತ್ತಿಲ್ಲದ ಮೂಢಳು ನಾನು' ಎನ್ನುವ ವಾಸಂತಿ ತಮ್ಮ ಹದಿನಾರನೆಯ ವಯಸ್ಸಿಗೆ ಹೊರುವ, ಹೆರುವ ಕೆಲಸಕ್ಕೆ ದೇಹವನ್ನೊಡ್ಡಿಕೊಳ್ಳಬೇಕಾಗಿ ಬಂತು. ಮೂವತ್ತರೊಳಗೆ ತಮಗೆ ಹುಟ್ಟಿದ 6 ಮಕ್ಕಳ ಹೊಣೆಗಾರಿಕೆ. ಈ ಕಾಲಾವಧಿಯಲ್ಲಿ ವಾಸಂತಿಯವರು ಅನುಭವಿಸಿದ ಕಷ್ಟನಷ್ಟಗಳು ಹಲವಾರು. ಜತೆಗೆ ಹಲವು ಊರುಗಳಲ್ಲಿ ವಾಸ್ತವ್ಯವನ್ನು ಬದಲಿಸಬೇಕಾಗಿ ಬಂತು. ಪ್ರತಿಭಾವಂತ ಗಂಡ ಶಿವಶಂಕರರಾವ್. ಅವರಿಗೆ ಉತ್ತಮ ಲೇಖನ ಶಕ್ತಿ ಇದ್ದು, ಕಾವ್ಯವನ್ನೂ, ಇಂಗ್ಲೀಷ್‌ನಲ್ಲಿ ಪ್ರಬಂಧಗಳನ್ನೂ ಬರೆಯುತ್ತಿದ್ದರು. ಆದರೆ ಒಂದೇ ಕಡೆ ನೆಲೆ ನಿಲ್ಲುವ ಬುದ್ಧಿ ಹಾಗೂ ಒಂದು ನಿರ್ದಿಷ್ಟ ನೌಕರಿ ಹೊಂದುವ ಆಸೆ ಅವರಿಗಿರಲಿಲ್ಲ. ಸಂಸಾರದ ಕುರಿತು ಬೇಜವಾಬ್ದಾರಿ ಹೊಂದಿದ ಪತಿಯಿಂದಾಗಿ ವಾಸಂತಿಯ ಬದುಕೇ ಒಂದು ಬಹು ದೊಡ್ಡ ಹೋರಾಟವಾಯಿತು. ತಮ್ಮ ಭವಿಷ್ಯ ಪೂರ್ತಿ ಊರಿಂದೂರಿಗೆ ಅಲೆಯುವ ಅಲೆಮಾರಿ ಬದುಕನ್ನು ಬಾಳಬೇಕಾಗಿ ಬಂದದ್ದು ವಾಸಂತಿ ಬಾಳಿನ ದುರಂತ. ಪದೇ ಪದೇ ತಮ್ಮ ಸಂಸಾರವನ್ನು ಆತಂಕದಲ್ಲಿ, ಬಡತನದಲ್ಲಿ ಸಿಕ್ಕಿಸುತ್ತಿದ್ದ ಗಂಡ. ಇದರಿಂದಾಗಿ ವಾಸಂತಿ ಪ್ರತಿ ಬಾರಿ ಗರ್ಭಿಣಿಯಾದಾಗಲೂ ಗರ್ಭಪಾತಕ್ಕಾಗಿ ಪ್ರಯತ್ನಿಸುತ್ತಿದ್ದರು. ತಾವು ಐದನೇ ಬಾರಿ ಗರ್ಭಿಣಿಯಾದಾಗ 'ಐದನೇ ಬಾರಿ ನಾನು ಗರ್ಭಿಣಿಯಾದೆ. ಯಾವ ಕೆಲಸ ಕೈಗೊಂಡರೂ ನನ್ನ ಪಾಲಿಗೆ ನಾನಾ ತರದ ಅಡ್ಡಿ ಆತಂಕಗಳು. ಏನೇ ಆದರೂ ಸಹಿಸಬೇಕಾಗುತ್ತಿತ್ತು. ನಾನಾದರೋ ಜೀವನದ ಜಂಜಾಟಕ್ಕೆ ಎಂದೋ ಬೇಸತ್ತಿದ್ದೆನು. ಪ್ರತಿಸಲ ಸಿಕ್ಕಿದ ಔಷಧಗಳನ್ನೋ, ಅಯೋಗ್ಯವಾದ ವಸ್ತುಗಳನ್ನೋ ಗರ್ಭಪಾತವಾಗಬೇಕೆಂದು ನುಂಗುತ್ತಿದ್ದರೂ ಏನೂ ಪ್ರಯೋಜನವಾಗಲಿಲ್ಲ. ಪ್ರತಿಯೊಂದು ಸಲವೂ ಏನೇ ಮಾಡಿದರೂ ಮುದ್ದಾದ ಮಗುವಿನ ತಾಯಾಗುತ್ತಿದ್ದೆ' (ಪು.106) ಎನ್ನುವ ಅವರಲ್ಲಿ ತಮ್ಮ ಸಂಸಾರದ ಬಗ್ಗೆ ಹುಟ್ಟಿದ ಹಲವು ಬಗೆಯ ನೋವು, ಹಿಂಸೆಗಳೆಲ್ಲಾ ಈ ರೀತಿಯ ಪ್ರತಿಭಟನೆಯಾಗಿ ಹೊರ ಹೊಮ್ಮಿದ್ದನ್ನು ಗುರುತಿಸಬಹುದು.



ವಾಸಂತಿ ತಮ್ಮ ಬದುಕಿನ ಹೆಜ್ಜೆ ಹೆಜ್ಜೆಗಳಲ್ಲಿ ಎದುರಾದ ನೂರಾರು ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿದರು. ಮನಸ್ಸಿನಲ್ಲಿ, ದೇಹದಲ್ಲಿ ಪುಟಿದೇಳುತ್ತಿರುವ ಛಲದಿಂದ, ಚೈತನ್ಯದಿಂದ ತನ್ನ ಕುಟುಂಬದ ಆರ್ಥಿಕ ಸಂಕಷ್ಟವನ್ನು ಹೋಗಲಾಡಿಸುವುದಕ್ಕಾಗಿ ತನ್ನ ಬದುಕನ್ನು ಪೂರ್ತಿ ದುಡಿತಕ್ಕೇ ಮೀಸಲಿಟ್ಟ ಅವರ ಸಾಹಸಗಾಥೆ ಮನಮಿಡಿಯುವಂತಹದ್ದು. ಕೌಟುಂಬಿಕವಾಗಿ, ಆರ್ಥಿಕವಾಗಿ ಎಷ್ಟೇ ಕಷ್ಟದಲ್ಲಿದ್ದರೂ ಜ್ಞಾನಾರ್ಜನೆಯ ಹಂಬಲ ಅವರಲ್ಲಿ ಆರಂಭದಿಂದ ಕೊನೆಯವರೆಗೂ ಇದ್ದುದನ್ನು ಈ ಆತ್ಮಕಥಾನಕ ಅನಾವರಣ ಮಾಡುತ್ತದೆ. ತಮ್ಮ ಮದುವೆಯ ಸಂದರ್ಭದಲ್ಲಿ ಐದನೇ ತರಗತಿಗೇ ಅವರ ವಿದ್ಯೆಗೆ ತೆರೆ ಬಿದ್ದಿತ್ತು. ನಂತರ ತಮ್ಮ ಅತ್ತಿಗೆಯಿಂದ ಇಂಗ್ಲಿಷ್ ಪಾಠವನ್ನು ಹೇಳಿಸಿಕೊಂಡರು. ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿದ ಸಂದರ್ಭದಲ್ಲಿ ಮನೆ ಹತ್ತಿರವಿದ್ದ ಕಾನ್ವೆಂಟಿಗೆ ಇಂಗ್ಲಿಷ್ ಪಾಠ ಕಲಿಯಲು ಹೋದರು. ಮೊದಲ ಮಗ ಗುರುದತ್ತನಿಗೆ ಒಂದು ವರ್ಷವಾದ ಮೇಲೆ ರಾಷ್ಟ್ರಭಾಷಾ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. ಮಂಗಳೂರಿನಲ್ಲಿರುವಾಗ ಕಡೆಂಗೋಡ್ಲು ಶಂಕರಭಟ್ಟರ ಸಂಪಾದಕತ್ವದಲ್ಲಿ ಬರುತ್ತಿದ್ದ ರಾಷ್ಟ್ರಬಂಧು ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಕಲ್ಕತ್ತದಲ್ಲಿರುವಾಗ ಮನೆಪಾಠ ಕೊಡುತ್ತಿದ್ದರು, ವಾಸಂತಿಯವರ ಸಾಂಸಾರಿಕ ಕಷ್ಟಗಳನ್ನು ಅರಿತ ಟ್ಯೂಷನ್ ವಿದ್ಯಾರ್ಥಿನಿಯರು ಅವರ ಮೇಲೆ ಕರುಣೆ ತೋರಿಸುತ್ತಿದ್ದುದಲ್ಲದೆ ಕೆಲವರು ಮೊದಲು ನಿಶ್ಚಯಿಸಿದ್ದಕ್ಕಿಂತ ಹೆಚ್ಚಿನ ಸಂಭಾವನೆಯನ್ನು ಕೊಡುತ್ತಿದ್ದರು ಎಂಬ ವಿಚಾರ ಮೆಚ್ಚತಕ್ಕದ್ದು. ಮನೆಪಾಠಗಳ ಜತೆಗೆ ಮನೆಯಿಂದ ಸ್ವಲ್ಪ ದೂರದಲ್ಲಿದ್ದ ಹೆರಿಗೆ ಆಸ್ಪತ್ರೆಯ ನರ್ಸ್‌ಗಳಿಗೆ ಇಂಗ್ಲಿಷ್ ಹೇಳಿ ಕೊಡುತ್ತಿದ್ದರು. ಈ ಮಧ್ಯೆ ತನ್ನ ತಾಯಿ, ಅಣ್ಣ, ಗಂಡನ ಅಸಮಾಧಾನವನ್ನೂ ಲೆಕ್ಕಿಸದೆ ಮೆಡಿಕಲ್ ಕಲಿಯುವ ಆಸೆ ಹುಟ್ಟಿ ಕೆಂಬಲ ಮೆಡಿಕಲ್ ಕಾಲೇಜಿನಲ್ಲಿ ಮೆಟ್ರಿಕ್ ಪರೀಕ್ಷೆ ಆಗದವರಿಗೆ ಇರುವ ಎಲ್.ಸಿ.ಪಿ.ಎಸ್. ಕೋರ್ಸ್‌ಗೆ ಸೇರಿದರು. ಆದರೆ ಪರೀಕ್ಷೆಗೆ ಕುಳಿತುಕೊಳ್ಳುವ ಹೊತ್ತಿನಲ್ಲಿ ಗರ್ಭಿಣಿಯಾದುದರಿಂದ ಆ ಆಸೆಯನ್ನು ಕೈ ಬಿಡಬೇಕಾಯಿತು. ಬನಾರಸ್ ಯುನಿವರ್ಸಿಟಿಯಲ್ಲಿ ಖಾಸಗಿಯಾಗಿ ಪರೀಕ್ಷೆಗೆ ಬರೆಯಲು ಪ್ರಯತ್ನಿಸಿದರು. ಅಲ್ಲೂ ವೈಯಕ್ತಿಕ ಸಮಸ್ಯೆ ಅಡ್ಡಿಯಾಯಿತು. ಮುಂದಕ್ಕೆ ಮಹಾರಾಷ್ಟ್ರ ಮಂಡಲದಲ್ಲಿ ಕೆಲಸ ಮಾಡುವುದರ ಜೊತೆಗೆ ಮೆಟ್ರಿಕ್ ಪರೀಕ್ಷೆ ಬರೆದರು. ಮುಂಬೈ ಹಿಂದೀ ವಿದ್ಯಾಪೀಠದ ಹಿಂದೀ 'ಉತ್ತಮ'

ಪರೀಕ್ಷೆಗೆ ಕಟ್ಟಿದರು. ಆ ಸಮಯದಲ್ಲಿ ತಾವು ಕಲಿಯುವುದರ ಜೊತೆಗೆ ಇನ್ನೂ ಕೆಲವರಿಗೆ ಹಿಂದಿ ಕಲಿಸಿ ಪಬ್ಲಿಕ್ ಪರೀಕ್ಷೆಗೆ ಅವರನ್ನು ತರಬೇತು ಪಡಿಸಿದರು. ಈ ಸಂದರ್ಭದಲ್ಲಿ ಗುಜರಾತಿ ಶಾಲೆಯಲ್ಲಿ ಅವರಿಗೆ ಕೆಲಸ ಸಿಕ್ಕಿತು. ನಂತರ ಹಿಂದಿ ಭಾಷಾ ರತ್ನ ಪರೀಕ್ಷೆಗೆ ಸಿದ್ಧತೆ ಮಾಡಿದರು. ಆ ಸಂದರ್ಭದಲ್ಲೂ ಮುಂಬೈ ಹಿಂದೀ ವಿದ್ಯಾಪೀಠದ ಹಿಂದೀ ಪರೀಕ್ಷೆಗೆ ಕುಳಿತುಕೊಳ್ಳುವ ಹಲವು ವಿದ್ಯಾರ್ಥಿಗಳಿಗೆ ಧರ್ಮಾರ್ಥ ಪಾಠ ಹೇಳಿಕೊಟ್ಟರು. ಮುಂದೆ ಕಾಞಂಗಾಡಿನ ರಾಮದಾಸರ ಆಶ್ರಮದಲ್ಲಿ ಹರಿಜನರ ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿದರು. ಅಲ್ಲಿ ರಾಮದಾಸರಿಗೆ ಅನೇಕ ಭಾಷೆಗಳಲ್ಲಿ ಬರುತ್ತಿದ್ದ ಪತ್ರಗಳನ್ನು ಅನುವಾದ ಮಾಡಿ ಕೊಡುತ್ತಿದ್ದರು. ಆಶ್ರಮದಲ್ಲಿ ವಾಸಿಸುತ್ತಿದ್ದವರ ಮಕ್ಕಳಿಗೆ ಧರ್ಮಾರ್ಥ ಹಿಂದಿ ಪಾಠ ಹೇಳಿದರು. ಮುಂದೆ ಮುಂಬೈಗೆ ಹೋದಮೇಲೆ ಮನೆಪಾಠ ಹೇಳಿದರು. ಅದೇ ಸಮಯದಲ್ಲಿ ಪಾಯಧೂಣಿಯ ಸೀತಾರಾಮ ಶಾಲೆಯಲ್ಲಿ 2 ವರ್ಷ ಕೆಲಸ ಮಾಡಿದರು. ಆ ದಿನಗಳ ಬಗ್ಗೆ ವಾಸಂತಿ "ಈ ಮಧ್ಯೆ ನನಗೆ ವಾಳಕೇಶ್ವರದಲ್ಲಿ ಒಂದು 40 ರೂಪಾಯಿಯ ಟ್ಯೂಷನ್ ಸಿಕ್ಕಿತು. ಶಾಲೆಯಿಂದ ನೆಟ್ಟನೆ ಟ್ಯೂಷನ್ನಿಗೆ ಹೋಗಿ ನಂತರ ನಾನು ಮನೆ ಸೇರುತ್ತಿದ್ದೆನು. ರಾತ್ರಿ ಹೊತ್ತು Walter Thomson ಕಂಪೆನಿಯವರ ಭಾಷಾಂತರದ ಕೆಲಸ ಮಾಡುತ್ತಿದ್ದೆನು. . . . ಎಲ್ಲಿಂದ ನನಗೆ ಈ ಎಲ್ಲಾ ಕೆಲಸ ಮಾಡುವ ಧೈರ್ಯ, ಸ್ಫೂರ್ತಿ ಬರುತ್ತಿತ್ತೋ ದೇವರೇ ಬಲ್ಲ" (ಪು.131) ಎನ್ನುವ ಆಕೆ ತನ್ನ ಈ ನಡವಳಿಕೆಗೆ, ಕೆಲಸಕ್ಕಾಗಿ ಹಲವರಿಂದ ನಾನಾ ಮಾತುಗಳನ್ನು ಕೇಳಿಸಿಕೊಂಡದ್ದೂ ಇದೆ. ಆದರೆ ಸಮಾಜದ ಯಾವ ಮಾತುಗಳಿಗೂ ಅವರು ಹೆದರದೆ ಬಾಳಿದರು. ಅದನ್ನು ಅವರು "ನನ್ನ ವಿಚಾರಗಳಿಗಾಗಿ ಎಲ್ಲರಿಂದಲೂ ಅನ್ನಿಸಿಕೊಂಡಿದ್ದೇನೆ. ಆದರೂ ನಾನು ಹಿಂಜರಿಯದೇ ಸದಾ ಮಕ್ಕಳಿಗೆ ಬೆಂಬಲವಾಗಿಯೇ ಇದ್ದೆನು. ಕಾರಣ, ನನ್ನ ಜೀವಮಾನದಲ್ಲಿ ನನಗೆ ಎಂದೂ ಪ್ರೋತ್ಸಾಹವಾಗಲೀ, ಪ್ರಶಂಸೆಯಾಗಲೀ, ಮುಂದುವರಿಯುವ ಸಂದರ್ಭವಾಗಲೀ ಯಾರಿಂದಲೂ ಸಿಕ್ಕಿರಲಿಲ್ಲ. ನಾನು ನನ್ನ ಹಠ ಸಾಧನೆ, ಮನೋಬಲದಿಂದ ಪ್ರತಿಯೊಂದು ಅಡ್ಡಿ ಬಂದಾಗಲೂ ಧೈರ್ಯದಿಂದ ಎದುರಿಸಿ ಮುಂದೆ ಬಂದವಳು. ಯಾರ ಹಂಗಿಗೂ ಒಳಗಾದವಳಲ್ಲ" (ಪು.141) ಎಂದು ಮಾರ್ಮಿಕವಾಗಿ ಅಂದಿದ್ದಾರೆ. ಈ ಸಂದರ್ಭದಲ್ಲಿ ವಾಸಂತಿಯವರು ಶಾಲೆಯಲ್ಲಿ ಕಲಿಸುತ್ತಿದ್ದಾಗಿನ ಸಂದರ್ಭವನ್ನು ಉಲ್ಲೇಖಿಸುವುದು ಅತಿ ಅಗತ್ಯ. ವಾಸಂತಿ ಮತ್ತು ಶ್ರೀ ಐರಾಣಿ ಎಂಬುವರು ಶಾಲೆಯಲ್ಲಿ ಹೊಸ ರೀತಿ ನೀತಿಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದ್ದು, ಇತರ ಉಪಾಧ್ಯಾಯಿನಿಯರು ಇವರಿಬ್ಬರ ಸುಧಾರಣೆಗಳನ್ನು ಕಾರ್ಯಾಚರಣೆಗೆ ತರಲು ಅಡ್ಡಿ ಮಾಡಿದ್ದು ಮಾತ್ರವಲ್ಲದೆ ಇದರಿಂದ ಇವರಿಬ್ಬರೂ ಕೆಲಸ ಕಳೆದುಕೊಳ್ಳಬೇಕಾಯಿತು. ಶಾಲೆಯ ಆಡಳಿತಮಂಡಳಿಯ ಈ ದುರ್ವರ್ತನೆಯ ಬಗ್ಗೆ ವಾಸಂತಿಯವರು "ನಾನು ಕಲಿಸುವ ನಾಲ್ಕನೇ ಐದನೇ ಕ್ಲಾಸಿನ ಹಿಂದಿಯ ಪಾಠ ಸರಿಯಿಲ್ಲ ಎಂದು ನೆಪ ಹೇಳಿ ನನ್ನನ್ನು 1951ರಲ್ಲಿ ಕೆಲಸದಿಂದ ತೆಗೆದು ಹಾಕಿದ್ದರು. ನಾನು ಹಿಂದಿ ಪ್ರಚಾರಕಳಾಗಿದ್ದೆನು, ಪರೀಕ್ಷಕಳಾಗಿದ್ದೆನು. ಅದಲ್ಲದೇ 'ಕೋವಿದ' ಭಾಷಾರತ್ನ ಪಾಸಾಗಿದ್ದೆನು. ಸಾವಿರಾರು ಮಕ್ಕಳಿಗೆ ಧರ್ಮಾರ್ಥ ಮನೆಯಲ್ಲಿ ಕಲಿಸಿ, ಪಬ್ಲಿಕ್ ಪರೀಕ್ಷೆಗೆ 'ಯಾರು ಮಾಡಿದ್ದೆನು. ನನ್ನ ಮೇಲೆ ಸಿಟ್ಟು ಏಕಿತ್ತೋ ಅರಿಯೆ. . . . ಆಗ ಟ್ರೈನಿಂಗಾದ ನನಗೆ ಪ್ರೊವಿಡೆಂಟ್ ಫಂಡನ್ನಾಗಲೀ ಬೇಸಿಗೆಯ ರಜೆಯ ವೇತನವನ್ನಾಗಲೀ ಕೊಡದೆ ಕೆಲಸದಿಂದ ವಿನಾಕಾರಣ ತೆಗೆದು ಹಾಕಿದ್ದರು" (ಪು.265) ಎಂದದ್ದನ್ನು ಗಮನಿಸಬೇಕಾಗುತ್ತದೆ.

'ನಮ್ಮ ಯಜಮಾನರಿಗೆ ಸಂಸಾರದ ಬಗ್ಗೆ ಅಂತಹ ಆಸಕ್ತಿ ಏನೂ ಇರಲಿಲ್ಲ' ಎನ್ನುವ ವಾಸಂತಿ ಮಕ್ಕಳಿಗೋಸ್ಕರ ತಮ್ಮ ಜೀವ, ಜೀವನವನ್ನೇ ಮುಡಿಪಾಗಿರಿಸಿದರು. ತಮ್ಮ ಅತೃಪ್ತ, ತಾನು ಕಾಣದ ಸಾಧನೆಯನ್ನು, ತನ್ನ ಅಪೂರ್ಣ ಮಹತ್ವಾಕಾಂಕ್ಷೆಗಳನ್ನೆಲ್ಲಾ ತಮ್ಮ ಮಕ್ಕಳಲ್ಲಿ ಪೂರ್ಣಗೊಳಿಸಲು ಪ್ರಯತ್ನಿಸಿದರು. ತಮ್ಮ ಬದುಕಿನಂತೆ ತನ್ನ ಮಗಳ ಬದುಕಾಗಬಾರದೆಂದು ಬಯಸಿದರು. ಮಕ್ಕಳ ಉನ್ನತಿಗೆ ಲೇಖಕಿ ಊರುಗೋಲಾದರು. 'ಅಮ್ಮಾ, ನಿನ್ನನ್ನು ಎಂದೂ ಬಿಟ್ಟು ಹಾಕುವುದಿಲ್ಲ. ನೀನು ನನ್ನ ಜೊತೆಯಲ್ಲೇ ಇರಬೇಕು' ಎಂದು ದೇವರ ಮುಂದೆ ಮಾತು ಕೊಟ್ಟ ಮಕ್ಕಳು ನುಡಿದಂತೆ ನಡೆಯದಿದ್ದಾಗ 'ನನ್ನ ಮಕ್ಕಳಲ್ಲಿ ಧೈರ್ಯವಾಗಲೀ, ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಛಲವಾಗಲೀ ಇದ್ದರೆ ತಾನೇ? ಪತ್ನಿಯರ ದಾಸರು. ಅವರ ಕೈಗೊಂಬೆಗಳು. ಹೆಂಡತಿಯರು ಹೇಳಿದಂತೆ ಕೇಳುವವರು' (ಪು.239) ಎನ್ನುವ ವಾಸಂತಿ ತಮ್ಮ ಜೀವನದ ಕೊನೆಯ ಭಾಗದಲ್ಲಿ ತಮ್ಮ ಮಕ್ಕಳ ಕುರಿತಾಗಿ ವಿಶ್ವಾಸ, ನಂಬಿಕೆಯನ್ನೇ ಕಳಕೊಂಡಿದ್ದರು. ವೈರಾಗ್ಯ ಅವರನ್ನು ಆವರಿಸಿತ್ತು. ಪ್ರತಿಯೊಬ್ಬ ಮಕ್ಕಳೂ ಅವರನ್ನು ದೂಷಿಸಲಾರಂಭಿಸಿದಾಗ ವಾಸಂತಿಗೆ 'ಜೀವನವೇ ನನಗೆ ಬೇಡವಾಗಿದೆ. ಎಂದಿಗೆ ಈ ಜೀವನದ ಹೋರಾಟ ಮುಗಿಯುತ್ತದೋ... ಮನೆ ತುಂಬಾ ಮಕ್ಕಳು ಬೇಕೆಂದು ಹಾರೈಸುತ್ತಾರೆ. ಆದರೆ ಅವರು ಚಿಕ್ಕವರಿರುವಷ್ಟು ಕಾಲ ಮಾತ್ರ ತಂದೆ ತಾಯಿಯರ ಪಾಲಿಗೆ ಮುದ್ದು. ವಯಸ್ಸಿಗೆ ಬಂದ ನಂತರ ಮುದ್ದಾಡಿದ ತಂದೆ ತಾಯಿಯರೇ ಅವರಿಗೆ ಬೇಡವಾಗುತ್ತಾರೆ. ಇದು ಈ ಕಾಲದ ಒಂದು ರೀತಿಯೇ ಆಗಿದೆಯೋ ಏನೋ, ನಾನು ಅರಿಯೆ. ಆದರೆ ನಮ್ಮ ಭಾರತದಲ್ಲಿ ಇಂತಹ ಸಂಸ್ಕೃತಿ ಬೆಳೆಯುತ್ತಿರುವುದು ಖಂಡಿತಾ ಒಳ್ಳೆಯದಲ್ಲ' (ಪು.236) ಎಂದು ಅನ್ನಿಸಿದ್ದು ಗಮನಿಸತಕ್ಕ ವಿಚಾರ. ಇದು ಸರ್ವ ಕಾಲದ ವಾಸ್ತವವೂ ಹೌದು.

ಹೀಗೆ ನಂಬಿದ ಮಕ್ಕಳಿಂದ ಭ್ರಮನಿರಸನಗೊಂಡರು ವಾಸಂತಿ. ತಮ್ಮ ಮಕ್ಕಳ, ಸೊಸೆಯಂದಿರ ವರ್ತನೆಯ ಬಗ್ಗೆ ಯೋಚಿಸುತ್ತಾ– "ನನ್ನ ವಿಚಾರಗಳೇ ಬೇರೆ ಇದ್ದವು. ಅತ್ತೆ, ಸೊಸೆ, ಅತ್ತಿಗೆ– ನಾದಿನಿಯರಲ್ಲಿ ಪ್ರೇಮ ತಿಳುವಳಿಕೆ ಏಕೆ ಇರಕೂಡದೆಂದು? ಜಗತ್ತಿನಲ್ಲಿ ಹೀಗೆಲ್ಲಾ ಏಕೆ ನಡೆಯುತ್ತದೆ? ಪ್ರೀತಿಗೂ ಕೊರತೆಯೇ? ಈ ನನ್ನ ವಿಚಾರಗಳನ್ನು, ನಮ್ಮ ಸಿದ್ಧಾಂತಗಳನ್ನು ವ್ಯವಹಾರದಲ್ಲಿ ತರುವುದು ತುಂಬ ಕಷ್ಟ ಸಾಧ್ಯ. ಎರಡು ಕಡೆಯಿಂದಲೂ ತಿಳುವಳಿಕೆ.... ಸಂಸ್ಕಾರ ಸರಿಯಾಗಿದ್ದರೇನೇ ಇದು ಸಾಧ್ಯ. ಪತಿ–ಪತ್ನಿ, ತಂದೆ–ತಾಯಿ, ಮಕ್ಕಳು ಪ್ರತಿಯೊಬ್ಬರಲ್ಲಿ ಸಹನೆ, ತಿಳುವಳಿಕೆ, ಕ್ಷಮೆ, ದಯೆ, ಪ್ರೇಮವಿದ್ದರೇನೇ ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸುವ ಧೈರ್ಯ, ಶಕ್ತಿ ಬರುತ್ತದೆ. ನನ್ನಂತಹ ಪಾಪಿಯರು ಎಷ್ಟು ಒದ್ದಾಡಿದರೂ ಅದೃಷ್ಟದ ಗೆರೆಯೇ ಓರಕೋರೆಯಾಗಿರುವಾಗ ಸುಖ – ಸಮಾಧಾನವೆಲ್ಲಿಂದ ಬಂದೀತು? ಪ್ರಪಂಚದಲ್ಲಿ ಹಣಕಾಸು, ಪತಿಯ ಪ್ರೇಮವಿದ್ದರೇನೇ ಹೆಂಗಸರಿಗೆ ಎಲ್ಲಾ ಕಡೆಯಲ್ಲೂ ಮಾನಮರ್ಯಾದೆ. ಪತಿಯನ್ನು ಕಳಕೊಂಡರೂ ಕೈತುಂಬ ಹಣವಿದ್ದರೇನೇ ಅವಳ ಜೀವನ ಸಾರ್ಥಕ. ಇದು ನನ್ನ ಅಭಿಪ್ರಾಯ. ಅದಕ್ಕೆ ನನ್ನ ಜೀವನವೇ ಒಂದು ನಿದರ್ಶನ" (ಪು.241) ಎನ್ನುವಲ್ಲಿ ಕುಟುಂಬ ಜೀವನವು ಮಹಿಳೆಗೆ ಕಟ್ಟಿಕೊಟ್ಟ, ಕೊಡುತ್ತಿರುವ, ಕೊಡುವ ಜೀವನದ ಬಗ್ಗೆ ಚಿಂತನೆಯಿರುವುದನ್ನು ಗಮನಿಸಬಹುದು.

ತಮ್ಮ ಬದುಕಿನಲ್ಲಿ ಪರಂಪರೆ ಮತ್ತು ಆಧುನಿಕತೆ ಮುಖಾಮುಖಿಯಾದ ಸಂದರ್ಭವನ್ನೂ ವಾಸಂತಿ ಗಮನಿಸಿದ್ದಾರೆ. ಪರಂಪರೆ

ಆಧುನಿಕತೆಗಳ ಸಂಘರ್ಷ ಅವರಲ್ಲಿತ್ತು. ತನ್ನ ಕಾಲದ ಬದುಕಿಗೂ ತನ್ನ ಮಕ್ಕಳ ಬದುಕಿಗೂ ಇರುವ ಅಗಾಧ ವ್ಯತ್ಯಾಸವನ್ನು ಅನುಭವಿಸಿದ ವಾಸಂತಿ "ನನಗೆ ಯಾವುದರಲ್ಲೂ ಸ್ವಾತಂತ್ರ್ಯವಿರಲಿಲ್ಲ. ಪತಿಯೇ ಪತ್ನಿಯರ ದೇವರು ಎಂಬ ಭಾವನೆ ಆ ಕಾಲಕ್ಕೆ ಇತ್ತಲ್ಲವೇ? ಆತ ಹೊಡೆಯಲಿ, ಬಡಿಯಲಿ, ಸಮಾಜದಲ್ಲಿ ಅದನ್ನು ವಿರೋಧಿಸುವ ಹಕ್ಕು ಹೆಂಗಸರಿಗಿದ್ದರಲ್ಲವೇ? ಪತಿ ಎನಿಸಿಕೊಂಡವನಿಗೆ ಸಮಾಜದಲ್ಲಿ ಮರ್ಯಾದೆ. ಆದರೆ ಸ್ತ್ರೀಯರಿಗೆ? ನನ್ನಂತೆ ಅದೆಷ್ಟೋ ಸ್ತ್ರೀಯರು ಬಾಯಿ ಮುಚ್ಚಿಕೊಂಡು ಮಕ್ಕಳ ಮುಖ ನೋಡಿಕೊಂಡು ತೆಪ್ಪಗೆ ಎಲ್ಲವನ್ನೂ ಸಹಿಸಿಕೊಳ್ಳಲೇ ಬೇಕಾಗಿತ್ತು" (ಪು.89) ಎನ್ನುವ ಆಕೆ ತನ್ನ ಮಕ್ಕಳ ಕಾಲದ ಕೌಟುಂಬಿಕ ಜೀವನದ ಸಂದರ್ಭದಲ್ಲಿ ತಮ್ಮ ಮಕ್ಕಳ ನಡೆ ನುಡಿಗಳಿಗೆ ತಾನು ಬಾಯ್ಮುಚ್ಚಿಕೊಂಡು ಬಾಳಬೇಕಾಗಿ ಬಂದುದನ್ನೂ ಯಾವುದೇ ಸಂಕೋಚವಿಲ್ಲದೆ ಬರೆದಿದ್ದಾರೆ. ವಾಸಂತಿಯವರು ಕಾಞಂಗಾಡಿನ ಆಶ್ರಮದಲ್ಲಿ ಆಶ್ರಯ ಪಡೆದುಕೊಂಡು ಬಾಳಬೇಕಾಗಿ ಬಂದ ಸಂದರ್ಭದಲ್ಲಿ ಅಲ್ಲಿನ ಮಾತಾಜೀಯವರು ಬೇರೆ ಊರಿನಿಂದ ಬಂದವರ ಮುಂದೆ ವಾಸಂತಿಯ ವಿಚಾರವಾಗಿ 'ಅವಳಿಗೆ ಗಂಡನ ಹತ್ತಿರ ಹೋಗುವ ಮನಸೇ ಇಲ್ಲ. ಮಕ್ಕಳನ್ನು ಕಟ್ಟಿಕೊಂಡು ಸ್ವತಂತ್ರವಾಗಿ ಜೀವನ ನಡೆಸುವುದೂ, ನೌಕರಿ ಮಾಡುವುದೂ ಒಂದು ಛಲ ಇದೆ' ಎಂದು ಗೇಲಿ ಮಾಡಿದ್ದನ್ನು ಈ ಸಂದರ್ಭದಲ್ಲಿ ಮಹಿಳಾ ಅನನ್ಯತೆಯ ನಿಟ್ಟಿನಲ್ಲಿ ಗಮನಿಸಬೇಕಾಗುತ್ತದೆ. ಓದುಗರನ್ನು ಚಿಂತನೆಗೆ ಹಚ್ಚುತ್ತದೆ.

'ಇಡೀ ನನ್ನ ಜನ್ಮ ಇತರರ ಸೇವೆಯಲ್ಲಿ ಕಳೆಯಬೇಕಾಗಿತ್ತೋ ಏನೋ' ಎಂಬ ಉದ್ಗಾರವನ್ನು ಆಗಾಗ ಎತ್ತುವ ವಾಸಂತಿ ತನ್ನ ಬದುಕಿನ ಪಯಣದುದ್ದಕ್ಕೂ ತನ್ನಲ್ಲಿರಿಸಿಕೊಂಡಿದ್ದ ಸೃಜನಶೀಲತೆ, ಆಸಕ್ತಿ, ಉತ್ಸಾಹ, ಕಲಿಯುವ ಕುತೂಹಲ ಅಪಾರವಾದದ್ದು. ತಮ್ಮ ಬರವಣಿಗೆಯ ಆರಂಭಿಕ ಹಂತದಲ್ಲಿ ಸ್ವತಃ ತಮ್ಮ ಅಣ್ಣನಿಂದಲೇ 'ನಿನ್ನ ಹೆಸರಿನಲ್ಲಿ ನಿನ್ನ ಗಂಡ ಬರೆಯುತ್ತಿರಬಹುದು' ಎಂಬ ಅವಹೇಳನಕರವಾದ ಮಾತುಗಳು ವಾಸಂತಿಯವರಲ್ಲಿ ಹುದುಗಿದ್ದ ಪ್ರತಿಭೆ, ಅಂತಶ್ಶಕ್ತಿಯನ್ನು ಬಡಿದೆಬ್ಬಿಸಿತು. ಕನ್ನಡ ಮಾತ್ರವಲ್ಲದೆ ವಿವಿಧ ಭಾಷೆಯ ವಿವಿಧ ರೀತಿಯ ಪುಸ್ತಕಗಳನ್ನು ಓದುವ ಹುಚ್ಚು ಅವರಲ್ಲಿತ್ತು. ಬಂಗಾಲಿ, ಹಿಂದಿ, ಇಂಗ್ಲಿಷ್, ಗುಜರಾತಿ, ಕೊಂಕಣಿ, ತೆಲುಗು, ಮರಾಠಿ ಭಾಷೆಗಳಲ್ಲಿ ಹಿಡಿತವನ್ನು ಸಾಧಿಸಿದ್ದರು. ವಾಸಂತಿಯವರು ಬೇರೆ ಬೇರೆ ಭಾಷೆಗಳಿಗೆ, ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಕೃತಿಗಳನ್ನು ಅನುವಾದ ಮಾಡಿದರು. ಕಥೆ, ಕಾದಂಬರಿಗಳನ್ನು ಬರೆದರು. ಕನ್ನಡ, ಬಂಗಾಲಿ, ಹಿಂದಿ, ಇಂಗ್ಲಿಷ್, ಗುಜರಾತಿ, ತೆಲುಗು, ಮರಾಠಿ ಭಾಷೆಯ ಕಾದಂಬರಿಗಳನ್ನು ಓದಿ, ಉತ್ತಮವಾದುದನ್ನು ಸಂಗ್ರಹಿಸಿ, ಮಗ ಆತ್ಮಾರಾಮನಿಗೆ ಸಿನಿಮಾಗೊಳಿಸಲು ಸೂಚಿಸುತ್ತಿದ್ದರು. ತಮ್ಮ ದಿನಚರಿಯನ್ನು ಇಂಗ್ಲಿಷ್‌ನಲ್ಲಿ ಬರೆಯುತ್ತಿದ್ದರು. ಮಹಿಳಾ ಅಸ್ತಿತ್ವವನ್ನು ಸ್ಥಾಪಿಸುವತ್ತ ವಾಸಂತಿ ನಡೆದದ್ದು ಹೀಗೆ. 'ಹೆಣ್ಣು ಮಕ್ಕಳಿಗೆ ತಲೆಯೇ ಇಲ್ಲ, ಬೇರೆಲ್ಲಾ ಇದೆ' ಎನ್ನುವ ಸಾಂಪ್ರದಾಯಿಕ ತಿಳುವಳಿಕೆಯ ಸಂದರ್ಭದಲ್ಲಿ ವಾಸಂತಿಯಂತಹ ಸ್ತ್ರೀಯರು ಬರೆಯಲು ಆರಂಭಿಸಿದ್ದು ಅಂದಿನ ಕಾಲದ ಕನ್ನಡದ ವಾತಾವರಣದಲ್ಲಿ ಒಂದು ಕ್ರಾಂತಿಕಾರಕ ಘಟನೆಯೇ ಆಗಿದೆ.

ತಮ್ಮ ವೃದ್ಧಾಪ್ಯದ ಸಂದರ್ಭದಲ್ಲಿ "ಎಷ್ಟೋ ಪ್ರಶ್ನೆಗಳು ನನ್ನ ತಲೆ ತಿನ್ನುತ್ತಿವೆ. ಇದಕ್ಕೆ ತಕ್ಕ ಉತ್ತರ ಮಾತ್ರ ಸಿಗುವುದಿಲ್ಲ. 1975ರಲ್ಲಿ ಸಮಯ ವ್ಯರ್ಥವಾಗಬಾರದೆಂದು ವಯಸ್ಸನ್ನು ಗಣನೆಗೆ ತಂದುಕೊಳ್ಳದೆ, ಕಳೆದ ಸಮಯ ಮತ್ತೆ ಎಂದೂ ಲಭಿಸಲಾರದು ಎಂದು ಮನಸ್ಸಿನ ಸಮಾಧಾನಕ್ಕಾಗಿ ನಾನು ಲೇಖನಿ ಹಿಡಿದೆ. ಬರವಣಿಗೆ ಆರಂಭಿಸಿದೆ. ಅದನ್ನೇ ಮುಂದುವರಿಸಿದೆನು. ಸದಾ ಏನಾದರೂ ಕೆಲಸ ಮಾಡುವ ಅಭ್ಯಾಸ. ನನಗೆ 'ಮುದಿತನ'ದಲ್ಲಿ ಇನ್ನೇನು ಕೆಲಸ. ಹಾಯಾಗಿ ಕೂತುಕೊಂಡು ಉಣ್ಣುವುದು, ತಿನ್ನುವುದು, ಪಾರಮಾರ್ಥಿಕ ಪುಸ್ತಕಗಳಲ್ಲಿ ಸಮಯ ಕಳೆಯುವುದು ಸರಿಯೇ? ನನಗಂತೂ ವ್ಯರ್ಥ ಸಮಯ ಕಳೆಯುವುದರಲ್ಲಿ ಮನಸ್ಸಿರಲಿಲ್ಲ. ಆಧ್ಯಾತ್ಮಿಕ ಚಿಂತನೆ ಬೇಕೇ ಬೇಕು. ಆದರೆ 'ವೃದ್ಧಾಪ್ಯ'ವೆಂದು ಇನ್ನಷ್ಟು ಮನೋದೌರ್ಬಲ್ಯದಿಂದ ಜೀವನ ಸಾಗಿಸಲು ನನ್ನಿಂದ ಸಾಧ್ಯವಿಲ್ಲ. ವಯಸ್ಸಾದರೂ ಮನಸ್ಸಿಗೆ ವಯಸ್ಸಾಗಿರಲಿಲ್ಲ. 'ಹೇಗೆ ಕತ್ತಿಯನ್ನು ಉಪಯೋಗಿಸದೆ ಇಟ್ಟರೆ ತುಕ್ಕು ಹಿಡಿಯುತ್ತದೆಯೋ' ಹಾಗೆಯೇ ನಮ್ಮ ಒಳ ಮನಸ್ಸನ್ನು ನಾವು ಸದಾ ಚೂಪು ಮಾಡಿಡಬೇಕೆಂದು ನನ್ನ ಉದ್ದೇಶ. ಚೈತನ್ಯವನ್ನು ಕಳೆದುಕೊಳ್ಳ ಬಾರದು" (ಪು.282) ಎಂಬ ಅಪೂರ್ವ ಚಿಂತನೆ ಅವರದ್ದಾಗಿತ್ತು ಎನ್ನುವುದೂ ಗಮನಾರ್ಹವಾದ ಸಂಗತಿಯೇ.

ಇಂತಹ ತಮ್ಮ ಅಸಾಧಾರಣ ವ್ಯಕ್ತಿತ್ವವನ್ನವರು ಇಂದಿನ ಯುವ ಜನಾಂಗದ ಜತೆ ಹೋಲಿಸಿದ್ದೂ ಇದೆ. ವಾಸಂತಿ ಜಪಾನ್ ದೇಶಕ್ಕೆ ಪ್ರವಾಸ ಹೋದ ಸಂದರ್ಭ – "ನನಗೆ ಜಪಾನಿಯರ ನಾಟ್ಯಗೃಹ, ನೃತ್ಯ ನೋಡಬೇಕೆಂದೂ, ಅವರ ಮರದ ಮನೆಗಳನ್ನೂ, ಚಹಾ ಮಾಡುವ ರೀತಿನೀತಿಗಳು, ಹೂಸಜ್ಜೆ ಮುಂತಾದ್ದನ್ನು ನೋಡಬೇಕೆಂದೂ, ತಿಳಿದುಕೊಳ್ಳಬೇಕೆಂದೂ ತುಂಬ ಮನಸ್ಸಿತ್ತು. ಆದರೆ, ಜತೆಯಲ್ಲಿದ್ದವರಿಗೆ ಇವುಗಳ ಬಗ್ಗೆ ಆಸಕ್ತಿ ಇರಲಿಲ್ಲ. ಯೌವನದ ಬಿಸಿರಕ್ತದ ಈಗಿನ ಯುವಕ ಯುವತಿಯರಿಗೆ ಇವೆಲ್ಲಾ ಬೇಡವಾಗಿತ್ತು. ಬರೇ ಓಡಾಟ, ಚಿತ್ರ ನೋಡುವುದು, ಅತ್ತಿತ್ತ ಅಲೆದಾಡುವುದರಲ್ಲೇ ಅವರಿಗೆ ತೃಪ್ತಿ" (ಪು.254–255) ಎನ್ನುವ ಅವರ ದೃಷ್ಟಿಕೋನ ಮೆಚ್ಚತಕ್ಕದ್ದು. ಇಂತಹ ವ್ಯಕ್ತಿತ್ವವುಳ್ಳ ವಾಸಂತಿಯಿಂದ ಇಂದಿನ ಯುವ ಜನಾಂಗ ಕಲಿಯುವುದು ಬಹಳಷ್ಟಿದೆ ಎಂಬುದನ್ನು ಗಮನಿಸಬೇಕು.

ತಮಗೆ ಸರಿಯಾಗಿ ವಿದ್ಯಾಭ್ಯಾಸ ಸಿಗದ್ದಕ್ಕೆ ವಾಸಂತಿಯವರಿಗೆ ಅಗಾಧ ಬೇಸರವಿತ್ತು. ಗಿರೀಶ್ ಕಾರ್ನಾಡರಿಗೆ ಬರೆದ ಪತ್ರವೊಂದರಲ್ಲಿ "ನಾವು ಚಿಕ್ಕವರಿದ್ದಾಗ ನಮಗೆ ಸರಿಯಾದ ಶಿಕ್ಷಣ ಸಿಗಲಿಲ್ಲ. ಮಾರ್ಗದರ್ಶನ ಸಿಗಲಿಲ್ಲ. ಏನಾದರೂ ಮಾಡುವ ಎಂದು ಹೊರಟರೆ ಅಡ್ಡಬಂದ ಜನವೇ ಹೆಚ್ಚು. ಆಗ ಯಾರಾದರೂ ನಮ್ಮ ಬೆನ್ನಿಗೆ ನಿಂತು ಉತ್ತೇಜನ ಕೊಟ್ಟಿದ್ದರೆ ನಾವೂ ಏನೇನೋ ಮಾಡಬಹುದಿತ್ತು, ಏನನ್ನಾದರೂ ಸಾಧಿಸಬಹುದಾಗಿತ್ತು" (ಮುನ್ನುಡಿ, ಗಿರೀಶ ಕಾರ್ನಾಡ, ನನ್ನ ಮಗ ಗುರುದತ್ತ, ವಾಸಂತಿ ಪಡುಕೋಣೆ, 1976, ಪು.9) ಎಂದು ತಮ್ಮ ಮನಸ್ಸಿನ ಕೊರಗನ್ನು ವ್ಯಕ್ತಪಡಿಸಿದ್ದಾರೆ. ಅವರು ಬರೆದ ಪತ್ರದ ಬಗ್ಗೆ ವಿಚಾರ ಮಾಡುತ್ತಾ 'ಇಂತಹದ್ದೇ ಕಸಿವಿಸಿ, ಆರ್ತನಾದವನ್ನು ಆ ತಲೆಮಾರಿನ ಹಲವು ಹೆಂಗಸರ ಬಾಯಲ್ಲಿ ಕೇಳಿದ್ದೇನೆ' ಎನ್ನುವ ಗಿರೀಶ ಕಾರ್ನಾಡರು "ಆಗಿನ್ನೂ ಸ್ತ್ರೀಶಿಕ್ಷಣ ಆರಂಭವಾಗಿತ್ತು. ನನ್ನ ಶಾಲೆಯ ಹೆಡ್‌ಮಿಸ್ಟ್ರೆಸ್ ಬಂದು ನನ್ನ ಅಪ್ಪನ ಕಾಲಿಗೆ ಬಿದ್ದು 'ಈಕೆ ಅಭ್ಯಾಸದಲ್ಲಿ ಬುದ್ಧಿವಂತೆ, ಇವಳಿಗೆ ಶಿಕ್ಷಣ ಮುಂದುವರಿಸಲಿಕ್ಕೆ ಅಪ್ಪಣೆ ಕೊಡಿರಿ. ಏನಾದರೂ ಸಾಧಿಸಿಯಾಳು ಎಂದು ಎಷ್ಟು ಯಾಚಿಸಿದರೂ ನನ್ನ ಅಪ್ಪ ಕೇಳಲಿಲ್ಲ. ನನ್ನನ್ನೊಯ್ದು ಹದಿನೆರಡನೆಯ ವಯಸ್ಸಿಗೇ ಮದುವೆ ಮಾಡಿಬಿಟ್ಟ'. 1914ರ ಸುಮಾರಿಗೆ ಆದ ಈ ಸಂಗತಿಯನ್ನು ಅರವತ್ತು ವರ್ಷದ ನಂತರ ನೆನೆದು ಇನ್ನೂ ಕಣ್ಣೀರು ಉಕ್ಕಿಸಿದ

ಮಹಿಳೆಯನ್ನು ನಾನು ನೋಡಿದ್ದೇನೆ" (ಮುನ್ನುಡಿ, ಗಿರೀಶ ಕಾರ್ನಾಡ, ನನ್ನ ಮಗ ಗುರುದತ್ತ, ವಾಸಂತಿ ಪಡುಕೋಣೆ, 1976, ಪು.9) ಎನ್ನುವ ಅವರ ಮಾತು ಈ ಸಂದರ್ಭದಲ್ಲಿ ವಿಶೇಷವಾದದ್ದು.

ತಮ್ಮ ಆತ್ಮಕಥನ 'ಜೀವನದ ಹೋರಾಟ'ದ ಕೊನೆಯ ಭಾಗದಲ್ಲಿ ವಾಸಂತಿ ಹೇಳಿದ ಮಾತು ಅತ್ಯಂತ ಗಮನಾರ್ಹ. ಓದುಗರ ಮನಸ್ಸನ್ನು ಒಂದರೆಕ್ಷಣ ರೋಮಾಂಚನಗೊಳಿಸುತ್ತದೆ: "ಒಂದು ಆಶೆ ಮಾತ್ರ ಬಾಕಿ ಇತ್ತು. ಅದು ನನ್ನ ಜೀವನದ ಹೋರಾಟವನ್ನು ಪ್ರಕಟಿಸುವುದು. . . . . ಸಾಂಸಾರಿಕವಾಗಿ ಮನಸ್ಸು ಕೆಡುವ ಸಂದರ್ಭಗಳು ಜರಗುತ್ತಲೇ ಇವೆ. ಒನಕೆಗೆ ತಲೆಕೊಟ್ಟ ನಂತರ ಅದರ ಪೆಟ್ಟು ತಿನ್ನದಿದ್ದರೆ ಆಗುತ್ತದೆಯೇ? ಸಾಹಿತ್ಯ, ಸಂಗೀತ, ನೃತ್ಯ, ನಾಟಕಗಳ ಅಭಿರುಚಿಯೂ, ಕೆಲವು ಭಾಷೆಗಳನ್ನು ಸ್ವಪ್ರಯತ್ನದಿಂದ ಕಲಿತಿರುವುದರಿಂದಲೂ ನನ್ನ ಮನಸ್ಸಿಗೆ ನೆಮ್ಮದಿ ಇದೆ. ಜೀವನದ ಒಂದು ನಿಮಿಷ ಕೂಡ ಹಾಳು ಮಾಡಕೂಡದೆಂಬ ನನ್ನ ಸಿದ್ಧಾಂತವನ್ನು ಇದುವರೆಗೆ ನಡೆಸಿಕೊಂಡು ಬಂದಿರುವೆನು" (ಪು.296-297) ಎನ್ನುವ ವಾಸಂತಿಯವರ ವಿಚಾರಪರತೆ, ವ್ಯಕ್ತಿತ್ವ, ಸಾಧನೆ ಇಲ್ಲಿ ಗಮನಾರ್ಹ. ಆತ್ಮಗೌರವಕ್ಕಾಗಿ, ಸಾಧನೆಗಾಗಿ, ಸ್ವಂತಿಕೆಗಾಗಿ, ಅನನ್ಯತೆಗಾಗಿ ವಾಸಂತಿ ಹಾತೊರೆದದ್ದನ್ನು, ಪ್ರಯತ್ನಪಟ್ಟದ್ದನ್ನು ಅವರ ಆತ್ಮಕಥೆ ವಿವರವಾಗಿ ಪ್ರಸ್ತುತಪಡಿಸುತ್ತದೆ.

ವಾಸಂತಿಯವರ ಆತ್ಮಕಥನವು ಸಾವಿರಾರು ವಿಚಾರಗಳ ಮೊತ್ತ. ಇಲ್ಲಿ ಇಲ್ಲದ ವಿಷಯಗಳಿಲ್ಲ. ತಮ್ಮ ಜೀವಿತದ ಪ್ರತಿಯೊಂದು ಘಟನೆಗಳಿಗೂ ಅವರ ಲೇಖನಿ ಸಾಕ್ಷ್ಯ ನುಡಿಯುತ್ತದೆ. ಪ್ರತಿಯೊಂದು ವಿಚಾರದಲ್ಲೂ ಇರುವ ಕುತೂಹಲ, ಕಲೆ, ಸಾಹಿತ್ಯಗಳ ಬಗ್ಗೆ ವಿಶೇಷ ಅಭಿರುಚಿ, ಕೃತಿಗಳನ್ನು ಓದಿದಷ್ಟೂ ತಣಿಯದ ಅವರ ಹಂಬಲ, ವಿವಿಧ ಭಾಷೆಗಳನ್ನು ಕಲಿಯುವ ಬಯಕೆ, ತಾನು ಕಲಿತದ್ದನ್ನು, ತನಗೆ ಗೊತ್ತಿದ್ದನ್ನು ಇತರರಿಗೆ ಕಲಿಸುವ ಬಯಕೆ, ಜೀವನದ ಪ್ರತಿ ಕ್ಷಣಗಳನ್ನು ಹಾಳು ಮಾಡದೆ ಏನಾದರೊಂದು ಹೊಸದನ್ನು ಕಲಿಯುವ, ತಿಳಿಯುವ, ಸೃಷ್ಟಿಸುವ ಅವರ ಆಸೆ, ಬಯಕೆ ಅಮೋಘವಾದದ್ದು. ಅಂದಿನ ಕಾಲಘಟ್ಟದ ಸಮರ್ಥ ಹಾಗೂ ಅಪೂರ್ವ ವಾಸ್ತವ ಚಿತ್ರಣವನ್ನು ಈ ಆತ್ಮಕಥಾನಕ ಕಟ್ಟಿಕೊಟ್ಟಿದೆ. ದೇಶ ವಿದೇಶದ ಸುದ್ದಿಗಳು, ನಡೆಯುತ್ತಿರುವ ಯುದ್ಧಗಳ ಬಗ್ಗೆ ವಿವರ, ಯುದ್ಧದಿಂದ ಕಷ್ಟಕ್ಕೊಳಗಾದ ಜನತೆಯ ಕುರಿತು ವಿವರ, ಸ್ವಾತಂತ್ರ್ಯಕ್ಕೋಸ್ಕರ ನಡೆಯುತ್ತಿದ್ದ ಹೋರಾಟ, ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ಚರಕಕ್ಕೆ ಅಂಟಿಕೊಂಡಿದ್ದರ ವಿವರ, ಗಾಂಧೀಜಿಯವರೊಡನೆ ತಾನು ನಡೆಸಿದ ಪತ್ರ ವ್ಯವಹಾರ, ಸಾಹಿತ್ಯಕ್ಷೇತ್ರದಲ್ಲಿ ನಡೆದ ಹಲವು ಪ್ರಯೋಗಗಳು, ಚಲನಚಿತ್ರರಂಗದ, ಸಾಹಿತ್ಯಕ್ಷೇತ್ರದ ಹಲವು ದಿಗ್ಗಜರನ್ನು ತಾನು ಭೇಟಿಯಾದುದರ ವಿವರ, ಯಾವ ಊರಿಗೇ ಹೋಗಲಿ ಆ ಊರಿನ ಭಾಷೆಯನ್ನು ಕಲಿಯುವ ಅವರ ಬಯಕೆ, ಅಲ್ಲಿನ ಜನಜೀವನ, ಕಲೆ, ಸಾಹಿತ್ಯವನ್ನು ಅರಿತುಕೊಳ್ಳುವ ಹಂಬಲ, ಅಲ್ಲಿನ ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ಇರುವ ಕುತೂಹಲ, ವೃದ್ಧಾಪ್ಯದ ಸಮಯದಲ್ಲಿ ಒಬ್ಬಂಟಿಯಾಗಿ ಬಾಳುವ ಅವರ ಆಸೆ – ಇವೆಲ್ಲವೂ ಎಳೆ ಎಳೆಯಾಗಿ ಈ ಆತ್ಮಕಥಾನಕದಲ್ಲಿ ದಾಖಲಾದದ್ದು ವಿಶೇಷ. ವಾಸಂತಿಯಲ್ಲಿ ಹುದುಗಿರುವ ಅವರ ಪ್ರತಿಭೆಗೆ, ಸ್ವಂತಿಕೆಗೆ ಉತ್ತರಪ್ರಾಯವಾದುದು ಈ 'ಜೀವನದ ಹೋರಾಟ'ವೆಂಬ ಹೊತ್ತಗೆ. ಮಹಿಳಾ ಅಸ್ತಿತ್ವ ಹಾಗೂ ಅನನ್ಯತೆಯ ನೆಲೆಯಾದ ವಾಸಂತಿಯವರ ವ್ಯಕ್ತಿತ್ವ ಎಲ್ಲಾ ಕಾಲದ ಮಹಿಳೆಯರಿಗೆ ಸ್ಫೂರ್ತಿಯನ್ನೀಯು ವಂತಹದ್ದೂ ಹೌದು. ❑

ಬಲಿಯಾಗಬೇಕಾಗಿದೆ ಹೆಣ್ಣು

ಬಲಿಯಾಗಬೇಕಿದೆ ಹೆಣ್ಣು ಅವರ ಯಜ್ಞ-ಯಾಗಗಳಿಗೆ
ಮೂಕ ಪ್ರಾಣಿಯಂತೆ, ಬೆಂಕಿಗೆ ತುಪ್ಪ ಸುರಿದಂತೆ
ತುಪ್ಪವಾಗಬೇಕಿದೆ ಮಹಿಳೆ ಅವರ ಯಾಗಗಳಿಗೆ
ಅದು ಕೆಟ್ಟ ತುಪ್ಪವೆಂಬ ಆರೋಪದಲ್ಲಿ

ಬಣ್ಣ ಬದಲಿಸಿ, ತುಳಿದು ಬಾಳುವವರ ನಡುವೆ
ಹಿಂಸೆ ಮಾಡಿ, ಅಹಿಂಸೆ ಮಾತನಾಡುವವರ ನಡುವೆ
ದೂರ ಮಾಡಿ ದೌರ್ಜನ್ಯ ಮಾಡುವವರ ನಡುವೆ
ಬಲಿಯಾಗಬೇಕಿದೆ ಹೆಣ್ಣು ಬಲಾತ್ಕಾರದಿಂದ

ರಾಜಕಾರಣಿ ಅಲ್ಲವೆಂದು ಅಂಗರಾಜಕಾರಣ ಮಾಡಿದರು
ಜಾತ್ಯಾತಿತವೆಂದು ಜಾತಿ ಹಿಡಿದು ಮಾತನಾಡಿದರು
ಸಮಾನವೆಂದು ಅಸಮಾನತೆಯನ್ನು ಅನುಷ್ಠಾನಿಸಿದರು
ಬಲಿಯಾಗಬೇಕಿದೆ ಹೆಣ್ಣು ಬಲ ಇರುವವರ ನಡುವೆ


ಸಮಾನತೆಯ ತತ್ವದಲ್ಲಿ ಹೋರಾಟದ ಹುಮ್ಮಸ್ಸಿನಲ್ಲಿ
ಹಕ್ಕುಗಳ ಚಲಾವಣೆಯಲ್ಲಿ ಅಧಿಕಾರದ ದರ್ಪದಿಂದ
ಬಲಿಯಾಗಬೇಕಿದೆ ಹೆಣ್ಣು ಹರಕೆಯ ಕುರಿಯಂತೆ
ಅವರ ಐತಿಹಾಸಿಕ ಚರಿತ್ರೆಗಾಗಿ.

■ ಸರೋಜಾ ಸಿ ಸಂತಿ



ಬದುಕು ಕಟ್ಟಿಕೊಂಡ ಪರಿ

■ ಚಂದ್ರಮತಿ ಸೋಂದಾ



‘ಯಾಕವ್ವ ಬರಕ್ಕೆ ಹೇಳಿದ್ರಂತೆ’

‘ಅಲ್ಲ ಬೋರಮ್ಮ ಒಂದು ತಿಂಗಳಿಂದ ನಿನ್ ತಾವ ಮಾತಾಡದ್ಯೆತೆ ಬಾ, ಅಂದ್ರೆ ಬರಲಿಲ್ಲ’

‘ಅವತ್ತಿಂದ ನೀವ್ ಹೇಳ್ತಿದಿರಿ, ನಂಗೆ ಪುರಸತ್ತೇ ಆಗ್ನಿಲ್ಲ ಕಣ್ರವ್ವ’

‘ಆಯ್ತು, ಇವತ್ತಾದ್ರೂ ಒಂದಿಷ್ಟು ಹೊತ್ತು ಕೂತಕಳಕೆ ರೆಡಿನಾ?’

‘ಆಯ್ತು ಕಣವ್ವ, ಇವತ್ತು ನಿಮ್ ತಾವ ಮಾತಾಡಕ್ಕೆ ರೆಡಿಯಾಗಿ ಬಂದಿವ್ನಿ. ಅವತ್ತೆ ಹೇಳುದ್ರಿ ನೀವು. ನನ್ನ ಇಸ್ಯ ಏನೋ ಬರಿಯದ್ಯೆತೆ ಅಂತ. ಯೇನ..? ನಮ್ಮಂಥೋರ ಕತೆ ಕಟ್ಗಂಡು ಏನ್ಮಾಡೀರಿ?’

‘ಯಾಕೆ ಬೋರಮ್ಮ? ನಿಮ್ಮಂಥೋರ ಸುದ್ದಿ ಬರಿಬಾರ್ದ?’

‘ಅಯ್ಯ, ನಿಮ್ಮದು ಒಳ್ಳೆ ನಗಸಾರ. ಯೋನು ಕೇಳ್ಬಕು ಕೇಳವ್ವ’

‘ಅದೇ ನೀವು ಎಷ್ಟು ಜನ ಒಡಹುಟ್ಟೋರು?’

‘ನಾವಾ? ಎಂಟು ಜನ ಒಡುಟ್ಟೋರು, ನಾಕು ಗಂಡು, ನಾಕು ಹೆಣ್ಣು.

‘ಹೌದಾ? ನಿಮಗೆ ಎಷ್ಟು ವರ್ಷಕ್ಕೆ ಮದುವ್ಯಾತು?’

‘ನಂದಾ? ನೀರ ಹಾಕ್ಯಂಡು ಆರು ತಿಂಗ್ಳಾಗಿರ್ಬೋದು, ಹದ್ನಾಕು ವರ್ಸ ಇರಬೋದು, ಆಗ್ಲೆ ಮದುವೆ ಮಾಡುದ್ರು’

‘ಹೌದಾ? ನಿಮ್ದು ಹಳೇ ಸಂಬಂಧದಲ್ಲೇ ಮದ್ವೆನಾ?’

‘ಹೂಂ ಕಣವ್ವ, ಸ್ವಾದರತ್ತೆ ಮಗ’

‘ಗಂಡನ ಮನೇಲಿ ಚೆನ್ನಾಗಿ ನೋಡಿಕಂಡ್ರಾ?’

‘ಅದ್ನ ತಗಂಡು ಏನ್ಮಾಡೀರಿ. ಮದುವ್ಯಾಗಿ ಬರತಿದ್ದಾಂಗೆ ಗೆಯ್ಮೆ ಮಾಡಬೇಕಾಯ್ತು. ನಮ್ಮತ್ತೆ ಈಗ ಹಿಂಗವ್ಳೆ. ಆಗ ಒಸಿ ಮಾತಾಡ್ತಿದ್ಲ. ನಾನು ಹ್ಯಾಂಗೆ ಕೆಲ್ಸ ಮಾಡಿರೂ ಸರಿಯಾಗ್ತಿರನಿಲ್ಲ.’

‘ಸದ್ಯ ಹೊಡ್ದು ಬಡ್ದು ಮಾಡ್ತಿರಲಿಲ್ಲ ತಾನೆ?’

‘ಮತ್ತೆ ಬಿಟ್ಟಾರಾ? ಏನೇನಕ್ಕೋ ನಮ್ಮನೆಯವ್ನು ಹೊಡಿಯವ್ನು. ಒಂದ್ಸರಿ ಎಮ್ಮೆ ಮೇಯ್ಸಕ್ಕೆ ಹೋಗಿದ್ದೆ. ನಿದ್ದೆ ತಡಿನಾರ್ದೆ ಮರದ ಕೆಳಗೆ ಮನಿಕಬುಟಿದ್ದೆ. ಅದ್ಕೆ ಚನ್ನಾಗಿ ಹೊಡದಿದ್ದ’

‘ಮರದ ಕೆಳಗೆ ಮಲಗಿದ್ರೆ ಏನಂತೆ?’

‘ಯಾವನಾದ್ರೂ ಯತ್ತಾಕಂಡು ಹೋದ್ರೆ ಅಂತ’

‘ಅಂದ್ರೆ? ಹೆಂಡತಿ ಮೇಲೆ ಸಂಶಯ?’

‘ಗಂಡ್ಸಲ್ವವ್ವ’

‘ಒಮ್ಮೆ ಯಾವಾಗ್ಲೋ ಹೊಡದ್ರೂ ಊಟ ಬಟ್ಟೆಗೇನು ತೊಂದರೆ ಇರ್ಲಿಲ್ವಲಾ?’

‘ಅದ್ಕೇನು ತೊಂದ್ರೆ ಇರ್ನಿಲ್ಲ ಕಣವ್ವ, ಒಸಿ ಜಮೀನಿತ್ತು. ಮನಿಗೆ ಆಗಷ್ಟು ಜ್ವಾಳ, ರಾಗಿ, ಅಳ್ಳು (ಹರಳು) ಬೆಳೆತಿದ್ದೊ. ಊಟಕ್ಕೆ ಸಾಕಾಗದು. ಉಳುದ್ ಖರ್ಚಿಗೆ ನಮ್ಮನೆಯವ್ನು ಕೆಲ್ಸ ಮಾಡಿ ಅಷ್ಟೋ ಇಷ್ಟೋ ತತ್ತಿದ್ದ. ಅದ್ರಗೆ ಸಂಸಾರ ನಡಿತಿತ್ತು’

‘ಓಹೋ! ನಿಮ್ಗೆ ಹೊಲ ಇತ್ತು. ಈಗ?’

‘ಈಗೆಲ್ಲಿ ಇದ್ದದು? ಗೋರ್ಮೆಂಟ್ನೋರು ನಮ್ಮ ಜಮೀನ ಕಿತ್ಕಬುಟ್ರು. ಈಗ ನೀವಿರ ಹೆಬ್ಬಾಳೆಲ್ಲ ನಮ್ಮೂರೋರ ಹೊಲ ಆಗಿದ್ವು, ನಮ್ಮ ಹೊಲ ಕಿತ್ಕೊಂಡು ಒಸಿ ದುಡ್ಡು ಕೊಟ್ರು. ಜತಿಗೆ ನಮ್ಗೆ ನಮ್ ಚಿಕ್ಕ ಮಾವೋರಿಗೆ ಸೈಟ್ನೂ ಕೊಟ್ರು. ಅದರಲ್ಲಿ ರಾಗಿ ಬೆಳೆಯಕ್ಕೆ ಆದದ? ನಾಕು ಹೈಕ್ಳನ್ನು ಸಾಕದ್ ಬ್ಯಾಡ್ವಾ? ಹಸು

ಕಟ್ಗಂಡು ನಿಮ್ ಹೆಬ್ಬಾಳಕ್ಕೆಲ್ಲ ಹಾಲು ಹಾಕ್ದೆ. ನಾಕು ಹೆಣ್ಮಕ್ಳನ್ನು ಮದ್ವೆನೂ ಮಾಡ್ದೆ ಕಣವ್ವ'

'ಹಾಗಾ? ನೀವು ಯಾವಾಗಿಂದ ಹಾಲು ಹಾಕಕ್ಕೆ ಶುರು ಮಾಡಿದ್ದು?'

'ನಿಮ್ಗೆ ಗೊತ್ತಿಲ್ವವ್ವ, ನೀವು ಇಲ್ಲಿಗೆ ಬಂದಾಗ್ಲಿಂದ. ಒಂದು ಇಪ್ಪತ್ವರ್ಸ ಆಗಿರ್ಬೋದಾ?'

'ಆವಾಗಿಂದನೂ ಹಾಲಿಗೆ ಅಂತ ಹಸು ಎಮ್ಮೆ ಕಟ್ಟಿದೀರ?'

'ಹೂಂ, ಮೂರು ನಾಕು ಎಮ್ಮೆ ಕಟ್ತಿದ್ದೆ. ಎರಡು ಸರಿ ಎಮ್ಮೆ ಕಳುದೋದ್ವು. ನಮ್ಮ ಗೌಡ ಬಾಯಿ ರುಚಿಗೆ ಓಟ್ಲು ತಾವ ಕುಂತುಬುಡೋನು. ಅವು ಎಲ್ಲೋ ಹೋಗ್ತಿದ್ವು, ಇವ್ನ ತಾವ ಏಗಕಾಗಾಕಿಲ್ಲ ಅಂತ ಎಮ್ಮೆ ಮಾರಾಕಬುಟೆ. ಈಗ ಎರಡು ವರ್ಸದಿಂದ ಎಮ್ಮೆ ಇಲ್ಲ ಕಣವ್ವ, ಹಸ ಕಟ್ಟೋರ ತಾವ ಹಾಲು ತಕಂಡು ವರ್ತ್ನೇ ಮನಿಗೆ ಹಾಕ್ತೀನಿ'

'ನೀವೇನೋ ಹಾಲು ಹಾಕಿ ಮನೇನ ನಡಸ್ತೀರಿ, ಅದೇನೋ ಸರಿ. ನಿಮ್ ಗೌಡ್ರು ಏನ್ಮಾಡ್ತಾರೆ?'

'ಮೊದ್ಲು ಎರಡು ಹೊತ್ತು ನನ್ ಜೊತಿಗೆ ಹಾಲು ತಕಂಡು ಬರೋನು. ಎರಡ್ಮನೆಯವ್ರು ದುಡ್ಡು ಅವ್ನಿಗೆ ಕೊಡೋರು. ಆಪರೇಸನ್ ಆದ್ಮೇಲೆ ಸಂಜೆ ಬರಾಕಿಲ್ಲ. ಬೆಳಗ್ಗೆ ಎರಡ್ಮನಿಗೆ ಹಾಲು ಹಾಕ್ತವ್ನೆ. ಒಂದು ಮನೆ ದುಡ್ಡು ನೀನೇ ಮಡಿಕ ಅಂದಿವ್ನಿ ಕಣವ್ವ, ಗಂಡಸಲ್ವಾ? ಖರ್ಚಿರ್ತದೆ'

'ನಿಮ್ ಮಕ್ಳು ಯಾರೂ ಶಾಲೆಗೆ ಹೋಗಲಿಲ್ವಾ?'

'ದೊಡ್ಡ ಎರಡು ಹೈಕ್ಳು ಹೋಗನಿಲ್ಲ. ನಮ್ ಮಂಜಿ, ರತ್ನೀ ಇಸ್ಕೂಲಿಗೆ ಹೋದ್ವು, ಅದೇನೋ ಅಂಥಾರಲ್ಲ. ಎಸ್ಸೆಲ್ಸಿ ಗಂಟ ಓದಿದ್ವು'

'ನಾಕೂ ಹೆಣ್ಣಾದ್ವು, ಗಂಡು ಮಕ್ಳಿಲ್ಲ ಅಂತ ಬೇಜಾರಾಗ್ಲಿಲ್ವಾ?'

'ಆಗ್ನಿಲ್ಲ ಅಂತ ಸುಳ್ಳು ಹೇಳಕಿಲ್ಲ. ಅದು ನಮ್ಮ ಕೈಯಾಗ ಐತಾ? ದೇವ್ರು ಕೊಡ್ಬೇಕು ಅಲ್ವವ್ವಾ?'

'ಹೂಂ. ನಾಕು ಹೆಣ್ಮಕ್ಳು ಮದುವೆ ಮಾಡಿದೀಯೆ. ಮುಡಾ ನಿಮಗೆ ಒಂದು ಸೈಟ್ ಕೊಟ್ಟಿತ್ತಲ್ಲ, ಅದನ್ನ ಉಳಿಸಿಕೊಂಡಿದೀರ? ಮಾರ್ಬಿಟ್ರ?'

'ಮಾರ್ನಿಲ್ಲ. ನಿಮ್ಮಂಥೋರ ತಾವ ಸಾಲ ಮಾಡಿ ಮದ್ವೆ ಮಾಡ್ದೆ. ಸಾಲನೂ ತೀರಸ್ದೆ. ಹೆಬ್ಬಾಳ್ದಲ್ಲಿ ನಮ್ ಸೈಟ್ ಇತ್ತಲವ್ವ, ಆ ಸೈಟ್ನ ಈಗ ಎರಡು ವರ್ಸದಾಗೆ ನಮ್ಮನೆಯವ್ನು ಮಾರಕ್ಕೆ ಹೊಂಟಿದ್ದ, ನಮ್ಮ ಹೈಕ್ಳು ಸೈನ್ ಮಾಡಾಕಿಲ್ಲ ಅಂದ್ವು, ಹಂಗಾಗಿ ಉಳಕಂಡದೆ'

'ಯಾಕೆ ಮಾಡದಿಲ್ಲ ಅಂದ್ರು ನಿಮ್ಮ ಹೆಣ್ಮಕ್ಕಳು'

'ಇನ್ನೆಷ್ಟು ದಿನ ಹಿಂಗೆ ಗೆಯ್ದೀರಿ? ಕೈಲಾಗದ್ದ ಕಾಲಕ್ಕೆ ಅದ್ನ ಮಾರ್ಕಂಡು ಕುಂತು ಉಣ್ಣಿವ್ರಿ ಅಂದ್ವು'

'ಹಾಗಾದ್ರೆ ಈಗ ನಿಮ್ಮ ಹತ್ರ ಉಳಿದಿರದು ಅದೊಂದೇ ಆಸ್ತಿ?'

'ಮನೆ ತಾವು ಆರು ಕುಂಟೆ ಜಾಗ ಇತ್ತು ಕಣವ್ವ, ನಮ್ಮ ಚಿಕ್ಕ ಮಾವನ ಸೊಸೆ ಕೋರ್ಟಿಗೆ ಹೋಗಿದ್ಲು. ಅದು ನಮ್ಮಂತೆ ಆಗಿತ್ತು. ಅವ್ಳು ಅಲ್ಲಿ ಕಾಲಿಡಕ್ಕೆ ಕೊಡನಿಲ್ಲ. ಯಾರೋ ರೌಡಿಗಳಿಗೆ ನಮ್ಮನೆಯವ್ನು ಮಾರಿಹಾಕ್ದ. ಅವ್ನು ಮಾತಾಡಿದಷ್ಟು ದುಡ್ಡು ಕೊಡನಿಲ್ಲ. ಒಂದಿಷ್ಟು ಬಂತು. ಸಾಲ ತೀರಿಸಗಂಡ್ವಿ, ಐವತ್ತು ಐವತ್ತು ಹೆಣ್ಮಕ್ಳಿಗೆ ಕೊಟ್ವಿ'

'ಮತ್ತೆ ನಿಮ್ ಗೌಡ್ರ ಆಪರೇಶನ್ನು?'

'ನಾಕೂ ಹೈಕ್ಳು ಮುಂದಾಗಿ ದುಡ್ಡು ಹಾಕಿ ಆಪರೇಶನ್ ಮಾಡ್ಸಿದ್ವು ಅದ್ಕೆ 'ನಾ ಕೊಟ್ಟ ದುಡ್ನ ನನ್ನ ಆಪರೇಸನ್ನಿಗೆ ಕೊಟ್ವು, ಅದ್ರಲ್ಲೇನು ಹೆಚ್ಚುಗಾರಿಕೆ' ಅಂತಾನಲ್ಲವ್ವ ಇವ್ನು. ನಮ್ ಕಾಲ ಇಂಗೆ ಕಳೀತು. ಅವ್ರಾರು ಚಂದಾಗಿ ಬಾಳದು ಬ್ಯಾಡವವ್ವ'

'ಸರಿ ಬೋರಮ್ಮ, ನೀವು ನಿಮ್ಮ ಹೆಣ್ಮಕ್ಳಿಗೆ ದುಡ್ಡು ಕಾಸು ಕೊಡ್ಬೇಕು ಅಂತೀರಿ. ನಿಮ್ಗೆ ನಿಮ್ಮ ತವರ್ಮನೆಯಿಂದ ಏನಾದ್ರೂ ಕೊಟ್ರಾ?'

'ಇಲ್ಲಿ ಗಂಟ ಏನೂ ಕೊಡನಿಲ್ಲ. ಈಗ ಅಣ್ಣತಮ್ಮದಿರು ಪಾಲಾಗಕ್ಕೆ ಹೊಂಟವ್ರೆ, ನಮಗೆ ಪಾಲು ಕೊಡ್ಲೇಬೇಕು ಅಂತ ನಾವೂ ಹಟ ಹಿಡ್ದು ಕುಂತೀವಿ'

'ಹೌದಾ? ಎಷ್ಟು ಹೊಲ ಕೊಡ್ತಾರಂತೆ?'

'ಹೊಲ ಎಲ್ಲೈತೆ? ಊರು ಬೆಳದ್ಬುಟ್ವದೆ. ಎಲ್ಲ ಸೈಟ್ ಮಾಡ್ತಾರಂತೆ. ನಮಗೂ ಮೂವತ್ತು ನಲವತ್ತು ಸೈಟ್ ಕೊಡಿ ಅಂತ ಕೇಳಿದೀವಿ ಕಣವ್ವ'

'ಕೊಡದಿದ್ರೆ?'

'ಹಂಗೆ ಸುಮ್ನೆ ಬಿಟ್ಟೇವ? ಈಗೇನೋ ನಮ್ಮ ಸೈನು ಬೇಕೇ ಬೇಕಂತಲವ್ವ'

'ಹೋಗ್ಲಿ ಸೈನ್ ಮಾಡಕ್ಕೆ ಬರುತ್ತಾ?'

'ಎಬ್ಬೆಟ್ಟೆ ಅನ್ನಕಿ. ಅದ್ನೂ ಕೊಡಾಕಿಲ್ಲ'

'ಅಂತೂ ನಿಮಗೆ ಲಾ ಪಾಯಿಂಟ್ ಗೊತ್ತಿದೆ'

'ಓದಾಕೆ ಬರಿಯಾಕೆ ಬರಾಕಿಲ್ಲ ಅಂತ ಇಸ್ಯ ತಿಳಕಳ್ದಿದ್ರೆ ಈ ಬಡ್ಡೆತ್ತವು ನಮಗೆ ಏನೂ ಕೊಡಾಕಿಲ್ಲ. ನಮ್ಮನೆಯವ್ನೇ ಹೆಣ್ಮಕ್ಳಿಗೆ ಕೊಡದ್ಯಾಕೆ ಅಂತಾನೆ. ನಮ್ ಅಣ್ಣತಮ್ಮದೀರು ಕೊಟ್ಟಾರಾ?'

'ಅಂತು ಬದುಕ್ಮಾಡಕೆ ಬೇಕಾದಷ್ಟು ಬುದ್ಧಿ, ಬಾಯಿ ಎರಡೂ ಇದೆ ನಿಮಗೆ'

'ಅಯ್ಯೋ! ಬಾಯಿ ಇರ ಹೊತ್ಗೆ ಬದುಕ್ದೆ ಕಣವ್ವ'


'ಅಲ್ಲ ಬೋರಮ್ಮ, ಮನೇಲಿ ಇಷ್ಟು ತೊಂದ್ರೆ ಇದ್ರೂ ಎಲ್ಲರ ಜೊತೆ ನಗ್ತಾ ಮಾತಾಡ್ತೀರಿ? ನೀವು ಕೊಡ ಹಾಲು ನೀರು ಅಂದ್ರೆ ನಿಮ್ಗೆ ಪೌಡ್ರು ಹಾಕಿದ್ ಡೈರಿ ಹಾಲೇ ಸರಿ ಅಂತ ಜೋರು ಹೊಡಿತೀರಿ?'

'ಏನೋ ಬದುಕದ್‌ಬೇಡ್ವವ್ವ, ಮೊಕ ಊದಿಸ್ಕಂಡ್ರೆ ಬಾ ಒಸಿ ನಮ್ಮನೆ ಪಾತ್ರೆ ತೊಳಕೊಡು, ಮನೆ ಒರಸ್ಕೊಡು ಅಂತ ಯಾರು ಕರಿತಾರವ್ವ?'

'ಅಂತೂ ಬಾಳ್ವೆ ಮಾಡದು ಹ್ಯಾಂಗೆ ಅಂತ ಚೆನ್ನಾಗಿ ಕಲ್ತಿದೀರಿ'

'ಅದ್ಕೆ ಹೆಬ್ಬಾಳಲ್ಲಿ ಎಲ್ಲ ಬೋರವ್ಮ ಅಂತ ಮಾತಾಡುಸ್ತವ್ರೆ, ಅಯ್ಯ! ಟೇಮಾಯ್ತು ಕಣವ್ವ, ಕೊನೇ ಮನೆಯವ್ರು ಸೊಪ್ಪು ಬೇಕು ಅಂದವ್ರೆ, ಕಿತ್ಗಂಡು ಬಂದು ಕೊಡ್ಬೇಕು. ಹಾಲು ಕರಸ್ಕಬೇಕು. ಕೆಲ್ಸ ಬಿದ್ದದೆ. ಈಗ ಹೊಯ್ತೀನಿ. ಇನ್ನೇನಾರ ಕೇಳದಿದ್ರೆ ಇನ್ನೊಂದಿನ ಬತ್ತೀನಿ'

'ಆಯ್ತು ಬೋರಮ್ಮ, ನಿಮ್ಮ ಕೆಲ್ಸ ಮಾಡ್ಕಳಿ' ■





ಕನ್ನಡ ಜಾನಪದ ಅಧ್ಯಯನಗಳಲ್ಲಿ 'ಮಹಿಳಾ' ಅನನ್ಯತೆಯ ನೆಲೆಗಳು

■ ಡಾ.ಅರುಣ್ ಜೋಳದಕೂಡ್ಲಿಗಿ

ಕನ್ನಡ ಜಾನಪದ ಅಧ್ಯಯನಗಳಲ್ಲಿ 'ಮಹಿಳಾ' ಅನನ್ಯತೆ ಗುರುತಿಸುವಿಕೆಗೆ ಹಲವು ಆಯಾಮಗಳಿವೆ. 'ಮಹಿಳಾ ಜಾನಪದ' 'ಸ್ತ್ರೀ ಜಾನಪದ' ಅಂತಲೇ ಅಧ್ಯಯನ ಶಾಖೆಯೊಂದು ತೆರೆದುಕೊಂಡಿದೆ. ಲೋಕದ ಸಮಸ್ತವನ್ನು ಸ್ತ್ರೀಕೇಂದ್ರಿತ ವಾದ ಲೋಕದೃಷ್ಟಿಯಿಂದ ನೋಡುವ ಆಲೋಚನೆಯೊಂದು ಈಗ ಪ್ರಸ್ತುತವಾಗುತ್ತಿದೆ. ಮಹಿಳಾ ಅನನ್ಯತೆಯನ್ನು ಗುರುತಿಸುವಿಕೆಯ ಹಿಂದೆಯೂ ಈ ಆಲೋಚನೆಯ ಒತ್ತಡವಿರುವುದನ್ನು ಅಲ್ಲಗಳೆಯುವಂತಿಲ್ಲ. ಮಹಿಳಾ ಜಾನಪದ ಪರಿಕಲ್ಪನೆಯನ್ನು ವಿವರಿಸುತ್ತ ಪುರುಷೋತ್ತಮ ಬಿಳಿಮಲೆಯವರು "...ಮಹಿಳಾ ಜಾನಪದವು ಕೇವಲ ಶೈಕ್ಷಣಿಕವಾದ, ಬೌದ್ಧಿಕವಾದ ಒಂದು ಕೆಲಸವಲ್ಲ, ಬದಲು ಜಾನಪದ ಮಾಹಿತಿಗಳ ಮೂಲಕ ಸ್ತ್ರೀವಾದದ ತಾತ್ವಿಕ ನೆಲೆಗಳನ್ನು ವಿಸ್ತರಿಸುವ, ಸ್ತ್ರೀವಾದ ಹೋರಾಟಕ್ಕೆ ಅಗತ್ಯವಾಗಿರುವ ಚರಿತ್ರೆಯೊಂದನ್ನು ಕಟ್ಟುವ ಕೆಲಸವಾಗಿರುತ್ತದೆ. ಜಾನಪದ ಪಠ್ಯ ಮತ್ತು ನಿರೂಪಣೆಗಳಲ್ಲಿ ಮಹಿಳೆಯರೇ ಪ್ರಧಾನ ಸ್ಥಾನ ವಹಿಸಿರುವುದರಿಂದಾಗಿ, ಇಂಥ ಕೆಲಸವನ್ನು ಜರೂರಾಗಿ ಮಾಡಲೇ ಬೇಕಾಗಿರುವ ಅನಿವಾರ್ಯತೆಯೂ ನಮ್ಮ ಮುಂದಿದೆ (ಬಿಳಿಮಲೆ, ಕೂಡುಕಟ್ಟು, ಪು:೨೧೮)ಎನ್ನುತ್ತಾರೆ. ಇದು ಮಹಿಳಾ ಅನನ್ಯತೆಯನ್ನು ಗುರುತಿಸಿಕೊಳ್ಳುವ ತಾತ್ವಿಕ ಪ್ರಮೇಯವೂ ಹೌದು.

ಮುಖ್ಯವಾಗಿ ಕನ್ನಡದಲ್ಲಿ ಜನಪದ ಎನ್ನುವ ವ್ಯಾಪ್ತಿಯಲ್ಲಿ ಸಂಗ್ರಹಿಸಲಾದ, ವಿವರಿಸಲಾದ ವಿವರಗಳಲ್ಲಿ 'ಮಹಿಳೆ' ಹೇಗೆ ಪ್ರಾತಿನಿಧ್ಯ ಪಡೆದಿದ್ದಾಳೆ ಎನ್ನುವುದನ್ನು ನೋಡಬೇಕು. ಜಾನಪದದ ಮೌಖಿಕ ಸಾಹಿತ್ಯಕ ಪ್ರಕಾರಗಳಲ್ಲಿ, ಜಾನಪದದ ಭೌತಿಕ ರೂಪಗಳಲ್ಲಿ ಸಾಮಾಜಿಕ ಸಂಪ್ರದಾಯಗಳಲ್ಲಿ, ಪ್ರದರ್ಶನ ಕಲೆಗಳಲ್ಲಿ 'ಮಹಿಳೆ'ಯ ಅಭಿವ್ಯಕ್ತಿ ಮತ್ತು ಮಹಿಳೆಯ ಕುರಿತು ತಳೆಯುವ ನಿಲುವುಗಳನ್ನು ಪರಿಶೀಲಿಸುತ್ತ ಮಹಿಳಾ ಅನನ್ಯತೆಯನ್ನು ವಿವರಿಸಿಕೊಳ್ಳಬೇಕಿದೆ. ಪುರುಷೋತ್ತಮ ಬಿಳಿಮಲೆಯುವರು ಕರ್ನಾಟಕದ ಜಾನಪದವನ್ನು ಮಹಿಳಾ ದೃಷ್ಟಿಕೋನದಿಂದ ಪರಿಶೀಲಿಸಿ ಅದರಲ್ಲಿ ಪ್ರಮುಖವಾದ ಮೂರು ಬಗೆಯ ರಚನೆಯನ್ನು ಗುರುತಿ ಸುತ್ತಾರೆ.

ಅ. ಗಂಡಿನ ಪರಮಾಧಿಕಾರವನ್ನು ಒಪ್ಪಿಕೊಂಡಿರುವ ಸ್ತ್ರೀವಿರೋಧಿ ರಚನೆಗಳು. ಇವನ್ನು ಗಂಡಸರೂ ಸೃಷ್ಟಿಸಿಕೊಂಡ ಹಾಗೆ ಸ್ವತಃ ಹೆಂಗಸರೂ ಸೃಷ್ಟಿಸಿಕೊಂಡಿದ್ದಾರೆ.

ಆ. ಹೆಣ್ಣಿನ ಪರಮಾಧಿಕಾರವನ್ನು ಸಾರುವ ರಚನೆಗಳು. ಇಲ್ಲಿ ಗಂಡಸಿನ ಅಧಿಕಾರ ಸಂಪೂರ್ಣವಾಗಿ ನಿರ್ನಾಮವಾಗಿರುತ್ತದೆ.

ಇ. ಗಂಡು ಹೆಣ್ಣು ಲಿಂಗ ವ್ಯತ್ಯಾಸವನ್ನು ಧಾರ್ಮಿಕ ವಲಯದಲ್ಲಿ ಮೀರಿರುವ ಲಿಂಗಾತೀತ ರಚನೆಗಳು. ಜೇಡರ ದಾಸಿಮಯ್ಯ ಹೇಳುವ "ನಡುವೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣು ಅಲ್ಲ" ಎಂಬಂಥ ಸ್ಥಿತಿ ಇಲ್ಲಿದೆ. (ಇದೇ ಪು: ೨೨೪).

ಹೀಗೆ ಪ್ರಮುಖವಾಗಿ ಮೂರು ಬಗೆಯ ಲಕ್ಷಣಗಳನ್ನು ಗುರುತಿಸುತ್ತಾರೆ. ಮಹಿಳಾ ಅನನ್ಯತೆಯನ್ನು ಗುರುತಿಸುವಾಗ ಈ ಲಕ್ಷಣಗಳನ್ನು ಗುರುತಿಟ್ಟುಕೊಂಡು ವಿಶ್ಲೇಷಿಸುವುದು ಒಳಿತು. ಇನ್ನು ಜಾನಪದ ಅಧ್ಯಯನಗಳ ಕುರಿತು ಹೇಳುವುದಾದರೆ, ಜನಪದ ಆಕರಗಳನ್ನು ವಿಶ್ಲೇಷಿಸುತ್ತ ಮಹಿಳೆಯನ್ನು ಹೇಗೆ ವಿಶ್ಲೇಷಿಸಿದ್ದಾರೆ ಎನ್ನುವುದನ್ನು ಗುರುತಿಸಬಹುದು. ಎರಡನೆಯದಾಗಿ ಪುರುಷ ಅಧ್ಯಯನಕಾರರು, ಮಹಿಳಾ ಅಧ್ಯಯನಕಾರರು 'ಮಹಿಳೆ'ಯನ್ನು ಚಿತ್ರಿಸುವ ಭಿನ್ನತೆಗಳನ್ನು ಗುರುತಿಸುವುದು. ಮೂರನೆಯದಾಗಿ ಕನ್ನಡದ ಒಟ್ಟು ಜಾನಪದ ಅಧ್ಯಯನಗಳಲ್ಲಿ ಮಹಿಳೆಯ ಪ್ರಧಾನ ಚಿತ್ರಣಗಳೇನು ಎಂದು ವಿವರಿಸಿಕೊಳ್ಳಬಹುದು.

ಕನ್ನಡದಲ್ಲಿ ಜಾನಪದ ವಿದ್ವಾಂಸರ ವಿಶ್ಲೇಷಣೆಗಳಲ್ಲಿ ಮಹಿಳೆಯ ಕುರಿತು ಬಹುರೂಪಿ ವ್ಯಾಖ್ಯಾನಗಳಿವೆ. ಈಚೆಗೆ ಡಾ. ಶೈಲಜ ಹಿರೇಮಠ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ಮಹಿಳಾ ಸಾಹಿತ್ಯ ಚರಿತ್ರೆ' ಸಂಪುಟದಲ್ಲಿ ಬರೆದ 'ಮಹಿಳಾ ಜಾನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನಗಳ ಚರಿತ್ರೆ"(ಶ್ರೀಮತಿ ಎಚ್.ಎಸ್. (ಸಂ) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪು: ೫೧೧) ಇಂತಹ ಬಹುರೂಪಿ ನೆಲೆಗಳನ್ನು ತಾತ್ವಿಕವಾಗಿ ವಿಶ್ಲೇಷಣೆಗೆ ಒಡ್ಡಿದ್ದಾರೆ. ಪುರೋಷೋತ್ತಮ ಬಿಳಿಮಲೆ ಅವರು ಮಹಿಳಾ ಜಾನಪದ ಪರಿಕಲ್ಪನೆ ಕುರಿತು ತಾತ್ವಿಕವಾಗಿ ಚರ್ಚಿಸಿದ್ದಾರೆ. ಕೆ.ಆರ್. ಸಂಧ್ಯಾರೆಡ್ಡಿ ಅವರು ಮಹಿಳಾ ನೆಲೆಯಲ್ಲಿ ಜಾನಪದವನ್ನು ವಿಶ್ಲೇಷಿಸಿದ್ದಾರೆ ಮತ್ತು ಮಹಿಳಾ ಜಾನಪದ ಎನ್ನುವ ಕೃತಿಯನ್ನು ಸಂಪಾದಿಸಿದ್ದಾರೆ. ಗಾಯತ್ರಿನಾವಡ ಅವರ ಜಾನಪದ ವಿಶ್ಲೇಷಣೆಗಳಲ್ಲಿ ಮಹಿಳಾ ಜಾನಪದ ಕುರಿತ ಭಿನ್ನ ಚರ್ಚೆಯನ್ನು ಮಾಡಿದ್ದಾರೆ. ಹೀಗೆ ಇನ್ನೂ ಹಲವಾರು ವಿದ್ವಾಂಸರು ಮಹಿಳಾ ಅನನ್ಯತೆ ಗುರುತಿಸುವ ಚಿಂತನೆಯನ್ನು ಬೆಳೆಸಿದ್ದಾರೆ.

ಕನ್ನಡದಲ್ಲಿ ಜಾನಪದ ಅಧ್ಯಯನಗಳ ಮೇಲೆ ಪಶ್ಚಿಮದ ಜಾನಪದ ಚಿಂತನೆಗಳ ಪ್ರಭಾವವಿದೆ ಎಂದು ವಿವರಿಸುತ್ತೇವೆ. ಈ ಪ್ರಭಾವ ಕೇವಲ ಪುರುಷ ಅಧ್ಯಯಕಾರರದೇ ಹೊರತು ಮಹಿಳಾ ಅಧ್ಯಯನಕಾರ್ತಿಯರದಲ್ಲ. ಅದರಲ್ಲೂ ಕರ್ನಾಟಕದಲ್ಲಿ ಅಧ್ಯಯನ ಮಾಡಿದ ಪಶ್ಚಿಮದ ಮಹಿಳಾ ಅಧ್ಯಯನಕಾರ್ತಿಯರ ಚಿಂತನೆಯ ಜೊತೆಗೆ ಕನ್ನಡದಲ್ಲಿ ಮುಖಾಮುಖಿ ನಡೆದಿಲ್ಲ. ಜಾಗತಿಕವಾಗಿ ಗ್ರಿಮ್ ಬ್ರದರ್ಸ್‌ರನ್ನು ಜಾನಪದ ಅಧ್ಯಯನದ ಮೊದಲಿಗರೆಂದು ವಿಶ್ಲೇಷಿಸುತ್ತೇವೆ. ಆದರೆ ಅವರು ಸಂಗ್ರಹಿಸಿದ ಕಥೆಗಳ ನಿರೂಪಕಿ ಡೊರೆಥಿಯಾ ವೈಲ್ಡ್‌ನ್ನು ಮರೆಯುತ್ತೇವೆ. ಇವಳು ಗ್ರಿಮ್ ಬ್ರದರ್ಸ್ ಜಾನಪದ ಅಧ್ಯಯನಕ್ಕೆ ಪ್ರೇರಕ ಶಕ್ತಿಯಾಗಿದ್ದಳು. ಕ್ರಿಯಾತ್ಮಕ ಸಿದ್ಧಾಂತ ಮಂಡಿಸಿದ 'ಫ್ರಾಂಚ್ ಬೊವಾಸ್' ಹೆಚ್ಚು ಚರ್ಚೆಗೊಳಗಾಗುತ್ತಾನೆ. ಆದರೆ ಪ್ರತಿಸಿದ್ಧಾಂತವನ್ನು ರೂಪಿಸಿದ ಆತನ ಶಿಷ್ಯೆ ರೂತ್ ಬೆನೆಡಿಕ್ಟ್ ಅಮುಖ್ಯಳಾಗುತ್ತಾಳೆ. ಜನಪದ ಕಥೆಗಳು ಸಂಸ್ಕೃತಿಯನ್ನು ಬಿಂಬಿಸುತ್ತವೆ ಎಂದು ಬೊವಾಸ್ ಹೇಳಿದರೆ, ಬೆನೆಡಿಕ್ಟ್ ಸಂಸ್ಕೃತಿಯಲ್ಲಿಲ್ಲದ ಸಂಗತಿಗಳನ್ನು ಕತೆಗಳು ಹೇಳುತ್ತವೆ ಎಂದು ನಿರೂಪಿಸುತ್ತಾಳೆ. ಆದರೆ ಬೆನೆಡಿಕ್ಟ್ ಚಿಂತನೆ ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಕನ್ನಡ ಜಾನಪದ ಅಧ್ಯಯನಕಾರರಿಗೆ ಪ್ರೇರಣೆಯೂ ಆಗಲಿಲ್ಲ.

ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ಅವೈದಿಕ ಸಂಸ್ಕೃತಿಯೇ ಸೂಕ್ತ ಮಾರ್ಗ ಎಂದು ಸಾಂತಮೈರ್ ಶಿಷ್ಯೆ ಜರ್ಮನಿಯ ಬ್ರೂಕ್ನರ್ ಹೈಡ್ರನ್ ಹೇಳುತ್ತಾಳೆ. ಇವಳು ಕರಾವಳಿ ಕರ್ನಾಟಕದ ಭೂತಗಳ ಕುರಿತು ಅಧ್ಯಯನ ಮಾಡಿದ್ದಾಳೆ. ಇವರ ವಿಶ್ಲೇಷಣೆ ಸ್ತ್ರೀವಾದಿ ನೆಲೆಯಿಂದ ಮಹತ್ವದ್ದು, ಆದರೆ ಬ್ರೂಕ್ನರ್ ಅಧ್ಯಯನ ಕನ್ನಡದಲ್ಲಿ ಹೆಚ್ಚು ಚರ್ಚೆಯಾಗಲಿಲ್ಲ. ದಕ್ಷಣ ಏಷಿಯಾದ ಹೆಂಚೆಟ್ ಸುಸಾನ್ ಕರ್ನಾಟಕದ ಹಾಸನ ಜಿಲ್ಲೆಯ ಬಂಡೀಪುರ ಅಥವಾ ಚಿನ್ನಾಪುರದ ಹಿಂದು ಧರ್ಮದ ಒಂದು ಕುಟುಂಬವನ್ನು ಆಳವಾಗಿ ಅಭ್ಯಸಿಸಿದ್ದಾರೆ. ಅವರ Colored Rice(1988) ಕೃತಿಯಲ್ಲಿ ಜಾನಪದದಲ್ಲಿ ಮಹಿಳಾ 'ಅದೃಶತೆ'ಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಅಮೇರಿಕೆಯ ಮಾರ್ತಾ ಆ್ಯಸ್ಟನ್‌ಸಿಕೋರಾ ಕರ್ನಾಟಕದ ಬಡಗುತಿಟ್ಟು ಯಕ್ಷಗಾನದ ರಂಗ ಪರಂಪರೆಯನ್ನು ತುಂಬಾ ಸೂಕ್ಷ್ಮವಾಗಿ ಗಮನಿಸಿದ್ದಾರೆ. ಫಿನ್ಲೆಂಡಿನ ಸಿಕಾಲಾ ಅನ್ನಾಲಿನಾ ಅವರು ಜಾಗತಿಕವಾಗಿ ಮಹಿಳಾ ಜಾನಪದವನ್ನು ತುಂಬಾ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಕನ್ನಡದಲ್ಲಿ ಮಹಿಳಾ ಅನನ್ಯತೆ ಗುರುತಿಸುವಲ್ಲಿ ಈ ಮೇಲೆ ಉಲ್ಲೇಖಿಸಿದ ಯಾವೊಬ್ಬ ಜನಪದ ವಿದ್ವಾಂಸೆಯರ ಚಿಂತನೆ ಪ್ರಭಾವಿಸದಿರುವುದು ಆಶ್ಚರ್ಯ. ಜಾಗತಿಕವಾಗಿ ರೋಜನ್ ಎ. ಜೋರ್ಡನ್ ಸುಸನ್ ಜೆ. ಕಲಿಕ್ ಸಂಪಾದಿಸಿರುವ 'ವುಮೆನ್ಸ್ ಫೋಕ್‌ಲೋರ್ ವುಮೆನ್ಸ್ ಕಲ್ಚರ್' ಎನ್ನುವ ಕೃತಿಯಲ್ಲಿ ಮಹಿಳಾ ಜಾನಪದವನ್ನು ಭಿನ್ನವಾಗಿ ವಿಶ್ಲೇಷಿಸಲಾಗಿದೆ. ಮಹಿಳಾ ಪ್ರತಿರೋಧದ ನೆಲೆಯ ಚಿಂತನೆ ಈ ಕೃತಿಯಲ್ಲಿದೆ. ಈ ತಿಳಿವಳಿಕೆ ಕನ್ನಡಕ್ಕೆ ಇನ್ನೂ ಬಂದಿಲ್ಲ. ಕನ್ನಡದಲ್ಲಿ ನಡೆದ ಜಾನಪದ ಅಧ್ಯಯನಗಳನ್ನು ಗಮನದಲ್ಲಿಟ್ಟು ಕೊಂಡು ಮಹಿಳಾ ಅನನ್ಯತೆಯ ಟಿಪ್ಪಣಿಗಳನ್ನು ದಮನಿತ ನೆಲೆ, ಪ್ರತಿರೋಧದ ನೆಲೆ, ಸ್ವಾತಂತ್ರ್ಯದ ನೆಲೆ ಎಂಬ ಘಟಕಗಳಲ್ಲಿ ಗುರುತಿಸಲು ಪ್ರಯತ್ನಿಸುವೆ.

ದಮನಿತ ನೆಲೆ

ಕನ್ನಡ ಜಾನಪದ ಅಧ್ಯಯನಗಳಲ್ಲಿ ಮಹಿಳೆಯನ್ನು ಹೇಗೆ ದಮನಗೊಳಿಸಲಾಗಿದೆ ಎನ್ನುವುದರ ಹುಡುಕಾಟವಿದೆ. ಇದರಲ್ಲಿ ಮುಚ್ಚಿಹೋದ ಸಂಗತಿಗಳನ್ನು ಹೊರತೆಗೆದು ದಮನದಲ್ಲಿ ಪುರುಷತ್ವದ ಪ್ರಭಾವವನ್ನು ವಿವರಿಸುವ ನಿಲುವಿದೆ. ಜನಪದ ಸಾಹಿತ್ಯದಲ್ಲಿ ಸ್ತ್ರೀಪಾಲು ಪುರುಷನಿಗೆ ಸಮಾನವಾದದು. ಕುಟುಂಬದ ಉಪಜೀವನದ ಹೊಣೆ ಹೊರುವವ ಪುರುಷನೇ ಹೊರತು ಸ್ತ್ರೀಯಲ್ಲ ಎನ್ನುವ ಎಂ.ಎಂ.ಕಲಬುರ್ಗಿ ಅವರ ಮಾತಲ್ಲಿ ಹೆಣ್ಣಿನ ಸ್ಥಾನಮಾನದ ವೈಭವೀಕರಣವಿದೆ. ಹೀಗೆ ಜಾನಪದ ಅಧ್ಯಯನಗಳಲ್ಲಿ ಹೆಣ್ಣನ್ನು ವೈಭವೀಕರಿಸುತ್ತಲೇ ಅವಳ ದಮನವನ್ನು ಮುಚ್ಚಿ ಹಾಕುತ್ತಿರುವುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದು. ಜನಪದ ಸಾಹಿತ್ಯವೆಂದರೆ ಮಹಿಳಾ ಸಾಹಿತ್ಯ ಎಂದು ನಿರ್ವಚಿಸಿದ ಮೊದಲ ಘಟ್ಟದ ಬಹುಪಾಲು ಜಾನಪದ ಅಧ್ಯಯನ ಕಾರರು ಮಹಿಳೆಯ ದಮನಿತ ನೆಲೆಗಳನ್ನು ಮುಚ್ಚಿಟ್ಟರು. ಪಿತೃನಿಷ್ಠ ವ್ಯವಸ್ಥೆಗೆ ವಿಧೇಯವಾಗಿ 'ಗರತಿ' ಪದವನ್ನು ಬಳಸಿ ಗರತಿ ಹಾಡುಗಳನ್ನು ವಿಶ್ಲೇಷಿಸಿದ್ದು ಸ್ತ್ರೀಯನ್ನು ವೈಭವೀಕರಿಸಿಯೆ.

ಸ್ವಾತಂತ್ರ್ಯಪೂರ್ವದಲ್ಲಿದ್ದ ರಾಷ್ಟ್ರೀಯವಾದವು ಮಹಿಳೆಯನ್ನು ವೈಭವೀಕರಿಸುವ ನೆಲೆಗೆ ಚಾಲನೆ ನೀಡಿತು. ಮಧುರಚೆನ್ನರಿಂದ ಪ್ರಾರಂಭಿಸಿ ಒಂದು ಪಂಥವೇ ಬೆಳೆಯುತ್ತಾ ಈ ಕಾಲದ ಜಾನಪದ ವಿಶ್ಲೇಷಣೆಗಳನ್ನು ಮಹಿಳೆಯನ್ನು ವೈಭವೀಕರಿಸಿದವು. ಹೀಗೆ ವೈಭವೀಕರಿಸುವ ಮೂಲಕವೇ ಅವಳ ದಮನಕಾರಿ ನೆಲೆಯನ್ನು ಮುನ್ನಡೆಗೆ ತರಲಾಗಲಿಲ್ಲ. ಹಿ.ಶಿ.ರಾಮಚಂದ್ರೇಗೌಡ ಮಹಿಳಾ ಜಾನಪದವನ್ನು ಸಂಸ್ಕೃತೀಕರಣ ಜಾನಪದ, ಸಂಸ್ಕೃತಿ ಜಾನಪದ ಎಂದು ವಿಂಗಡಿಸಿಕೊಂಡು ಮೊದಲ ಭಾಗದಲ್ಲಿ ವೈದಿಕ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಂಡರೆ, ಸಂಸ್ಕೃತೀಕರಣ ಜಾನಪದದಲ್ಲಿ ಹೆಣ್ಣು ಏಕೆ ಬಳಕೆ ವಸ್ತುವಾದಳು, ಅವಳು ಏಕೆ ಉಪಭೋಗದ ನೆಲೆಯಲ್ಲಿ ನಿರ್ವಚಿಸಲ್ಪಟ್ಟಳು ಎನ್ನುವುದನ್ನು ವಿಶ್ಲೇಷಿಸುವುದರ ಹಿಂದೆ ಸ್ತ್ರೀದಮನದ ನೆಲೆಯಿದೆ.

ಹೀಗೆ ಸ್ತ್ರೀ ದಮನವನ್ನು ಗುರುತಿಸುವ ಜಾನಪದ ಅಧ್ಯಯಗಳು ವಿರಳವಾಗಿವೆ. ಇದರಲ್ಲಿ ಮಹಿಳಾ ಮತ್ತು ಪುರುಷ ಅಧ್ಯಯನಕಾರರ ಭಿನ್ನತೆಗಳಿವೆ, ಕಾಲಘಟ್ಟದ ಭಿನ್ನತೆಗಳಿಗೆ ೯೦ರ ದಶಕದ ನಂತರ ಸ್ತ್ರೀವಾದ ಚಿಂತನೆಯು ಪ್ರಾರಂಭವಾದ್ದರಿಂದ ಹೀಗೆ ಸ್ತ್ರೀ ದಮನದ ನೆಲೆಗಳನ್ನು ಗುರುತಿಸುವ ಜಾನಪದ ಅಧ್ಯಯನಗಳು ಈಗೀಗ ಹೆಚ್ಚಾಗಿವೆ.

ಪ್ರತಿರೋಧದ ನೆಲೆ

ಲಿಂಗದ ಕಾರಣಕ್ಕೆ ಪುರುಷ ಯಾಜಮಾನ್ಯದಲ್ಲಿ ನಲುಗಿದ ಮಹಿಳಾ ಪ್ರತಿರೋಧವು ಜಾನಪದದಲ್ಲಿ ಭಿನ್ನವಾಗಿ ದಾಖಲಾಗಿದೆ. ಪ್ರಸಿದ್ಧ ಸ್ತ್ರೀವಾದಿ ಚಿಂತಕಿ ಸಿಮೊನ್‌ದ ಬೊವಾ ಅಭಿಪ್ರಾಯ ಪಡುವಂತೆ ಮಹಿಳೆ ರೂಪಿಸಲ್ಪಟ್ಟವಳು ಎನ್ನುವ ಮಾತು ಈ ಹೊತ್ತಿಗೂ ಪ್ರಸ್ತುತ. ಹೆಣ್ಣು ಹೆಣ್ಣಾಗಿ ಹುಟ್ಟುವುದಿಲ್ಲ, ಸಮಾಜ ಅವಳನ್ನು ಬೆಳೆಯುತ್ತಾ ಹೆಣ್ಣಾಗಿ ರೂಪಿಸುತ್ತದೆ ಎಂದು ಬೊವಾ ಅವರು ವಿವರಿಸುತ್ತಾರೆ. ಈ ಕಾರಣಕ್ಕೆ ಅವರ 'ದಿ ಸೆಕೆಂಡ್ ಸೆಕ್ಸ್' ಕೃತಿ ಜಾಗತಿಕ ಮನ್ನಣೆ ಪಡೆದಿದೆ. ಮಹಿಳೆ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಾಗಿ ರೂಪಿಸಲ್ಪಡುವಾಗಲೆ ಅವಳು ಪ್ರತಿರೋಧವನ್ನು ಒಡ್ಡದೆ ಇರುವುದಿಲ್ಲ. ಅವಳ ಪ್ರತಿರೋಧಕ್ಕೆ ಜಯ ಸಿಕ್ಕಿರಲಿಕ್ಕಿಲ್ಲ. ಆದರೆ ಹೆಣ್ಣು ಯಾವಾಗಲೂ ಪ್ರತಿರೋಧವನ್ನು ತನ್ನ ಒಡಲಲ್ಲಿ ಇಟ್ಟುಕೊಂಡೇ ಬಂದಿದ್ದಾಳೆ.

ಜಾನಪದದಲ್ಲಿ ಪುರುಷಾಧಿಕಾರದ ನಿಯಂತ್ರಕ ರಚನೆಗಳಿರುವಂತೆ ಸ್ತ್ರೀ ಸ್ವಾತಂತ್ರ್ಯದ, ಪುರುಷತ್ವದ ನಿರಾಕರಣೆಯ ರಚನೆಗಳೂ ಇವೆ. ಪುರುಷಾಧಿಕಾರದ ನಿಯಂತ್ರಕಗಳನ್ನು ಜನಪದ ಪ್ರಕಾರಗಳಲ್ಲಿ ಹೆಕ್ಕಿ ವಿವರಿಸುತ್ತಲೇ ಸ್ತ್ರೀಯ ಬೇರೆ ಬೇರೆ ಶೋಷಕರ ನೆಲೆಗಳನ್ನು ಗುರುತಿಸ ಬಹುದಾಗಿದೆ. ಅಂತೆಯೇ ಪುರುಷತ್ವದ ನಿರಾಕರಣೆಯ ರಚನೆಗಳನ್ನು ಹೆಕ್ಕಿ ವಿವರಿಸುತ್ತಲೇ ಸ್ತ್ರೀ ಹೋರಾಟಕ್ಕೆ ಚೈತನ್ಯವನ್ನು ಪಡೆಯಬೇಕಾಗಿದೆ. ಜನಪದ ಆಕರಗಳನ್ನು ಬಳಸಿ ಈ ಎರಡೂ ನೆಲೆಗಳಲ್ಲಿ ವಿಶ್ಲೇಷಿಸುವ

ಅಗತ್ಯವಿದೆ. ಮುಖ್ಯವಾಗಿ ಎರಡನೇ ವಿಧಾನ ಇಂದು ಹೆಚ್ಚು ಪ್ರಸ್ತುತ. ಇಲ್ಲಿ ಜಾನಪದ ಅಧ್ಯಯನಗಳಲ್ಲಿ ವ್ಯಕ್ತವಾಗುವ ಮಹಿಳಾ ಪ್ರತಿರೋಧದ ಚಿಂತನೆಯನ್ನು ವಿಶ್ಲೇಷಿಸಲಾಗಿದೆ. ಆಯ್ದ ಆಲೋಚನ ಭಾಗಗಳಿಂದ ಸ್ಥೂಲವಾಗಿ ಮಹಿಳಾ ಪ್ರತಿರೋಧದ ನೆಲೆಗಳನ್ನು ಗುರುತಿಸಲು ಪ್ರಯತ್ನಿಸಿದೆ.

ಜನಪದ ಅಧ್ಯಯನಗಳಲ್ಲಿ ಮಹಿಳೆಯ ಭಿನ್ನ ಚಿತ್ರಣವಿದೆ. ಬರಹ ರೂಪದ ಸಾಹಿತ್ಯದಲ್ಲಿನ ಮಹಿಳಾ ಚಿತ್ರಣವನ್ನು ಎದುರು ನಿಲ್ಲಿಸಿಕೊಂಡು, ಮೌಖಿಕ ಸಾಹಿತ್ಯದಲ್ಲಿನ ಮಹಿಳೆ ಹೇಗೆ ಭಿನ್ನ ಎನ್ನುವುದನ್ನು ವಿವರಿಸುವ ಧೋರಣೆಯೂ ಇದೆ. ಮೊದಮೊದಲು ಜನಪದ ಸಾಹಿತ್ಯ ಎಂದರೆ 'ಮಹಿಳಾ' ಸಾಹಿತ್ಯ ಎಂತಲೇ, ಗರತಿಯ ಹಾಡುಗಳ ವಿಶ್ಲೇಷಣೆಗಳು ನಿರೂಪಿಸಿದವು. ನಂತರ ಬರಹಕ್ಕೂ, ಅದನ್ನು ಸೃಷ್ಟಿಸಿದವರಿಗೂ ಬಿಡಿಸದ ನಂಟು ಕಟ್ಟಿದಂತೆ, ಜನಪದ ನಿರೂಪಕಿಗೂ, ಅವಳು ಸೃಷ್ಟಿಸಿದ ಅಭಿವ್ಯಕ್ತಿಗೂ ನಂಟನ್ನು ಸೃಷ್ಟಿಸಲಾಯಿತು. ಆ ಮೂಲಕ ಮಹಿಳೆಯ ಭಿನ್ನ ಚಹರೆಗಳನ್ನು ಗುರುತಿಸಲು ಪ್ರಯತ್ನ ನಡೆಯಿತು. ಈಗ ನಮಗೆ ಸಿಗುವ ಅಧ್ಯಯನಗಳ ನಿರೂಪಣೆಗಳ ಪ್ರಕಾರ ಶಿಷ್ಟ ಸಾಹಿತ್ಯದ ಮಹಿಳೆಗಿಂತ, ಮೌಖಿಕ ಸಾಹಿತ್ಯದ ಮಹಿಳೆ ಸ್ವತಂತ್ರಳು. ಇಂತಹ ಪ್ರತಿರೋಧಕ ಶಕ್ತಿಯನ್ನು ಹೆಕ್ಕಿ ವಿವರಿಸುತ್ತಲೇ ಕನ್ನಡದಲ್ಲಿ ಸ್ತ್ರೀವಾದಿ ಚಿಂತನೆ ಗರಿಗಟ್ಟುತ್ತಿದೆ.

ಜಾನಪದ ಅಧ್ಯಯನಗಳಲ್ಲಿರುವ ಮುಖ್ಯ ತೊಡಕೆಂದರೆ, ಹಲವು ಪಠ್ಯಗಳಲ್ಲಿ ಒಂದು ಪ್ರಾಮಾಣಿಕ ಪಠ್ಯವನ್ನು ಸಂಗ್ರಹಿಸಿ ವಿಶ್ಲೇಷಿಸುವ ಕ್ರಮ. ಒಂದೇ ಪಠ್ಯದ ಪ್ರಾದೇಶಿಕ ಭಿನ್ನತೆಗಳೂ ದೊರೆಯುತ್ತವೆ. ಅಥವಾ ಹಲವು ಪಠ್ಯಗಳಲ್ಲಿ ಒಬ್ಬಳೇ ಮಹಿಳೆಯ ಪ್ರತಿರೋಧ ಅಥವಾ ಶೋಷಣೆಗೆ ಹಲವು ಮುಖಗಳಿರುತ್ತವೆ. ಹಾಗಾಗಿ ಕನ್ನಡ ಜಾನಪದ ಅಧ್ಯಯನಗಳಲ್ಲಿ ಮಹಿಳಾ ಪ್ರತಿರೋಧವನ್ನು ಗುರುತಿಸುವ ಅಧ್ಯಯನಗಳು ಈ ಮೇಲಿನ ತಿಳುವಳಿಕೆಯ ಮಿತಿಯನ್ನು ಹೊಂದಿವೆ. ಅಂತಹ ಅಧ್ಯಯನಗಳನ್ನು ವಿಶ್ಲೇಷಿಸುವಾಗಲೂ ಇಂತಹ ಮಿತಿಯನ್ನು ಗಮನದಲ್ಲಿರಿಸಿಕೊಂಡೇ ವ್ಯಾಖ್ಯಾನಿಸ ಬೇಕಾಗುತ್ತದೆ.



ಜನಪದ ಅಧ್ಯಯನಗಳಲ್ಲಿ ಮಹಿಳಾ ಶೋಷಣೆ ಮತ್ತು ಪ್ರತಿರೋಧವನ್ನು ಗುರುತಿಸುವ ಹಲವು ಮಾದರಿಗಳಿವೆ. ಪುರುಷ ಅಧ್ಯಯನಕಾರರು ಪುರುಷ ಪ್ರಧಾನ ನೆಲೆಯಲ್ಲಿಯೇ ನಿರ್ವಚಿಸು ವಾಗ ಮಹಿಳೆಯನ್ನು ಸಾಂಪ್ರದಾಯಿಕ ಚೌಕಟ್ಟಿಗೆ ಸಿಲುಕಿಸುವುದಿದೆ. ಇನ್ನು ಸ್ವತಃ ಮಹಿಳಾ ಅಧ್ಯಯನಕಾರ್ತಿಯರೂ ಪುರುಷ ಅಧ್ಯಯನದ ಧೋರಣೆಗಳನ್ನು ಪಾಲಿಸುವುದೂ ಇದೆ. ಇನ್ನು ಈ ಇಬ್ಬರಲ್ಲೂ 'ಮಹಿಳೆ'ಯನ್ನು ದೈವೀಕರಿಸುವ ಮಾದರಿಯೂ ಇದೆ. ಇದಕ್ಕಿಂತ ಭಿನ್ನವಾಗಿ ಮಹಿಳಾ ಶೋಷಣೆಯ ನೆಲೆಗಳನ್ನು ಗುರುತಿಸಿ ಎಲ್ಲೆಲ್ಲಿ ಮಹಿಳೆಯನ್ನು ದಮನ ಗೊಳಿಸಲಾಗಿದೆ, ಎನ್ನುವ ವಿಶ್ಲೇಷಣೆಗಳಿವೆ. ಅಂತೆಯೇ ಮಹಿಳೆಯ ಪ್ರತಿರೋಧಗಳನ್ನು ಗುರುತಿಸಿ ವರ್ತಮಾನದ ಮಹಿಳೆಗೆ ಹೊಸ ರೂಪಕಶಕ್ತಿಗಳನ್ನು ಆರೋಪಿಸುವ ವಿಧಾನಗಳೂ ಇವೆ.

ಕನ್ನಡದ ಜಾನಪದ ಅಧ್ಯಯನಗಳಲ್ಲಿ ಮಹಿಳಾ ಪ್ರತಿರೋಧ ವನ್ನು ಗುರುತಿಸುವ ಎರಡು ಪ್ರಮುಖ ನೆಲೆಗಳಿವೆ. ಒಂದು: ಅಧ್ಯಯನಕಾರರ ವಿಶ್ಲೇಷಣೆಯ ಕಾಲಘಟ್ಟದ ವರ್ತಮಾನದ ಮಹಿಳೆ ಪುರುಷಾಧಿಕಾರವನ್ನು ಪ್ರಶ್ನಿಸಿದಾಗ, ಸಾಂಪ್ರದಾಯಿಕ ಚೌಕಟ್ಟುಗಳನ್ನು ಮುರಿಯಲು ಯತ್ನಿಸಿದಾಗ, ಕೌಟುಂಬಿಕ ಬಂಧನದಿಂದ ಹೊರಬರಲು ಸಂಘರ್ಷ ಮಾಡಿದಾಗ, ಇದನ್ನು ಹೀಗಳೆಯಲು, ದಮನ ಮಾಡಲು, ಮಹಿಳೆ ಹಿಂದೆ ಹೀಗಿರಲಿಲ್ಲ ಎಂದು ನಿರೂಪಿಸಲು ಪತಿನಿಷ್ಠ, ಕೌಟುಂಬಿಕನಿಷ್ಠ ಜಾನಪದ ಮಹಿಳಾ ಚಿತ್ರಣವನ್ನು ವಿವರಿಸುವ ಮೂಲಕ ವರ್ತಮಾನದ ಮಹಿಳಾ ಪ್ರತಿರೋಧವನ್ನು ದಮನಗೊಳಿಸಲು ಪ್ರಯತ್ನಿಸಿರುವುದು. ಈ ನಿಲುವು ಪುರುಷ ಅಧ್ಯಯನಕಾರರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಎರಡು: ಅಧ್ಯಯನಕಾರರು ತಮ್ಮ ಕಾಲಘಟ್ಟದ ಶೋಷಿತ, ದಮನಿತ ಮಹಿಳೆಯರನ್ನು ಕೇಂದ್ರೀಕರಿಸಿಕೊಂಡು, ಜಾನಪದದಲ್ಲಿ ಇರುವ ಮಹಿಳಾ ಪ್ರತಿರೋಧಕ ಸಂಗತಿಗಳನ್ನು ಉಲ್ಲೇಖಿಸಿ ವಿಶ್ಲೇಷಿಸಿ, ಅಂತವರಿಗೆ ಚೈತನ್ಯ ತುಂಬುವುದು. ಇಲ್ಲಿ ಜಾನಪದದೊಳಗಿನ ಛಲಗಾತಿ, ಗಟ್ಟಿಗಿತ್ತಿ, ಗಂಡುಬೀರಿ ಮಹಿಳೆಯನ್ನು ವಿಶ್ಲೇಷಣೆಗೆ ಬಳಸಿಕೊಳ್ಳಲಾಗುತ್ತದೆ. ಈ ಮಾದರಿ ಮಹಿಳಾ ಜಾನಪದ ಅಧ್ಯಯನಕಾರ್ತಿಯರಲ್ಲಿಯೂ, ಕೆಲವು ಪುರುಷ ಅಧ್ಯಯನ ಕಾರರಲ್ಲೂ ಕಂಡುಬರುತ್ತದೆ.

ಬೇಂದ್ರೆ, ಮಧುರಚೆನ್ನ, ಹಲಸಂಗಿ ಗೆಳೆಯರು ಮುಂತಾದವರು ಮಹಿಳಾ ಸೃಜನಶೀಲತೆಯನ್ನು ಗೌರವಿಸಿದರು. ಬೇಂದ್ರೆಯವರು, 'ಸ್ತ್ರೀ ಹೃದಯದ ನಿಃಶ್ವಸಿತವೇ ಕಾವ್ಯವೆಂದು ಹೇಳಬಹುದು. ಸರಸ್ವತಿ ಇಲ್ಲದೆ ಸ್ವಾರಸ್ಯವುಂಟೆ ಎಂದು ಮಹಿಳೆಯನ್ನು ಕಾಂತೆಯನ್ನಾಗಿ ನಿರ್ವಚಿಸಿದರು, "ತಿಳಿಹೃದಯದ ಹೆಣ್ಣುಮಕ್ಕಳು ಪುರಾತನ ಕೃತಿಗಳು" ಎಂದು ಮಧುರಚೆನ್ನರು ನಿರ್ವಚಿಸಿದರು, ಗಿರಡ್ಡಿ ಗೋವಿಂದರಾಜ ಅವರು ಮಹಿಳಾ ಸೃಜನಶೀಲತೆಯನ್ನು ಅವಳ ಧರ್ಮಶೀಲತೆಯಲ್ಲಿ ಹುಡುಕಿದರು. "ಮಕ್ಕಳ ಬಯಕೆಯಂಥ ಅನುಭವ ಹೆಣ್ಣು ಮಕ್ಕಳಿಗೆ ಅತ್ಯಂತ ತೀವ್ರವಾದ ವೈಯಕ್ತಿಕತೆಯಲ್ಲಿ ಹುಟ್ಟುವಂಥದು. ಪರಕೀಯ ದಾರುಣ ಅನುಭವ, ಬದುಕಿನಿಂದ ಬೇರು ಕಡಿದುಕೊಂಡು ಒಬ್ಬಂಟಿಯಾಗುವ ನೋವು, ಮಾತೃತ್ವದ ಛಲದ ಅಭಿವ್ಯಕ್ತಿಯ ಹಂಬಲ ಇತ್ಯಾದಿ ವೈಯಕ್ತಿಕವಾಗಿ ಅನಾಥಪ್ರಜ್ಞೆಯಲ್ಲಿ ಪರಿಣಮಿಸುವಂಥದ್ದು ಎನ್ನುತ್ತಾರೆ. ಅಂದರೆ ಒಬ್ಬಂಟಿತನದ ನೋವು, ಮಾತೃತ್ವದ ಛಲದ ಅಭಿವ್ಯಕ್ತಿ ಹೀಗೆ ಮಹಿಳೆಯ

ಸೃಜನಶೀಲತೆಯ ಸಂದಿಗ್ಧತೆಯನ್ನು ಗುರುತಿಸುತ್ತಾರೆ. ಇಲ್ಲಿ ಮಹಿಳೆ ದಮನಗೊಳ್ಳುವಿಕೆಯೇ ಸೃಜನಶೀಲತೆಯ ಹಾದಿ ಮೂಲಕ ಬಿಡುಗಡೆ ಹೊಂದುತ್ತಿರುವ ಬಗೆಗೆ ಸೂಚನೆಗಳಿವೆ.

ಕನ್ನಡದಲ್ಲಿ ಕೆ.ಆರ್. ಸಂಧ್ಯಾರೆಡ್ಡಿ ಅವರು ಜನಪದ ಕಥೆಗಳನ್ನು ಅಧ್ಯಯನ ಮಾಡಿ ಕಥೆಯೊಳಗಿನ ಮಹಿಳಾ ಪ್ರತಿರೋಧದ ನೆಲೆಗಳನ್ನು ಗುರುತಿಸಲು ಪ್ರಯತ್ನಿ ಸಿದ್ದಾರೆ. ಗಾಯತ್ರಿ ನಾವಡ ಅವರು "ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು" ಕೃತಿಯಲ್ಲಿ ಸಿರಿಯ ಮಹಿಳಾ ಪ್ರತಿರೋಧವನ್ನು ತೀರಾ ಭಿನ್ನವಾಗಿ ನಿರೂಪಿಸಿದ್ದಾರೆ. ಧರಣೀದೇವಿ ಮಾಲಗತ್ತಿಯವರು ಮಹಿಳಾ ಪ್ರತಿರೋಧದ ಹಲವು ಸ್ತರಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಮಹಿಳಾ ಪ್ರತಿರೋಧವನ್ನು ಗುರುತಿಸುವ ಅವರು "...ಹಾಡದ ಹಾಗೆ ಕೆಲವೆಡೆಗಳಲ್ಲಿ ಮಹಿಳೆಯರಿಗೆ ನಿರ್ಬಂಧವಿದ್ದರೂ ಮಾತನಾಡುವುದಕ್ಕೆ ಪರವಾನಿಗೆಯ ಅವಶ್ಯಕತೆ ಇಲ್ಲದಿರುವುದರಿಂದ ತಮ್ಮೊಳಗಿನ ಅನಿಸಿಕೆಗಳನ್ನು ವ್ಯಕ್ತಪಡಿಸಲು ಗಾದೆಗಳನ್ನು ಹೆಂಗಸರು ಬಳಸಿಕೊಂಡಿದ್ದಾರೆ. ಹೀಗೆ ಪಿತೃಪ್ರಧಾನ ವ್ಯವಸ್ಥೆಯ ಬಗ್ಗೆ ಅವಳಿಗಿರುವ ವಿರೋಧವನ್ನು ಕೆಲವೊಮ್ಮೆ ಸೂಚ್ಯಾರ್ಥಗಳುಳ್ಳ ಗಾದೆಗಳ ಮೂಲಕ ವ್ಯಕ್ತಪಡಿಸಿದ್ದಾಳೆ" ಎನ್ನುತ್ತಾರೆ. ಅಂದರೆ ಮಹಿಳೆ ಜನಪದ ಗೀತೆಗಳಿಗಿಂತ ಹೆಚ್ಚಾಗಿ ಮುಕ್ತವಾಗಿ ಗಾದೆಗಳಲ್ಲಿ ಪ್ರತಿರೋಧದ ನೆಲೆ ವ್ಯಕ್ತವಾಗಿದೆ ಎಂದು ಗುರುತಿಸುತ್ತಾರೆ. ಅಂದರೆ ಜನಪದ ಪ್ರಕಾರಗಳೂ ಸಹ ಕೆಲವೊಮ್ಮೆ ಮಹಿಳಾ ಪ್ರತಿರೋಧದ ಅಭಿವ್ಯಕ್ತಿಯನ್ನು ನಿಯಂತ್ರಿಸುತ್ತಿದ್ದವು ಎನ್ನುವುದನ್ನು ಇಲ್ಲಿ ಗಮನಿಸಬಹುದು. ಡಾ. ಶೈಲಜ ಹಿರೇಮಠ ಅವರು ಪಾತರದವರು ಕೃತಿಯಲ್ಲಿ ಮಹಿಳಾ ಪ್ರತಿರೋಧದ ಭಿನ್ನ ನೆಲೆಯನ್ನು ದಾಖಲಿಸುತ್ತಾರೆ.

ಹೀಗೆ ಜನಪದ ಆಕರಗಳಲ್ಲಿ ಎಲ್ಲೆಲ್ಲಿ ಮಹಿಳೆ ಪ್ರತಿರೋಧದ ಧ್ವನಿ ಎತ್ತಿದ್ದಾಳೋ, ಅಂತಹ ಧ್ವನಿಯನ್ನು ಗುರುತಿಸಿ ವರ್ತಮಾನದ ಮಹಿಳಾ ಚಿಂತನೆಯನ್ನು ಕಟ್ಟಿಕೊಳ್ಳುವ ನಿಲುವೂ ಕೂಡ ಕನ್ನಡ ಜಾನಪದ ಅಧ್ಯಯನಗಳಲ್ಲಿ ಮಿಳಿತವಾಗಿದೆ. ಪಿತೃನಿಷ್ಠ ಗರತಿ ಹಾಡುಗಳನ್ನು ಹೆಚ್ಚು ವಿಶ್ಲೇಷಿಸಿದಂತೆ, ಪಿತೃವಿರೋಧಿ ಗರತಿ ಹಾಡುಗಳನ್ನು ಹೆಚ್ಚು ಮಹಿಳಾ ಪ್ರತಿರೋಧವನ್ನು ಗುರುತಿಸಲು ಪ್ರಯತ್ನಿಸಲಾಯಿತು. ಹೆಣ್ಣನ್ನು ಲೈಂಗಿಕ ವಸ್ತುವನ್ನಾಗಿ ನೋಡುವ, ಯೋನಿಪಾವಿತ್ರ್ಯದ ಬಗ್ಗೆ ತಲೆಕೆಡಿಸಿ ಕೊಳ್ಳುವ, ಸಂಪತ್ತಿನ ಜತೆ ಸಮೀಕರಿಸುವ, ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾದ ಮಾಯೆ ಎನ್ನುವ ಆಲೋಚನ ಕ್ರಮಗಳು ಸಂಸ್ಕೃತಿಯ ಮೇಲುಸ್ತರಗಳಲ್ಲಷ್ಟೇ ನಿಂತಿಲ್ಲ, ಅವು ಕೆಳಸ್ತರದ ಸಮುದಾಯಗಳಿಗೂ ಚಾಚಿಕೊಂಡಿದೆ. ಚರಿತ್ರೆಯ ವಿಕಾಸದ ವಿಭಿನ್ನ ಹಂತಗಳಲ್ಲಿ ನಿಧನವಾಗಿ ಇಳಿದು ಬಂದಿದೆ. ಹೆಣ್ಣು ಕೆರೆಗೆ ಹಾರವಾಗುವ, ಸಹಗಮನ ಮಾಡುವ, ಮೈದುನನಿಗೂ, ಮತ್ತೊಬ್ಬನಿಗೂ ಪ್ರೀತಿಸಿ ಸರ್ವನಾಶವಾಗುವ, ಕಥನಗಳು ಜಾನಪದ ದಲ್ಲಿರುವುದು ಏನನ್ನು ಸೂಚಿಸುತ್ತದೆ? ಇವು ಇವೆ ಎಂಬ ಕಾರಣಕ್ಕೆ ಸಮುದಾಯಗಳು ಈ ಮೌಲ್ಯಗಳನ್ನು ಒಪ್ಪಿಕೊಂಡಿದ್ದಾವೆಂದಲ್ಲ. ಇಂಥ ಸ್ವೀಕೃತ ಕಟ್ಟುಪಾಡುಗಳನ್ನು ಮುರಿದು ಸಂಪ್ರದಾಯವನ್ನು ಕಂಗಾಲು ಮಾಡುವ ಹೆಣ್ಣನ್ನು ಜಾನಪದ ಹೇಗೆ ಕಂಡಿದೆ ಎಂಬುದು ಪ್ರತಿಸಂಸ್ಕೃತಿ ಚರ್ಚೆಯಲ್ಲಿ ಮುಖ್ಯವಾಗಿದೆ"(ತರೀಕೆರೆ, ಪ್ರತಿಸಂಸ್ಕೃತಿ, ಪು:೨೦೬)ಎನ್ನುವ ನೆಲೆಯಲ್ಲಿ ರಹಮತ್ ತರೀಕೆರೆಯವರು ಪ್ರತಿಸಂಸ್ಕೃತಿ ರೂಪುಗೊಳ್ಳುವಿಕೆ ಯಲ್ಲಿ ಮಹಿಳೆಯ ಪ್ರತಿರೋಧವನ್ನು ವಿಶ್ಲೇಷಿಸುತ್ತಾರೆ.

ಕನ್ನಡದಲ್ಲಿ ಜನಪದ ಕಾವ್ಯದಲ್ಲಿ ಮಹಿಳೆಯ ಪ್ರತಿರೋಧದ ಎಳೆಗಳನ್ನು ವಿಶ್ಲೇಷಿಸಲಾಗಿದೆ. 'ಸಿರಿ' ಮಹಾಕಾವ್ಯವನ್ನು, ಗಾಯಿತ್ರಿನಾವಡರು, ಮಾದೇಶ್ವರ ಕಾವ್ಯದ ಸಂಕಮ್ಮನ ಸಾಲನ್ನು ಹಿ.ಚಿ.ಬೋರಲಿಂಗಯ್ಯನವರು, ಜನಪದಗೀತೆಗಳನ್ನು ವಿಶ್ಲೇಷಿಸುತ್ತಾ ಕಾಳೇಗೌಡ ನಾಗವಾರ ಅವರು, ಮಹಿಳಾ ಜಾನಪದದ ತಾತ್ವಿಕತೆ ಕುರಿತು ಚರ್ಚಿಸುವ ಪುರುಷೋತ್ತಮ ಬಿಳಿಮಲೆಯವರು, ಜನಪದ ಆಕರಗಳಲ್ಲಿ ವ್ಯಕ್ತವಾಗುವ ಮಹಿಳಾ ಪ್ರತಿರೋಧವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಎಷ್ಟೋ ಬಾರಿ ಪ್ರತಿರೋಧಕ ನೆಲೆಗಳು ಮೊದಲ ನೋಟಕ್ಕೆ ಗುರುತಿಸಲಾಗದಂತೆ ಸೂಚ್ಯವಾಗಿಯೂ ಇವೆ. ಇಂತಹವು ಗಳನ್ನು ತುಂಬಾ ಸೂಕ್ಷ್ಮವಾಗಿ ಗುರುತಿಸಿಕೊಳ್ಳಬೇಕಾಗುತ್ತದೆ. ಹೀಗೆ ಮಹಿಳಾ ಅನನ್ಯತೆಯನ್ನು ಅವಳ ಪ್ರತಿರೋಧದ ನೆಲೆಯಲ್ಲಿಯೂ ಗುರುತಿಸುವ ಅಧ್ಯಯನಗಳು ಕನ್ನಡದಲ್ಲಿವೆ. ಇವು ಸ್ತ್ರೀವಾದಿ ಚಿಂತನೆಯನ್ನು ಕಟ್ಟಲು ನೆರವಾಗಿವೆ.

ಸ್ವಾತಂತ್ರ್ಯದ ನೆಲೆ

ಮೇಲ್ವರ್ಗದ ಮಹಿಳೆಯರು ಯಾವ ಬಗೆಯ ಸ್ತ್ರೀಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದಾರೋ, ಅಂತಹ ಸ್ವಾತಂತ್ರ್ಯ ಕೆಳವರ್ಗದ ಮಹಿಳೆಯರಲ್ಲಿ ಸಹಜವಾಗಿವೆ. ಇಂತಹ ಮಹಿಳಾ ಸ್ವಾತಂತ್ರ್ಯವನ್ನು ಅಧ್ಯಯನ ಮಾಡಿದ ಮಾದರಿಗಳೂ ಕನ್ನಡದ ಜಾನಪದ ಅಧ್ಯಯನಗಳಲ್ಲಿ ಗುರುತಿಸಬಹುದು. ಜನಪದರಲ್ಲಿ ಮಹಿಳೆ ದಮನಕ್ಕೊಳ ಗಾದ ಸಂಗತಿಗಳಿರುವಂತೆ, ಸ್ವತಃ ತಾನೇ ಸ್ವತಂತ್ರವಾಗಿರುವ ಇವು ಮೇಲ್ವರ್ಗದ ಮಹಿಳೆಯರಿಗೆ ಸಾಧ್ಯವಾಗದ ಮಾದರಿಗಳಿವೆ. ೧೯ನೇ ಶತಮಾನದ ಸ್ತ್ರೀ ಸುಧಾರಣ ಚಳವಳಿಗಳು ಭಾರತೀಯ ಸಂಸ್ಕೃತಿಯ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದರೂ, ಅವು ಜನಪದ ಸಮುದಾಯಗಳಲ್ಲಿ ಸಮಸ್ಯೆ ಆಗಿರಲಿಲ್ಲ.

ವಿಧವಾ ವಿವಾಹವನ್ನು ಒಪ್ಪಿತ ಆಚರಣೆಯನ್ನಾಗಿ ಆಚರಿಸುವ ಜನಪದ ಆಚರಣೆಗಳಿವೆ. ಬೋವಿ ಸಮುದಾಯದಲ್ಲಿ ಒಬ್ಬ ಹೆಣ್ಣು ಎಷ್ಟು ಮರುವಿವಾಹವಾಗುತ್ತಾಳೋ ಅಷ್ಟು ಗೌರವಾನ್ವಿತಳು. ಏಳು ಬಾರಿ ಮದುವೆಯಾದವಳಿಂದ ಮದುಮಕ್ಕಳು ಆಶೀರ್ವಾದ ಪಡೆಯುವುದಕ್ಕೆ ಬಯಸುತ್ತಾರೆ. ಕಾಡುಗೊಲ್ಲರಲ್ಲಿ ಹೆಣ್ಣಿಗೆ ವಿಧವಾ ಆಚರಣೆಯಿಲ್ಲ. ಸೀರುಡಿಕೆ ಎಂಬುದು ಕೆಳಜಾತಿಗಳಲ್ಲಿ ಸಹಜವಾಗಿರುವ ಸಂಗತಿಯಾಗಿದೆ. ಜನಪದ ಗೀತೆಗಳು ಅತಿ ಹೆಚ್ಚು ಕಂಡುಬರುವುದು ದಲಿತ, ಕೆಳವರ್ಗದ ಮಹಿಳೆಯರಲ್ಲಿ. ಇವರಿಗೆ ಹಾಡಲು ಇರುವ ಮುಕ್ತ ಸ್ವಾತಂತ್ರ್ಯದಿಂದಾಗಿಯೇ ಈ ಮಹಿಳೆಯರಲ್ಲಿ ಇಷ್ಟೊಂದು ಜಾನಪದ ಜ್ಞಾನಭಂಡಾರ ಇರಲಿಕ್ಕೆ ಸಾಧ್ಯವಿದೆ. ಕನ್ನಡದಲ್ಲಿ ಸಮುದಾಯಗಳ ಅಧ್ಯಯನದ ಸಂದರ್ಭದಲ್ಲಿ, ಜನಪದ ಕಥನ ಗೀತೆಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಮಹಿಳೆಯ ಸ್ವತಂತ್ರದ ನೆಲೆಗಳನ್ನು ಜನಪದ ಮಹಿಳಾ ಅನನ್ಯತೆಯನ್ನು ಬಿಂಬಿಸುವ ಅಧ್ಯಯನಗಳಿವೆ. ಹಾಗೆಂದು ಇವುಗಳನ್ನು ವರ್ಣಿಸುವಾಗಲೆ, ಅದೇ ಸಮುದಾಯದ ಗರ್ಭದೊಳಗೆ ಮತ್ತೊಂದು ಶೋಷಕ ಆಚರಣೆಯೂ ಇರಲಿಕ್ಕೆ ಸಾಧ್ಯವಿದೆ.

ಜನಪದ ಮಹಿಳೆಗೆ ಇರುವ ಸ್ವಾತಂತ್ರ್ಯ ಅಂದಾಗಲೂ ಅದು ಜಾತಿ ಶ್ರೇಣೀಕರಣಕ್ಕೆ ತಕ್ಕಂತೆ ಭಿನ್ನವಾಗುವುದನ್ನು ಗುರುತಿಸಬಹುದು ಅಥವಾ ಮೇಲ್ವರ್ಗದ ಮಹಿಳೆಯರನ್ನಿಟ್ಟುಕೊಂಡು ನಿರ್ವಚಿಸುವಾಗ ಸಹಜವಾಗಿ ವಿರೋಧಿ ನೆಲೆಯೊಂದರಿಂದ ಮಾತ್ರ ವಿವರಿಸಲು ಸಾಧ್ಯವಾಗಬಹುದು. ಹೀಗೆ ಜನಪದ ಮಹಿಳೆ ಅನನ್ಯತೆಯನ್ನು ಅವಳ ಸ್ವಾತಂತ್ರ್ಯದ ನೆಲೆಯನ್ನು ವಿವರಿಸುವಾಗಲೂ ಅನೇಕ ತೊಡಕು ಗಳಿರುವುದನ್ನು ಅಲ್ಲಗಳೆಯುವಂತಿಲ್ಲ. ❑



ವಿಚಾರ ವೀಳ್ಯ

■ ಆಶಾ ಜಿ. ಚಂದ್ರಗುತ್ತಿ

ಈ ಔದ್ಯೋಗಿಕರಣ ಮತ್ತು ಯಂತ್ರ ಯುಗದ ಮಾನವ ಮನುಷ್ಯ ಸಹಜವಾದ ಆದರ, ಪ್ರೀತಿ, ನಂಬಿಕೆ, ವಿಶ್ವಾಸ ಇಂಥದ್ದೇ ವಿಶಿಷ್ಟವಾದ ಅನೇಕ ನಂಟುಗಳನ್ನ ಕಳೆದುಕೊಳ್ಳುತ್ತಿದ್ದಾನೆ. ಕಾರಣ, ಸ್ವಾರ್ಥ. ಮನುಷ್ಯ ಸಂಬಂಧಗಳಿಂದ ಕಳಚಿಕೊಳ್ಳುತ್ತಿರುವ ಇವನು ತನ್ನ ಸ್ವಾರ್ಥಕ್ಕಾಗಿ ಎಲ್ಲವನ್ನು ಬಲಿಕೊಡುತ್ತಿದ್ದಾನೆ. ಪ್ರಾಣಿ ವರ್ಗವನ್ನು ಮೀರಿಸುವ ಕ್ರೌರ್ಯದ ಕಡೆಗೆ ಮುಖ ಮಾಡಿರುವ ಈ ಮನುಷ್ಯ ವರ್ಗವನ್ನ ಕಂಡು ಭಯವಾಗುತ್ತಿದೆ. ಎಲ್ಲೆಂದರಲ್ಲಿ ನಡೆಯುತ್ತಿರುವ ಜಾತಿ ಮತ್ಸರಗಳು, ಕೋಮು ದ್ವೇಷಗಳು, ಅತ್ಯಾಚಾರ, ಭ್ರಷ್ಟಾಚಾರಗಳು ನೋಡುವ ನೋಟದಲ್ಲೂ, ತಿನ್ನುವ ತುತ್ತಿನಲ್ಲೂ ಯಾಕೆ ಬಂದು ಕುಳಿತಿವೆಯೋ ತಿಳಿಯುತ್ತಿಲ್ಲ. ಹೇಳಲಾಗದ, ಅನುಭವಿಸಲಾಗದ ಇಂಥದ್ದೊಂದು ಗೊಂದಲದ ಮನಸ್ಥಿತಿಯಲ್ಲಿ ನಾನಿದ್ದಾಗಲೇ ಓದಲು ಕೈಗೆತ್ತಿಕೊಂಡದ್ದು ಡಾ. ಎಚ್. ನಾಗವೇಣಿಯವರ 'ಸೂರ್ಯನಿಗೊಂದು ವೀಳ್ಯ' ಕೃತಿಯನ್ನ.

ನಾಗವೇಣಿ ಇವರು ತುಳುನಾಡು ಎಂದೇ ಹೆಸರಾದ ಕಡಲತಡಿಯ ದಕ್ಷಿಣ ಕನ್ನಡ ಜಿಲ್ಲೆಯ ಹೊನ್ನಿಕಟ್ಟೆಯವರು. ಭಂಟರ ಕೃಷಿಕ ಕುಟುಂಬದಲ್ಲಿ ಜನಿಸಿದ ಇವರು ಕನ್ನಡದ ಶ್ರೇಷ್ಠ ಕಾದಂಬರಿ ಹಾಗೂ ಕಥೆಗಾರ್ತಿಯರಲ್ಲಿ ಒಬ್ಬರಾಗಿದ್ದಾರೆ. ಗಾಂಧಿಬಂದ, ಕಡಲು, ನಾಕನೇ ನೀರು, ಮೀಯುವ ಆಟ, ವಸುಂಧರೆಯಗ್ಯಾನ ಇಂಥ ಶ್ರೇಷ್ಠವಾದ ಕೃತಿಗಳ ಮೂಲಕ ಪರಿಚಿತರಾಗಿದ್ದಾರೆ.

ನಾನು ಕೊಡುತ್ತಿರುವ 'ವೀಳ್ಯ' ರಣವೀಳ್ಯವೂ ಅಲ್ಲ ಪ್ರೀತಿಯ ವೀಳ್ಯವು ಅಲ್ಲ. ಇದು ಸಮಾಜದ ಸೂರ್ಯಂದಿರ ಅಂತರಂಗವನ್ನು ಮೀಟಬೇಕಾದ ವಿಚಾರ ವೀಳ್ಯ ಅಷ್ಟೆ ಎನ್ನುವ ನಾಗವೇಣಿಯವರ ಮಾತಿನ ವೀಳ್ಯವನ್ನ ಸ್ವೀಕರಿಸಿಯೆ ಅವರ ಸೂರ್ಯನಿಗೊಂದು ವೀಳ್ಯ ಅಂಕಣ ಬರಹಗಳ ಸಂಕಲನವನ್ನು ಓದಲು ಮುಂದಾಗಿದ್ದೆ.

ಅದದೇ ಹಳೆಯ ನೆನಪುಗಳನ್ನ ಮತ್ತೆ ಕೆದಕಿ ನೋಡುವ ಕಾರ್ಯ ಮುಂದುವರೆಸುತ್ತ ಅವರ ಗ್ಯಾನದೊಳಗೆ ನಮ್ಮನ್ನು ಸೇರಿಸಿಕೊಳ್ಳುವ ಮತ್ತು ಆ ಬಾಲ್ಯದ ಸವಿಯನ್ನು ನಮಗೂ ಉಣಬಡಿಸುತ್ತ ತುಳುನಾಡನ್ನ ಮತ್ತೊಮ್ಮೆ ಸುತ್ತು ಹಾಕಿಸುವ ಕೆಲಸ ಯಥಾವತ್ತಾದರೂ ಮಂಡಿಸಿದ ವಿಚಾರಗಳ ಹೂರಣ ಅದ್ಭುತವಾಗಿದೆ. ತುಳುನಾಡನ್ನ, ಕರಾವಳಿಯ ಬದುಕನ್ನ ಪ್ರೀತಿಸುವಷ್ಟೆ ಆಪ್ತವಾಗಿ ಹಂಪಿ, ಹೊಸಪೇಟೆ ಹಾಗೂ ಆಸುಪಾಸಿನ ಊರುಗಳ ಮತ್ತು ಅಲ್ಲಿನ ಪರಿಸರವನ್ನು ಪರಿಚಯಿಸುತ್ತಾರೆ.

ನೆನಪುಗಳು, ಅನುಭವಗಳು ಎಲ್ಲರಿಗೂ ಸಹಜವೇ. ಆದರೆ ಅದನ್ನ ವಿಚಾರವಂತಿಕೆಗೆ ಸೇರಿಸಿಕೊಳ್ಳುವುದಿದೆಯಲ್ಲ ಅದು ಮಹತ್ವದ್ದಾಗಿ ಕಾಣಿಸುತ್ತದೆ. ಲೇಖಕಿಯ ಸೂಕ್ಷ್ಮ ಅವಲೋಕನಕ್ಕೆ ಸಾಕ್ಷಿಯಾಗಿರುವ ಈ ಕೃತಿಯ ಪ್ರಾರಂಭದಲ್ಲಿಯೇ ಕೋಮು ದ್ವೇಷ, ಮತೀಯ ಗಲಭೆಗಳ ಬಗ್ಗೆ ತಮ್ಮ ಬೇಸರಿಕೆಯನ್ನ ವ್ಯಕ್ತಪಡಿಸುತ್ತ ಎಸ್ತರಬಾಯಿ, ಮೇರಿಬಾಯಿ, ಜಿಲ್ಲಾಬಾಯಿ, ಸೈಯದ್ದಿಬ್ಯಾರಿ, ಆದಂಬ್ಯಾರಿ ಮಾಯಾಬಜಾರಿನ ಮಾಯಾ ಲೋಕವನ್ನು ತುಳುನಾಡಿನಲ್ಲಿ ಸ್ಥಾಪಿಸಿದಾಗ ಇಲ್ಲದ ಕೋಮು ಜ್ವಾಲೆಗಳು, ಕ್ರಿಶ್ಚಿಯನ್ನರ ಫ್ಲೋರಿನ್, ಚಿಕ್ಕಪ್ಪ ಸುಂದರ ಶೆಟ್ರನ್ನು ಮದುವೆಯಾಗಿ ಕಮಲ ಚಿಕ್ಕಮ್ಮ ಆದಾಗ ಇಲ್ಲದ ಈ ಜಾತಿ ಮತ್ಸರಗಳು ಈಗ ತುಳುನಾಡಿನಲ್ಲಿ ನರರಾಕ್ಷಸರನ್ನು ಒಳಗೊಂಡ ಒಂದು ವಿಚಿತ್ರ ಮಾಯಾಬಜಾರನ್ನು ಸೃಷ್ಟಿಸಿವೆ. ಹಿಂದೂ ಮುಸ್ಲಿಂರ ನಂತರ ಕ್ರಿಶ್ಚಿಯನ್ನರನ್ನ ಸೇರಿಸಿಕೊಂಡು ಮುನ್ನುಗ್ಗುತ್ತಿರುವ ಕೋಮುಜ್ವಾಲೆಗಳಿಗೆ ದೊಂಬಿ, ಘರ್ಷಣೆ, ಗಲಭೆಯಂತ ಕೃತ್ಯಗಳಿಗೆ ಅಪಪ್ರಚಾರ – ಗಾಳಿ ಸುದ್ದಿಗಳು ಪುಷ್ಟಿಕೊಡುತ್ತವೆ ಎನ್ನುವ ಲೇಖಕಿ ಮುಂದೆ 'ದಾರಿಯ ಮೀರಿದವರು' ಲೇಖನದಲ್ಲಿ ಇತ್ತೀಚಿನ ದಿನಗಳಲ್ಲಿ ಹಿಂದೂ ಮತ್ತು ಮುಸ್ಲೀಂ ಜನಾಂಗಗಳಲ್ಲಿ ಇದ್ದಿರಬಹುದಾದ ಮೃಗೀಯ ಗುಣಗಳನ್ನು ಯಾವುದೇ ಪಕ್ಷಪಾತವಿಲ್ಲದೆ ತಮ್ಮ ಬರವಣಿಗೆಯ ಮೂಲಕ ದಾಖಲಿಸುತ್ತಾರೆ.

ಈ ಕೋಮು ದ್ವೇಷ ಎನ್ನುವಂಥದ್ದು ಬರಿ ಮೃಗೀಯ ಮನಸ್ಸುಗಳಿಗೆ ಮಾತ್ರ ಸೀಮಿತವಾಗಿರದೆ ಪ್ರಕೃತಿಯಲ್ಲಿನ ಬಣ್ಣಗಳ ಮೇಲೂ ದಾಳಿ ಇಟ್ಟಿದೆ ಎಂಬುದನ್ನು 'ಬಣ್ಣಗಳ ರಾಜಕೀಯ' ಲೇಖನದಲ್ಲಿ ಚರ್ಚಿಸುತ್ತಾರೆ. ಪ್ರೀತಿ ಕೊನರದ ಮನಸ್ಸುಗಳಿಗೆ... ಭಾವಸ್ಫುರಿಸುವ ಜೀವಿಗಳಿಗೆ, ಬಣ್ಣಗಳೆಂದರೆ... ಬರೀ ಬಣ್ಣ ಅಷ್ಟೆ. ಆದರೆ ಭಾವಕ್ಕೆ – ಭಾವ ಜಿನುಗಿಸುವ ಜೀವಗಳಿಗೆ ಬಣ್ಣ ಎಂಬುದು ಬರಿಯ ಬಣ್ಣ ಅಲ್ಲ – ಅದು ಸಂಭ್ರಮ, ಸಂತಸ ಹನಿಸುವ... ರಾಗ ರಂಗು ಚಿಮ್ಮಿಸುವ ಕಾಮನಬಿಲ್ಲು!

ಆದರೆ ಬಣ್ಣಗಳ ಲೋಕವನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಂಡ ಮನುಷ್ಯ ವರ್ಗವು, ತನ್ನ ಬದುಕಿನ ಶೈಲಿ – ಆಸಕ್ತಿ – ಮನೋವಿಕಾರಕ್ಕೆ ತಕ್ಕಂತೆ ತಾವು ಸೃಷ್ಟಿಸಿ – ಅನುಸರಿಸಿಕೊಂಡು ಬಂದ ಧರ್ಮಗಳಿಗೆಲ್ಲ ಪ್ರಕೃತಿಯಿಂದಲೇ ಒಂದೊಂದು ಬಣ್ಣವನ್ನು 'ಗುತ್ತಿಗೆ' ಪಡೆದುಕೊಳ್ಳುವುದರ ಮೂಲಕ ನಿಷ್ಕಲ್ಮಶ ಮನಸ್ಸುಗಳಿಗೆಲ್ಲ ಸಂಭ್ರಮ... ಸಂತಸ.... ಸಡಗರದಂತಹ... ನಿಷ್ಕಲ್ಮಶ ಭಾವಗಳನ್ನು

ನೀಡುತ್ತಿದ್ದ ಬಣ್ಣಗಳ ಲೋಕದ ಮೂಲಕ್ಕೆ 'ಕೋಮುದ್ವೇಷ' ಎಂಬ ಕೊಳ್ಳಿ ಇಟ್ಟು ಸುಡುತ್ತಿರುವುದನ್ನು ಗಮನಿಸಿದ್ದಾಗಿ ಹೇಳುತ್ತಾರೆ.

'ಶಾಂತಿಯ ತೋಟಕ್ಕೊಂದು ಮರಿಸಲಗ' ಎಂಬ ಅಂಕಣದಲ್ಲಿ ಎಳೆಯ ಮನುಸ್ಸಗಳ ಮೇಲೆ ಪ್ರಭಾವ ಬೀರುತ್ತಿರುವ ಕೋಮು ದ್ವೇಷ, ಮತೀಯ ಗಲಾಟೆಗಳು, ದೇಶಪ್ರೇಮಿ ಭಜರಂಗಿ ದಳದ ಬಗ್ಗೆ ಪ್ರಸ್ತಾಪಿಸುತ್ತ ಇಂತಹ ಪ್ರಭಾವಕ್ಕೊಳಗಾಗಿ ಅಪಾಯದ ಅಂಚಿನಲ್ಲಿರುವ ಮರಿ ಮನಸ್ಸುಗಳನ್ನು ಕತ್ತಿಯ ಹರಿತಬಾಯಿಂದ ತಪ್ಪಿಸುವ ಬಗೆ ಹೇಗೆಂದು ಯೋಚಿಸುತ್ತಾರೆ. 'ಈ ರಾಮ ಬೇಕೆ' ಬರಹದಲ್ಲಿ ಇಂದಿನ ಸಾಮಾಜಿಕ ಸಂದರ್ಭದಲ್ಲಿ ನಾಯಿಕೊಡೆಗಳಂತೆ ಏಳುತ್ತಿರುವ ಕೋಮು ಸಂಘಟನೆಗಳು ತಮ್ಮ ಮಕ್ಕಳ ಮನಸ್ಸಿನಲ್ಲಿ ಬಿತ್ತುತ್ತಿರುವ ಸಂದೇಶ ಯಾವ ಮಾದರಿಯದ್ದು ಎಂದು!? ಯಾವುದೇ... ಯಾರದೇ ಮಕ್ಕಳು ಅವು ಕೆಸುಗಿಡದ ಗುಣವುಳ್ಳವು, ಹಾಕಿದ ನೀರು - ಗೊಬ್ಬರದ ಸಾರ ಗುಣಕ್ಕೆ ತಕ್ಕಂತೆ, ತಕ್ಷಣದ ಪ್ರತಿಕ್ರಿಯೆ ತೋರುವ ಆ ಕೆಸು ಸಸಿಗಳ ಈ ಮಕ್ಕಳು ತಮ್ಮ ಗುರುಹಿರಿಯರು ತಮ್ಮ ಮುಂದಿರಿಸುವ ವಸ್ತು - ವಿಮರ್ಶೆಯ ಮಾದರಿಯಲ್ಲೇ ತಮ್ಮ ಅಭಿಪ್ರಾಯಗಳನ್ನು ಮರು ರೂಪಿಸಿಕೊಳ್ಳುವ ಅದ್ಭುತ ಸಾಮರ್ಥ್ಯವುಳ್ಳವು! ಎನ್ನುವ ನಾಗವೇಣಿ ಯವರು ತಮ್ಮ ಮಾತಿಗೊಂದು 'ಸಾಮೂಹಿಕ ಸಾಕ್ಷಿ'ಯನ್ನು ಹೊಸಪೇಟೆಯ ಚಿಲಕನ ಹಟ್ಟಿ ಗ್ರಾಮದ ತೆಲುಗುಬಾಳ ಶಾಲೆಯಲ್ಲಿ ನಡೆದ ಮಾದಾರ ಚನ್ನಯ್ಯ ಮತ್ತು ತೆಲಗುಬಾಳ ಸಿದ್ದೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಧರ್ಮ ಮತ್ತು ಮಾನವೀಯತೆ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಬೇಕಾದ ಸಂದರ್ಭದಲ್ಲಿ ಮೇಲಿನ ಅವರ ಮಾತಿಗೆ 'ಸಾಮೂಹಿಕ ಸಾಕ್ಷಿ' ಸಾರ್ವಜನಿಕವಾಗಿ ಸಿಕ್ಕುತ್ತದೆ.


ಜಾತಿ ಧರ್ಮಗಳೊಳಗೆ ಹುಟ್ಟಿಕೊಂಡ ಜಾತಿ ಮತ್ಸರ, ಕೋಮು ದ್ವೇಷಗಳನ್ನು ಗುರುತಿಸುತ್ತಲೆ ಮುಂದೆ ಎದುರಾಗಬಹುದಾದ ಅಪಾಯಗಳಿಗೆ ಮುನ್ಸೂಚನೆಯನ್ನು ನೀಡುವ ಜೊತೆಗೆ ನನ್ನ ಮಾಯಾಬಜಾರು, ಕೊರಗನಂಗಳದ ಗೋಮಾತೆ, ಇವ್ವು ಯಾವ ಬಳ್ಳಿ?, ನೀವ್ ಯಾವ್ ಜನ...? ಮುಂತಾದ ಲೇಖನಗಳ ಮೂಲಕ ಹಿಂದೂ ಮುಸ್ಲೀಂ ಜನಾಂಗಗಳ ನಡುವೆ ಇದ್ದಿರಬಹುದಾದ ಮುಗ್ಧ ಮನಸ್ಸಿನ ಮಧುರ ಸಂಬಂಧವನ್ನು ವಿವರವಾಗಿ ತೆರೆದಿಡುವ ಪ್ರಯತ್ನ ವಾಗಿದೆ.

ಜಿಲ್ಲಾಬಾಯಿ, ಸೈಯದ್ಧಿಬ್ಯಾರಿ, ಆದಂಬ್ಯಾರಿ ತುಳುನಾಡಿನಲ್ಲಿ ಮಾಯಾ ಬಜಾರನ್ನು ಸ್ಥಾಪಿಸಿದಾಗ ಹಿಂದೂ–ಮುಸ್ಲೀಮರ ಸಂಬಂಧಗಳು ಚೆನ್ನಾಗಿಯೇ ಇದ್ದವು ಆಗ ಈ ಕೋಮುಜ್ವಾಲೆಗಳು ಕಡಲತಡಿಯನ್ನು ಸುಡಲಿಲ್ಲ. ಹಸು ದಲ್ಲಾಳಿಗಳಾದ ಹಸನ್‌ಬ್ಯಾರಿ, ಖಾದ್ರಿ ಬ್ಯಾರಿಯವರಿಗೆ ಒಂದು ಕಾಲದಲ್ಲಿ ಭಾರಿ ಬೇಡಿಕೆಯೆ ಇತ್ತು. ಕಾರಣ ಹಸು, ಎಮ್ಮೆಗಳ ಗಂಡು ಕರುಗಳು, ಗೊಡ್ಡು ಬರಡು ಬಿದ್ದ ಎಮ್ಮೆ ಹಸುಗಳು ಹಾಗೂ ಮುದಿಗಟ್ಟಿದ ಕೋಣಗಳನ್ನು ಯಾವುದೇ ಜಾತಿ ಮತ, ವರ್ಗ ಭೇದವಿಲ್ಲದೆ ಹೈನು ಸಾಕುವ ಎಲ್ಲಾ ಕುಟುಂಬಗಳು ದಲ್ಲಾಳಿ ಬ್ಯಾರಿಗಳಿಗೆ ಹೊತ್ತು ಹಾಕಿ ಕೈತೊಳೆದು ಕೊಳ್ಳುವಾಗ ಹಿಂದೂ–ಮುಸ್ಲೀಂರ ನಡುವೆ ಸಂಬಂಧಗಳು ಬರಿ ವ್ಯವಹಾರಿಕ ಸಂಬಂಧಗಳು ಮಾತ್ರವಾಗಿರದೆ ಅನ್ಯೋನ್ಯವಾಗಿದ್ದವು. ಇತ್ತೀಚೆಗೆ ಕೆಲವು ವರ್ಷಗಳಿಂದ ಇದ್ದಕ್ಕಿದ್ದಂತೆ ಗೋವುಗಳ ಮೇಲೆ ಇನ್ನಿಲ್ಲದಂತಹ ಪ್ರೀತಿ ಉಕ್ಕಿಸಿಕೊಂಡು ಅವುಗಳ ಸಂರಕ್ಷಣೆಗಾಗಿ ತಮ್ಮ ಅಣ್ಣಂದಿರು ಸಂಘಟನೆಗಳನ್ನು ಸೇರಿಕೊಂಡು ಹೋರಾಡುತ್ತಿರುವುದಾಗಿ ಲೇಖಕಿ ಲೇವಡಿ ಮಾಡುತ್ತಾರೆ.

ಇವ್ವು ಯಾವ ಬಳ್ಳಿ ಕಥೆಯ ಸಾಯಿರ ತನ್ನ ಬಕ್ರೀದ್ ಹಬ್ಬವನ್ನು ಆಚರಿಸುತ್ತಾಳೆ, ಹಂಪಿಯ ಫಲಪೂಜೆಯಲ್ಲಿ ಭಾಗವಹಿಸುತ್ತಾಳೆ ತನ್ನ ಕೇರಿಯಲ್ಲಿ ನಡೆಯುತ್ತಿರುವ ಏಸುಕ್ರಿಸ್ತನ ಹುಟ್ಟುಹಬ್ಬದಲ್ಲಿಯೂ ಪಾಲ್ಗೊಳ್ಳುತ್ತಾಳೆ. ಕ್ರಿಸ್ತನ ಹುಟ್ಟು ಹಬ್ಬಕ್ಕೂ ನಿನಗೂ ಎಂಥದ್ದೇ ಸಂಬಂಧ ಅಂದರೆ ತನ್ನ ಮಲತಾಯಿ ಬಾಲ್ಯದಲ್ಲಿ ಹೇಳಿದ್ದ ಜನಪದ ಕಥೆಯನ್ನು ಬಿಚ್ಚಿಡುತ್ತಾಳೆ. ಏಸುಕ್ರಿಸ್ತನ ತಾಯಿ ಮುಸ್ಲಾಂನರವಳಂತೆ ಅನಾಥ, ಅವಿವಾಹಿತೆಯಾಗಿದ್ದು ಆಕಾಶದಿಂದ ತೂರಿ ಬಂದ ಬೆಳಕಿನ ಕಿರಣದಿಂದ ಗರ್ಭಿಣಿಯಾಗುತ್ತಾಳೆ. ಗರ್ಭದ ಅಪವಾದದಿಂದ ಕಾಡು ಪಾಲಾಗುತ್ತಾಳೆ, ಕುರುಬರಿಗೆ ಸಿಕ್ಕ ಆಕೆ ದೇವರ ಮಗು ಏಸುಕ್ರಿಸ್ತನನ್ನು ಹೇರುತ್ತಾಳೆ. ಆ ಮಗು ಬೆಳೆದು ದೊಡ್ಡವನಾಗಿ ಕಿರಿಸ್ತಿಯನ್ ಆಗಿದ್ದಾನೆ. ಸಾಯಿರ ಹೇಳುವ 'ಜಾನಪದ ಕತೆ' ಎಲ್ಲೋ ಒಂದು ಕಡೆ ವಿಭಿನ್ನ ಧರ್ಮಗಳ ಮಾನವ ಕುಲವನ್ನು 'ಸದ್ದಿಲ್ಲದೆ ಒಗ್ಗೂಡಿಸುತ್ತಿರುವ ಭಾವವನ್ನು ಹೇಳುತ್ತದೆ.'

ಬದುಕಿನ ಇಳಿ ಸಂಜೆಯಲ್ಲಿರುವ ಮುಕ್ಬುಲ್ನೀಸಾ ಎಂಬ ಮುಸ್ಲೀಂ ತಾಯಿಯ ಭಾವಪೂರ್ಣವಾದ ಮಾತುಗಳ ಮೂಲಕ ಹಿಂದೂ–ಮುಸ್ಲೀಂ ಜನಾಂಗಗಳ ನಡುವೆ ಇದ್ದಿರಬಹುದಾದ ತಿಳಿ ಮನಸ್ಸಿನ ಸಿಹಿ ಸಂಬಂಧವನ್ನು ನೀವ್ ಯಾವ ಜನ...? ಅಂಕಣದಲ್ಲಿ ಕಾಣಬಹುದಾಗಿದೆ. ಮುಂಬೈನಲ್ಲಿ ಅಲ್ಲಾನ ಹೆಸರಿನಲ್ಲಿ ನಡೆಯುತ್ತಿರುವ ಪಾತಕ ಕೆಲಸಗಳು ಇಲ್ಲಿ ನಡೆಯದಿರಲಿ ಎಂದು ಅಲ್ಲಾ ದೇವರಲ್ಲಿ ಬೇಡಿಕೊಳ್ಳುವ ಮಹಾತಾಯಿ ಮುಕ್ಬುಲ್ನೀಸಾ. ಜಾತಿ ಜಾತಿಗಳೊಳಗೆ ಹುಟ್ಟುವ, ಹುಟ್ಟಿದ ಗೊಂದಲಗಳನ್ನೆಲ್ಲ ತಮ್ಮದೇ ರೀತಿಯಲ್ಲಿ ಹೊಸಕಿ ಹಾಕುವ ಚಮಕು ಈ ಲೇಖನದಲ್ಲಿ ಮೂಡಿಬಂದಿದೆ.

ಪುರುಷ ಪ್ರಧಾನ ಸಮಾಜದಡಿಯಲ್ಲಿ ನಲುಗಿ ಹೋಗಿರುವ ಅದೆಷ್ಟು ಹೆಣ್ಣು ಜೀವಗಳು ಜೀವನದಲ್ಲಿ ಎದುರಾದ ಕಹಿ ಘಟನೆಗಳನ್ನು ಅನುಭವಿಸುತ್ತಲೆ ತಮ್ಮ ಬದುಕನ್ನು ಕಟ್ಟಿಕೊಂಡ ರೀತಿ ಮೆಚ್ಚುವಂತದ್ದೆ ಯಾಕೆ? ಈ ಹೆಣ್ಣು ಜೀವ ಮತ್ತೆ ಮತ್ತೆ ಅದೇ ಮೌನದೊಳಗೆ ಸಿಲುಕಿಕೊಳ್ಳುತ್ತದೆ. ನಾಯಿಗಿಂತಲೂ ಕಡೆಯಾಗಿ ವರ್ತಿಸುವ ಕಾಮುಕರ ನಡುವೆ ಆಕೆ ಬಯಸುವ ಜೀವನಕ್ಕೆ ಯಾವ ಅವಕಾಶವನ್ನು ಕೊಡದೆ ದೇಹದ ನರಗಳನ್ನೆಲ್ಲ ಹಿಡಿದು ಜಗ್ಗುತ್ತವೆ. ಭಾಷೆ ಬಾರದ ಎಂದೂ ಕಾಣದ ಊರಲ್ಲಿ ಬದುಕುವುದೇ ಕಷ್ಟ, ಅಂತಹುದರಲ್ಲಿ ಕುಟುಂಬ ನಿರ್ವಹಣೆಯ ನೊಗ ಹೊತ್ತ ಹೆಣ್ಣನ್ನು ಯಾಕಿಷ್ಟು ಹಿಂಸಿಸುತ್ತಾರೆ ಎನ್ನುವ ಲೇಖಕಿ ಎಣ್ಣೆ ಬಂದಾಗ ಗಾಣ ಮುರಿದರೆ? ಲೇಖನದ ಋತುಪರ್ಣಾಳಾ ಕತೆಯನ್ನು ಕಣ್ಣು ಹನಿಗೂಡುವಂತೆ ಚಿತ್ರಿಸುತ್ತಾರೆ.



ಅಮ್ಮ... ಎಂಬ 'ಪ್ರೀತಿಯ ಮೂಟೆ' ಮಕ್ಕಳಗ್ಯಾನದಿಂದ ಎಂತೆಂಥ ಸನ್ನಿವೇಶದಲ್ಲಿ ಹೇಗ್ಹೇಗೆ ಹೊರಬರುತ್ತಾಳಲ್ಲ ಅಂತಹ ಅವಳ ಎಲ್ಲಾ ನೆನಪುಗಳಿಗೆ ಲೇಖಕಿಯ ಬಾಲ್ಯದ ಮಧುರ ಸ್ಮೃತಿಗೆ ಅಮಟೆ ಮರ ಒಂದು ಅದ್ಭುತ ಸ್ಮಾರಕವಾಗಿ ನಿಲ್ಲುತ್ತದೆ.

ಹೆಗ್ಗೋಡಿನ ಚರಕ ಗ್ರಾಮೀಣ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಉತ್ಸವದಲ್ಲಿ 'ಗ್ರಾಮೀಣ ಮಹಿಳೆಯರೊಂದಿಗೆ ಲೇಖಕಿಯರ ಸಂವಾದ' ಎಂಬುದು ಒಂದು ಮುಖ್ಯ ಗೋಷ್ಠಿಯಲ್ಲಿ ಅಲ್ಲಿ ಚರ್ಚಿತವಾದ ಒಂದು ವಿಷಯ. ಪರಂಪರೆಯ ಭಾವ ವಿದ್ಯಾವಂತ ಪ್ರಗತಿಪರ ಚಿಂತಕ ಹಾಗೂ ಎಡಪಂಥೀಯ ವಿಚಾರಧಾರೆಗಳನ್ನು ಅಂಟಿಸಿಕೊಂಡ ಗಂಡನ ಕೀಳರಿಮೆಯಿಂದಾಗಿ ಬಂಡಾಯದ ಅಕ್ಕ ನಿರಂತರವಾಗಿ ಶೋಷಣೆ, ಹಿಂಸೆಗಳನ್ನು ಅನುಭವಿಸುತ್ತಿದ್ದಳು. ಅಕ್ಕನ ಪ್ರತಿಭಟನೆಯ ಕಾವ್ಯಗಳು, ಬಂಡಾಯದ ಹೋರಾಟಗಳು ಭಾವನಿಗೆ ಹಿಡಿಸುತ್ತಿರಲಿಲ್ಲವೋ ಏನೊ ಮನೆಯಲ್ಲಿ ಆತನಿಂದ ಶೋಷಣೆಯ ವಿವಿಧ ಮಾದರಿ ಪ್ರಯೋಗಗಳು ಆರಂಭವಾದವು. ಈ ದೌರ್ಜನ್ಯವನ್ನು ಎರಡು ದಶಕಗಳಿಂದ ಗಮನಿಸುತ್ತಾ ಬಂದಿದ್ದ ಮನೆಕೆಲಸದಾಕೆ ತನ್ನ ಕಲ್ಲುಮುಳ್ಳಿನ ಬದುಕ ದಾರಿಯಲ್ಲಿ ಬೆಳೆಸಿಕೊಂಡಿದ್ದ ಪ್ರತಿಭಟನಾ ಶಕ್ತಿಯಿಂದ ಶೋಷಿತ ಒಡತಿಗೆ ಸಲಹೆ ನೀಡಿ ಧೈರ್ಯ ತುಂಬಿದ್ದಳು. ಆ 'ಪ್ರತಿಭಟನಾ ಶಕ್ತಿ' ಅದ್ಭುತವಾಗಿ ಕೆಲಸ ಮಾಡಿದ್ದನ್ನು ಬಂಡಾಯದ 'ಅಕ್ಕ' ಪರಂಪರೆಯ 'ಭಾವ' ಲೇಖನ ನಿರೂಪಿಸುತ್ತದೆ.

ಫಲವತ್ತಾಗಿರೊ ಮಣ್ಣಿನಲ್ಲಿ ಬೆಳೆ ತೆಗೆಯುವುದೇ ಕಷ್ಟವಾಗಿರುವ ಈ ದಿನಗಳಲ್ಲಿ ಕೊಪ್ಪಳ ಜಿಲ್ಲೆಯ ಕಲ್ಲುತಾವರೆಗೇರೆ ಹಳ್ಳಿಯ ಶೇಖವ್ವ ಎಂಬ ಅನಕ್ಷರಸ್ಥ ಮಹಿಳೆಯೊಬ್ಬಳು ಇಡೀ ನಾಡಿಗೆ ಮಾದರಿ ಯಾಗುವಂತೆ ತನ್ನ ಪಾಲಿಗೆ ಬಂದ ಹಾಸು ಬಂಡೆಗಳ ಜಾಗದ ಮೇಲೆಯೇ ಬೆಳೆ ತೆಗೆದುದರಿಂದಲೇ ಸೊಗಸಾಗಿ ಬದುಕು ಕಟ್ಟಿ ಕೊಂಡದ್ದನ್ನು 'ಕಲ್ಲು ಬಂಡೆಯ ಮೇಲೆ ಹಸಿರು ಕ್ರಾಂತಿ' ಅಂಕಣದಲ್ಲಿ ಹೇಳಲಾಗಿದೆ. ಕಷ್ಟದ ಮೂಟೆಯನ್ನೆ ಹೊತ್ತುಕೊಂಡು ಕಣ್ಣಲ್ಲಿ ಕೈತೊಳೆಯುತ್ತಿರುವ ಹೆಣ್ಣು ಜೀವಗಳಿಗೆ ಮಾದರಿಯಾಗಬಲ್ಲ ಮತ್ತೊಬ್ಬ ಹೆಣ್ಣು ಮಗಳು ಲಚುಮಿ. ಬೆಸ್ತ ಪೈನಿಯ ಮರಣ ನಂತರ ಲಚುಮಿ ಹರಿಗೋಲ ಸಮತೋಲನಕ್ಕೆ ಪೈನಿಯ ಜಾಗದಲ್ಲಿ ಬಂಡೆಕಲ್ಲೊಂದು ಬಂದು ಕೂತು ಸಂಸಾರದಲ್ಲಿ ಆತ ನಿರ್ವಹಿಸಬೇಕಾದ ಜವಾಬ್ದಾರಿ ಯನ್ನು ಅದು ಯಶಸ್ವಿಯಾಗಿ ನಿರ್ವಹಿಸುತ್ತದೆ! ತನ್ನ ಸಂಸಾರ ನೌಕೆಯ ಸುಗಮ ಚಾಲನೆಗೆ ಹಾಗೂ ಗಂಡನ ಅಗತ್ಯ ಅನಿವಾರ್ಯತೆಯನ್ನು ನೀಗಿಸಲು ಲಚುಮಿ ಕಂಡುಕೊಂಡ ಪರ್ಯಾಯ ದಾರಿಯನ್ನು ಸೂಚಿಸುತ್ತದೆ. 'ನೀರ ಮೇಲಿನ ಕನಸು' ಈ ಲೇಖನ ಇಂಥ ಎಷ್ಟೋ ಹೆಣ್ಣು ಮಕ್ಕಳ ಸ್ಥಿತಿಯನ್ನು ಚಿಂತಿಸುತ್ತಲೆ ಅಸಹಾಯಕ ಹೆಣ್ಣು ಮಕ್ಕಳು ಗಟ್ಟಿಗೊಳ್ಳಬೇಕಾದ ಅನಿವಾರ್ಯತೆಯನ್ನು ಹೇಳುತ್ತದೆ.

ಉಡುಪಿ ಶಾಸಕರ ಪತ್ನಿ ಪದ್ಮಪ್ರಿಯ ತನಗೆ ಭಾವನಾತ್ಮಕ ಸಂಗಾತಿಯಾಗದ ಗಂಡನ ಅಂತಸ್ತು, ಅಧಿಕಾರ, ಸಂಪತ್ತುಗಳನ್ನೆಲ್ಲ ಅಂಗಳದ ತರಗೆಲೆಗಳಂತೆ ಹೆಬ್ಬಾಗಿಲು ತೋರಣಕ್ಕೆ ಊರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆ ಸಂದರ್ಭದಲ್ಲಿ ನಾಗವೇಣಿಯವರನ್ನು ಕಾಡಿದ್ದು ಅಮ್ಮನ ಬಾಯಿಂದ ಪಾಡ್ದನ (ಮೌಖಿಕ ಕಾವ್ಯ) ರೂಪದಲ್ಲಿ ಕೇಳಿಸಿಕೊಂಡ ತುಳುನಾಡಿನ ಸಾಂಸ್ಕೃತಿ ವೀರೆ – ಸ್ವಾಭಿಮಾನಿ ದೇವತೆ 'ಸಿರಿ', ಕೌಟುಂಬಿಕ ನಿಯತಿಯನ್ನು ಮುರಿದು ಗಂಡನಿಗೆ ಹೆಂಡತಿ ಶಾಸ್ತ್ರ ಸಮ್ಮತವಾಗಿ ಬರ (ವಿಚ್ಛೇದನ) ಹೇಳಿ, ಆತನನ್ನು ತನ್ನ ಬದುಕಿನಿಂದ ಸಂಪೂರ್ಣ ನಿರಾಕರಿಸುವ ಮೂಲಕ ಸಮಾಜದ ಸ್ಥಾಪಿತ ವ್ಯವಸ್ಥೆಯನ್ನು ಧಿಕ್ಕರಿಸಿ ಮತ್ತೆ ಮರುಮದುವೆಯಾಗಿ ಸುಭದ್ರವಾದ ಹೊಸ ಬದುಕನ್ನು ರೂಪಿಸಿಕೊಳ್ಳುವಲ್ಲಿ ತುಳುವ ಸಮಾಜದ ಮಹಿಳೆಯರಿಗೆ ಮಾದರಿಯಾಗಿ ನಿಂತವಳು – ಮೌಖಿಕ ಮಹಾಕಾವ್ಯದ ಈ ಸಾಂಸ್ಕೃತಿಕ ವೀರೆ ತುಳುನಾಡಿನ 'ಸಂಘರ್ಷದ ಸಿರಿ'.

ತುಳುವ ಸ್ತ್ರೀ ಸಮುದಾಯಕ್ಕೆ ಹೊಸ ಮೌಲ್ಯವನ್ನು ಕಟ್ಟಿಕೊಡುವ ಸಲುವಾಗಿಯೇ ಈ ಸಮಾಜಕ್ಕೆ ಸಿರಿ ಒಂದು ಮೌಲ್ಯವಾಗಿ ಕಾಣಿಸಿಕೊಳ್ಳುತ್ತಾಳೆ. ಪದ್ಮಪ್ರಿಯಳಿಗೆ ಎದುರಾದ ಇಕ್ಕಟ್ಟಿನ ಬದುಕು ಮತ್ತು ಆ ಬದುಕು ಅತ್ಯಂತ ದಾರುಣವಾಗಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಅಲಕ್ಷಿತ ಸ್ತ್ರೀ ಸಮುದಾಯಕ್ಕೆ ಎಂದೆಂದೂ 'ಮಾದರಿ'ಯಾಗಿ ನಿಲ್ಲಬಹುದಾದ ಸ್ವಾಭಿಮಾನಿ ಸಿರಿಯ ಪಾಡ್ದನ ಇಂದಿಗೂ ಪ್ರಸ್ತುತ.

ಯಡಿಯೂರಪ್ಪ ಹಾಗೂ ಶೋಭಾಕರಂದ್ಲಾಜೆ ನಡುವಿನ 'ಗುರು–ಶಿಷ್ಯೆ'ಯರ ಆಪ್ತ ಸ್ನೇಹ ಸಂಬಂಧವನ್ನು ವ್ಯಂಗ್ಯವಾಗಿ ರಂಜನೀಯ ಸುದ್ದಿಯಾಗಿ ಬಿಂಬಿಸಿ, ರಾಡಿ ಎಬ್ಬಿಸಿದ್ದರ ಬಗ್ಗೆ ಮಾತನಾಡುವ ಲೇಖಕಿ 'ಸ್ನೇಹಕ್ಕೆ ಬೇಕಿಲ್ಲ ಸಂಬಂಧಗಳ ಕವಚ' ಲೇಖನದಲ್ಲಿ ಮಹಿಳಾ ಸಂಕುಲದ ಏಕೈಕ ಪ್ರತಿನಿಧಿಯಾಗಿ ಸಂಪುಟದಲ್ಲಿರುವ ಈ ಸಚಿವೆಯ ಕಾರ್ಯ ಸಾಮರ್ಥ್ಯವನ್ನು ಗುರುತಿಸಬೇಕೆ ಹೊರತು ಆಕೆಯ ವೈಯಕ್ತಿಕ ಭಾವಲೋಕದ ಬಗ್ಗೆ ಯಾವುದೇ ಆಸಕ್ತಿ ತೋರದೆ ರಾಜಕೀಯ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಆಕೆಗೆ ಕಾರ್ಯನಿರ್ವಹಿಸಲು ಬೇಕಾದಂತಹ 'ವಾತಾವರಣ'ವನ್ನು ನಿರ್ಮಿಸಿಕೊಡುವುದು ಈ ನಾಡಿನ ಪ್ರತಿಯೊಬ್ಬ ಪುರುಷ ರಾಜಕಾರಣಿ ಮತ್ತು ಮಾಧ್ಯಮದವರ ಜವಾಬ್ದಾರಿಯೂ ಹೌದು. ನಾಡಿನ ಸ್ತ್ರೀ ಸಂಕುಲ ಹೆಣ್ಣೊಬ್ಬಳ ಪರವಾಗಿ ಇವರೆಲ್ಲರಿಂದ ಈ ಕರ್ತವ್ಯವನ್ನು ಮತ್ತು ಭಾವವನ್ನು ಬಯಸುತ್ತದೆ.

ಹೆಣ್ಣಿನ ಮೇಲೆ ಗಂಡಿನ ಲೈಂಗಿಕ ಕಿರುಕುಳ ಸೂರ್ಯ ಉದಯಿಸುವಷ್ಟೆ ಸರಾಗವಾಗಿ ನಡೆದುಕೊಂಡು ಬಂದಿದೆ. ಆದರೆ 'ಲೈಂಗಿಕ ದೌರ್ಜನ್ಯ'ವೆಂಬ ಪರಿಕಲ್ಪನೆಯಡಿ ದಾಖಲಾಗತೊಡಗಿದ್ದು ಮಾತ್ರ ಇತ್ತೀಚಿನ ದಶಕಗಳಲ್ಲಷ್ಟೆ. ಇಂದು ಗಂಡು ಹೆಣ್ಣಿನ ಮೇಲೆ ದೈಹಿಕವಾಗಿ ನಡೆಸುವ ಲೈಂಗಿಕ ದೌರ್ಜನ್ಯವು ಮಾತ್ರ ದೌರ್ಜನ್ಯವಾಗಿ ಉಳಿದಿಲ್ಲ : ಸಂಜ್ಞಾ ಭಾಷೆ ಹಾಗೂ ಆಂಗಿಕ ಭಾಷೆಯ ಮೂಲಕ ಲೈಂಗಿಕ ಭಾವನೆ ಕಾಮನೆಗಳನ್ನು ಹೆಣ್ಣತ್ತ ಪ್ರಯೋಗ ಮಾಡುವುದು ಕೂಡ 'ಲೈಂಗಿಕ ದೌರ್ಜನ್ಯ'ವೆಂದು ಪರಿಗಣಿಸಲ್ಪಟ್ಟಿದೆ ಎಂಬುದನ್ನು ಯಾವುದೇ ಹಿಂಜರಿಕೆಯಿಲ್ಲದೆ ಕೆಲವು ಘಟನೆಗಳ ಸ್ಪಷ್ಟತೆಯೊಂದಿಗೆ ವಿವರಿಸುವ ನಾಗವೇಣಿ 'ಪ್ರತಿಬಿಂಬ'ಕುಂಟೇ ಮನಕವಚದ ಹಂಗು, ಕಿಚ್ಚು ಹಚ್ಚದಿರಿ ಎಳೆ ಹರಿಣಿಗೆ ಇಂತಹ ಕೆಲವು ಲೇಖನಗಳಲ್ಲಿ ಹೆಣ್ಣಿನ ಮಾನಅಪಮಾನಗಳ ಪ್ರಶ್ನೆಗಳನ್ನು ತುಂಬಾ ವಿವೇಚನಾ ಪೂರ್ವಕವಾಗಿ ಓದುಗರ ಮುಂದಿಡುತ್ತಾರೆ. ಗಂಡಿನ ಇಂಥ ಅವಮಾನಗಳು ಇಡೀ ಸ್ತ್ರೀ ಕುಲಕ್ಕೆ ಮಾಡುವ ಅವಮಾನವಾಗಿದೆ.

ಈ ಸಮಾಜದ ಲಿಂಗ ಭೇಧ ನೀತಿಯಡಿ ತಮ್ಮ ಉಳಿವಿಗಾಗಿ ಹೋರಾಟ ನಡೆಸುತ್ತಿರುವ ಹೆಣ್ಣು ಮಕ್ಕಳಿಗೆ ಈ ಪ್ರಕೃತಿಯೇ ನೀಡುವ 'ರಂಬೆ – ಹಣ್ಣಿನ' ಕಾಳಜಿಯ ಪಾಠವನ್ನು ಅಮ್ಮ ಹೇಳಿಕೊಟ್ಟ 'ಮೀನು – ಮುಳ್ಳಿನ ಮೀಮಾಂಸೆ' ಲೇಖನದೊಂದಿಗೆ ಬದುಕಿನ ನೆಮ್ಮದಿಗೆ ಎದುರಾಗುವ ಕಣೆ ಮುಳ್ಳುಗಳ ಬಗ್ಗೆ ಅದರಿಂದ ಅತಿಯಾದ ನೋವುಣ್ಣುವ ಮುಗ್ಧ ಮನಸ್ಸಿನ ಎಳೆ ಹರಿಣಗಳ ಬಗ್ಗೆ ಮಾತಾಡುತ್ತ ಬಾಲ್ಯದಿಂದಲೂ ಭಾಷೆಯಿಂದ ಭಾಷೆಗೆ ತಮ್ಮನ್ನು ತಾವು ಭಾಷಾಂತರಿಸಿಕೊಂಡು ಬಂದ ಲೇಖಕಿ ಈ ಪುರುಷ ಪ್ರಧಾನ ಸಮಾಜದ ಪುರುಷ ಜನ್ಯ ಭಾಷೆಯನ್ನು ಕಲಿಯುವುದು ಯಾತಾನಮಯ ಎನ್ನುತ್ತಾರೆ.

ಯಾಕೆ 'ಹೆಣ್ಣಿನ ಭಾಷೆ'ಯನ್ನು 'ಅಪ್ಪನ ಭಾಷೆ'ಗೆ ಭಾಷಾಂತರಿಸಿಕೊಂಡೇ ಬದುಕು ನಡೆಸಬೇಕು ಎನ್ನುವಂತ ಪ್ರಶ್ನೆಗಳನ್ನು ಎತ್ತುತ್ತಾರೆ.

ಈ ಸಮಾಜದಲ್ಲಿ ಹೆಣ್ಣಿಗೊಂದು ಭಾಷೆ, ಗಂಡಿಗೊಂದು ಭಾಷೆ ಇದೆ. ಭಾಷೆಯಲ್ಲಿ ಹೆಣ್ಣು ಮತ್ತು ಗಂಡುಗಳೆಂಬ ಎರಡು ನೆಲೆಗಳಿವೆ. ಹಾಗೆಯೇ ಈ ಪುರುಷ ಕೇಂದ್ರಿತ ಸಮಾಜ ವ್ಯವಸ್ಥೆಯಲ್ಲಿ ಇರುವ ಲಿಂಗತಾರತಮ್ಯದ ಪ್ರಭಾವ ಭಾಷೆಯಲ್ಲೂ ಇದೆ. ಹೆಣ್ಣು ಈ ಸಮಾಜದ ನೈತಿಕ ಚೌಕಟ್ಟಿಗೆ ತನ್ನನ್ನು ಬಿಗಿದುಕೊಂಡು ತನ್ನ ಭಾಷೆಯ ಬಳಕೆಗೆ ತಾನೇ ನಿರ್ಬಂಧ ಹಾಕಿಕೊಳ್ಳುತ್ತ ಸಮಾಜದ ಭಾಷಾ ತಾರತಮ್ಯದ ನೆಲೆಯನ್ನು ಮತ್ತಷ್ಟು ಬಲಗೊಳಿಸಿದ್ದಾಳೆ. ಹೆಣ್ಣಿನ ಈ 'ಭಾಷಾ ಮತಿಯನ್ನು' ಅರಿತೇ ಪುರುಷ ನಿರ್ದೇಶಿತವಾದಂತಹ ಭಾಷಿಕ ರಚನೆಯನ್ನು ಇಂದಿನ ಪುರುಷರು ಯಾವುದೇ ಎಗ್ಗಿಲ್ಲದೆ ಸ್ತ್ರೀಯರ ಮಾನಭಂಜಕವಾಗಿಯೇ ಬಳಸುತ್ತಿದ್ದಾರೆ ಎಂಬುದನ್ನು ಜನಪ್ರತಿನಿಧಿಗಳ ನಿದರ್ಶನದೊಂದಿಗೆ ವಿಚಾರ ಮಾಡಿದ್ದನ್ನು ಇಲ್ಲಿ ಗಮನಿಸಬಹುದಾಗಿದೆ.

ಹಿಂದೂತ್ವವೆಂಬ ತಾವರೆಯಂಚಿನ ಅಡಿಯಲ್ಲಿ ಕೊಳೆಯುತ್ತಿರುವ ಅಸ್ಪೃಶ್ಯತೆಯೆಂಬ ಪಾಚಿಯನ್ನು ಕನಿಷ್ಟ ತಮ್ಮ ವೈಯಕ್ತಿಕ ನೆಲೆಯಲ್ಲಿ ಕಿತ್ತೆಸೆಯಲು ಸಾಧ್ಯವಾಗದ ಮಠಾಧೀಶರ ಕೆಲಸ ಶೂದ್ರ ಜಾತಿಯ ಮೋನಪ್ಪ ಬ್ರಾಹ್ಮಣನಾಗಲು ಹೊರಟ ಗಾದೆಗೆ ಹೋಲಿಸುತ್ತಾರೆ. ಕಾರಣ ಕೃಷ್ಣ ಮಠದ ಚೌಕಿಮನೆಯಲ್ಲಿ ತಮ್ಮದೇ ಪಂಕ್ತಿಯಲ್ಲಿ ಅಥವಾ ಎದುರು ಪಂಕ್ತಿಯಲ್ಲಿ ನಾಲ್ಕೇ ನಾಲ್ಕು ಮಂದಿ ಶೂದ್ರ-ದಲಿತ ಮಕ್ಕಳನ್ನು ಕೂರಿಸಿಕೊಂಡು ಊಟ ಮಾಡಲಾಗದ ಮಠಾಧೀಶರು ಧರ್ಮದ ಹೆಸರಿನಲ್ಲಿ ಸಾಮಾಜಿಕ ಕಾಳಜಿ, ಮಾನವೀಯತೆ ಅಂತ ಮಾತಾನಾಡುವುದರಲ್ಲಿ ಯಾವ ಅರ್ಥವು ಇಲ್ಲ. ಕಮಲ ಪಾಳೆಯದ್ದು ಮಾತ್ರವಲ್ಲ ಎಲ್ಲಾ ರಾಜಕೀಯ ದೊಂಬರಾಟಗಳು ಎಲ್ಲರಿಗೂ ತಿಳಿದ ವಿಚಾರವೆ. ಆದರೂ ಇಂಥಲ್ಲಿ ಈ ಮಠಾಧೀಶರೇಕೆ ಮೂಗು ತೂರಿಸುತ್ತಾರೆ ಮತ್ತು ಅದನ್ನು ಪ್ರಸಾದದ ರೂಪದಲ್ಲಿ ಎಲ್ಲರ ಮೇಲೆರೆಚುತ್ತಾರೆಯೋ ತಿಳಿಯುವುದಿಲ್ಲ. ಧರ್ಮಪಾಲಕರೆನಿಸಿಕೊಳ್ಳುವ ಇಂಥವರು ಧರ್ಮವನ್ನು ರಕ್ಷಿಸಿ ಬೆಳೆಸದಿದ್ದರೂ ಪರವಾಗಿಲ್ಲ ಹಾಳು ಮಾಡದಿದ್ದರೆ ಸಾಕು.

ಬಳ್ಳಾರಿ ಜಿಲ್ಲೆಯ ಗಣಿಧೂಳಿನ ಹಣದಿಂದ ಕೊಬ್ಬಿದ ಗಣಿಧಣಿಗಳು ಈ ಭಾರಿ ಚುನಾವಣಾ ಕಣಕ್ಕಿಳಿದು ಚುನಾವಣಾ ಪ್ರಚಾರ ನಡೆಸುವ ಅಬ್ಬರದ ಸಂದರ್ಭದಲ್ಲಿ ತಮ್ಮ ಮತದಾರರನ್ನು ಖರೀದಿಸುವ ಪೈಪೋಟಿಯಲ್ಲಿ ಕೂಡಿಟ್ಟ ಹಣವನ್ನು ಧೂಳಿನಂತೆ ಊದಿ ಬಿಡುತ್ತಿದ್ದಂತೆ... ಇಡೀ ಜಿಲ್ಲೆಯ ಸಾಮಾಜಿಕ ವ್ಯವಸ್ಥೆ, ಕಾನೂನು ವ್ಯವಸ್ಥೆ, ಪರಿಸರ ವ್ಯವಸ್ಥೆ, ಬದುಕಿನ ಶೈಲಿ, ಮನುಷ್ಯ ಸಂಬಂಧ, ಬದುಕಿನ ಮೌಲ್ಯಗಳು... ಹೀಗೆ ಎಲ್ಲವೂ ಕಾಂಚಾಣದ ರುದ್ರ ನರ್ತನಕ್ಕೆ ಸನ್ನಿ ಹೊಡೆದಂತಾಗಿ ಏಕದಂ ಉಲ್ಟಾ ಹೊಡೆದವು! ಎಂಬುದನ್ನು ಧೂಳಿನಿಂದ ಧೂಳಿಗೆ ಲೇಖನ ವಿವರಿಸುತ್ತದೆ.

ನಾಗವೇಣಿಯವರು ತಮ್ಮ ಪಿಎಚ್.ಡಿ. ಅಧ್ಯಯನಕ್ಕೆ ಸಂಬಂಧಿಸಿ ದಂತೆ ಕರ್ನಾಟಕದ ಕೇಂದ್ರ ಕಾರಾಗೃಹಕ್ಕೆ ಆಗಾಗ ಹೋಗಿ ಬರುತ್ತಿದ್ದಾಗ ಅವರೊಳಗಿನ 'ಬರಹಗಾರ್ತಿಗಾಗಿ' ದಾಖಲಿಸಿಕೊಂಡ ಕೆಲವು ಸತ್ಯಗಳನ್ನ, ವ್ಯಥೆಗಳನ್ನ ಬಲ್ಲಿರೆ ನಮ್ಮ ಬಂಧಿಖಾನೆಗಳನ್ನ?, ನಮಗೂ ಬೆಳಕಿರಲಿ ಲೇಖನಗಳಲ್ಲಿ ಹೇಳಿಕೊಂಡಿದ್ದಾರೆ. ಕಾರಾಗೃಹದಲ್ಲಿ ಕಾಸಿಲ್ಲದ ಅಲಕ್ಷಿತ ಅಪರಾಧಿಗಳ ಮೇಲೆ ನಿಯಮಾನುಸಾರವಾಗಿ ಹೇರಿಕೆಯಾಗುವ ದಮನಕಾರಿ ಶಿಸ್ತಿನ ಹೇರಿಕೆಗಳು ಕಾಸುಳ್ಳವರಿಗೆ ಶಿಸ್ತು ಹೇರಿಕೆಯಾಗದೆ ಸಿಗುವ ವಿಶೇಷ ಸೌಲಭ್ಯಗಳು, ಅಸಮಾನತೆ, ಅಧಿಕಾರಿಗಳ ಕ್ವಾರ್ಟರ್ಸ್ ಮೆಟ್ಟಿಲೇರುವ ಮಾಂಸ, ಕಿರಾಣಿ ಸಾಮಾನು, ಹಾಲು, ತರಕಾರಿ ಇತ್ಯಾದಿ ಈ ಮಟ್ಟಿಗೆ ಕುಲಗೆಟ್ಟ ನಮ್ಮ ಕಾರಾಗೃಹಗಳಿಂದ ಕೈದಿಗಳು ದಾರಿತಪ್ಪಿದರೆ ಅದು ಅನಿರೀಕ್ಷಿತವೇನಲ್ಲ. ಕೈದಿಗಳ ಅಮಾನವೀಯ ಅವ್ಯವಸ್ಥಿತ, ಅಸಮಾನ ವ್ಯವಸ್ಥೆಗಳ ಚಿತ್ರಣಗಳನ್ನು ನೀಡುವ ಲೇಖಕಿ ನಮಗೂ ಬೆಳಕಿರಲಿ ಲೇಖನದಲ್ಲಿ ಮಹಿಳಾ ಕೈದಿಗಳ ಸ್ಥಿತಿಯನ್ನು ಚಿತ್ರಿಸುತ್ತಾರೆ.

ಮಹಾಕೋಟೆಯಂತಿರುವ ಬಂದಿಖಾನೆಗಳಲ್ಲಿ ಮಹಿಳಾ ಕೈದಿ ಗಳಿಗಾಗಿ ಮತ್ತೆ ಮೂರಾಳು ಎತ್ತರದ ಪುಟ್ಟ ಕೋಟೆಯೊಂದನ್ನು ಯಾಕೆ ಎಬ್ಬಿಸಬೇಕು? ಎಂದು ಪ್ರಶ್ನೆಯನ್ನು ಎತ್ತುತ್ತಲೆ ಬಂದಿಖಾನೆಯೊಳಗೆ ಧ್ವನಿ ಕಳೆದುಕೊಳ್ಳುವ ಕೈದಿಗಳು ಹಣ-ಅಧಿಕಾರ-ಪ್ರಭಾವ ಬೆಳೆಸಿ ಬಂಧಿಖಾನೆಯೊಳಗೆ ಧ್ವನಿ ಪಡೆದುಕೊಳ್ಳುವ ಮತ್ತು ಕೊಳ್ಳಬಹುದಾದ ಭ್ರಷ್ಟ ಆಚಾರ ಬಂಧಿಖಾನೆಯೊಳಗೆ ಇದ್ದೇ ಇದೆ. ಆದರೆ ಹೊಸ ಸಮಾಜದಲ್ಲೇ ಧ್ವನಿ ಕಳೆದುಕೊಂಡಿರುವ ಮಹಿಳೆಯರು ಆರೋಪಿ ಅಥವಾ ಅಪರಾಧಿಗಳಾಗಿ ಬಂಧಿಖಾನೆಗಳೊಳಗೆ ಬಂದೊಡಣೆ ಸಂಪೂರ್ಣವಾಗಿ ಅಲ್ಪಸಂಖ್ಯಾತರಾಗಿ ಎಲ್ಲಾ ರೀತಿಯಿಂದಲೂ 'ಧ್ವನಿ' ಕಳೆದುಕೊಂಡು ಬಾಯಿ ಇಲ್ಲದ ಮೂಕ ಹಸುಗಳಾಗಿ ಪರಿವರ್ತನೆ ಗೊಳ್ಳುವುದು ಮಾಮೂಲಿ. ಇಂತಹ ಪ್ರತಿಭಟನಾ ಶಕ್ತಿ ಇಂಗಿಸಿ ಕೊಂಡಿರುವ ಮಹಿಳಾ ಕೈದಿಗಳನ್ನು ಹೀಗೆ ಹಸುಗಳಂತೆ ಕೂಡಿ ಹಾಕಿ ಪುರುಷ ಕೈದಿಗಳಿಗಿಂತ ಭಿನ್ನವಾಗಿ ನಡೆಸಿಕೊಳ್ಳುವುದು ತೀರ ಜೀವ ವಿರೋಧಿ ಕ್ರಮ.

ಈ ಎಲ್ಲಾ ಲೇಖನಗಳಲ್ಲಿ ಸ್ತ್ರೀಯಾತ್ಮಕ ನೆಲೆಯೊಂದಿಗೆ ಬದುಕನ್ನು ಗ್ರಹಿಸುವ ಪ್ರಯತ್ನದೊಂದಿಗೆ ಸಾಮಾಜಿಕ, ರಾಜಕೀಯ, ಧಾರ್ಮಿಕತೆಯ ಆಯಾಮಗಳಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದನ್ನ ಕಾಣಬಹು ದಾಗಿದೆ. ತಾಯ್ತನ ಎನ್ನುವುದು ಹೆಣ್ಣಿಗೆ ಈ ಪ್ರಕೃತಿಯೇ ಕೊಟ್ಟ ಅಮೂಲ್ಯವಾದ ಕೊಡುಗೆ, ತನ್ನ ಎಂಥದ್ದೇ ಅಸಹಾಯಕ ಸ್ಥಿತಿ ಯಲ್ಲಿಯೂ ಹೆಣ್ತನ, ತಾಯ್ತನವನ್ನ ಕಾಪಿಟ್ಟುಕೊಳ್ಳಲು ಬಯಸುವ ತಾಯಿಯ ಹಂಬಲ ತುಡಿತಗಳು ಪದಗಳಿಗೆ ಸಿಲುಕುವಂತದ್ದಲ್ಲ. ಆದರೆ ಅಂತದೊಂದು ಪ್ರಯತ್ನ ಇವಳ...ತಾಯೆಂದರೆ ಸಾಕೆ?!, ಹೆಣ್ಣು ಮಾಯೆಯಲ್ಲ, ಅಪ್ಪ ಸಿಕ್ಕ, ಅಳು ನುಂಗಿತ್ತಾ... ಕಂದ!, ಕಿಚ್ಚು ಹಚ್ಚದಿರಿ ಎಳೆಹರಿಣಿಗೆ ಲೇಖನಗಳಲ್ಲಿ ಅದ್ಭುತವಾಗಿ ಮೂಡಿ ಬಂದಿದೆ.

ಸಣ್ಣ ಸಣ್ಣ ವಿಷಯವನ್ನು ಎಳೆ ಎಳೆಯಾಗಿ ಬಿಡಿಸುವ ಕೌಶಲ್ಯ ವಿರುವ ನಾಗವೇಣಿ ಮೀಯಿಸೋ ಹಬ್ಬ, ಅಡಿಕೆಗೆ ಹೋದ ಮಾನ, ತುಂಬಿ ಬಂದ ಜೀವಧ್ವನಿ, ಸಾಣೆ ಹಳ್ಳಿಯ ದಾರಿ, ಗೋಡೆ, ದೋಸೆ ಕಾವಲಿ ಮೀಮಾಂಸೆ ಎಂಥ ಲೇಖನಗಳಲ್ಲಿ ನೀಡಿದ ಘನತೆ ಅನ್ಯವಾದದ್ದು.

ಲೇಖಕಿಯು ತಮ್ಮ ಅನುಭವಕ್ಕೆ ಬಂದ ಒಂದೊಂದು ವಿಚಾರ ಗಳನ್ನು ತುಂಬ ಪ್ರೀತಿಯಿಂದ, ಕಾಳಜಿಯಿಂದ ಅಷ್ಟೇ ಎಚ್ಚರಿಕೆಯಿಂದ ತಮ್ಮ ಬೊಗಸೆಯಲ್ಲಿಟ್ಟುಕೊಂಡು ವಿಚಾರ ಮಾಡಿದಂತಿದೆ. ಕನ್ನಡದ ಇತರ ಕಥೆಗಾರರಿಗಿಂತ ನಾಗವೇಣಿ ಅವರ ಬರವಣಿಗೆಯ ಶೈಲಿ ಭಿನ್ನವಾಗಿದೆ. ಅವರ ಬರವಣಿಗೆಯ ಶೈಲಿಗಿರುವ ಇಂಥ ಆಕರ್ಷಣೆ ಯಿಂದಾಗಿ ಇಲ್ಲಿನ ಬರಹಗಳು ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ. ನಾಗವೇಣಿಯವರು ತಮ್ಮ ಎಲ್ಲಾ ಕೃತಿಗಳ ಮೂಲಕ ತುಳುನಾಡಿನ ಸಮಾಜದ ಸಾಂಸ್ಕೃತಿಕ ವಿವರಗಳನ್ನ, ಬಾಲ್ಯದ ನೆನಪುಗಳನ್ನು ಮೊಗೆದುಕೊಟ್ಟ ಇವರು ಈಗ ಜೀವಂತಿಕೆಯುಳ್ಳ ಹೊಸ ಆಖ್ಯಾನವನ್ನು ನಮ್ಮ ಮುಂದಿರಿಸಿದ್ದಾರೆ. ಅದೇ ಈ ಸಮಾಜದ 'ಸೂರ್ಯಂದಿರ' ಅಂತರಂಗವನ್ನು ಮೀಟಬೇಕಾದ 'ವಿಚಾರವೀಳ್ಯ'.

❑



ಮೇರಿ ಕ್ಯೂರಿಯದು ಸ್ತ್ರೀವಾದಿ ಬದುಕಿನ ದಾರಿ!

■ ಸರೋಜಾ ಸಂತಿ

'ಮಾನವ' ಮತ್ತು ಸಮಾಜದ ಬಗೆಗೆ ಅಧ್ಯಯನ ಮಾಡುವುದರ ಮೂಲಕ ಚಿಂತನೆ ಕಟ್ಟುತ್ತೇವೆ. ಅವನ್ನು ಬರವಣಿಗೆಯ ಮೂಲಕ ದಾಖಲಿಸುವ ವಾಡಿಕೆ ಒಂದೆಡೆ, ಇನ್ನೊಂದಡೆ ಅವರ ಬದುಕಿನ ದಾರಿ ಚಿಂತನೆಗಳನ್ನು ಮಂಡಿಸುತ್ತವೆ. ಈ ಹಿನ್ನೆಲೆಯಲ್ಲಿ 'Feminism is a way of life' ಎನ್ನುವುದು. ಇದಕ್ಕೆ ಪ್ರತೀಕವೆಂದರೆ ಮೇರಿಯದು. ಅಂದರೆ ಸ್ತ್ರೀವಾದಿ ಸಿದ್ಧಾಂತ ಹೇಳುವ ಹಾಗೇ 'ವೈಯಕ್ತಿಕವೇ ರಾಜಕೀಯ' ಇದನ್ನು ವೈಯಕ್ತಿಕವಾಗಿ ಅರ್ಥೈಸದೆ ಮಹಿಳಾ ಸಮುದಾಯದ ಹಿನ್ನೆಲೆಯಲ್ಲಿ ಅರ್ಥೈಸಿ, ವಿಸ್ತರಿಸಬೇಕು. ಪೋಲೆಂಡಿನ ಮಹಿಳೆಯರಿಗೆ ವಿಜ್ಞಾನ ನಿಷಿದ್ಧ ಎನ್ನುವ ಕಾಲದಲ್ಲಿಯೇ ವಿಜ್ಞಾನ ಕ್ಷೇತ್ರದಲ್ಲಿ ಅಸಾಧಾರಣವಾದದ್ದನ್ನು ಸಾಧಿಸಿ ತೋರಿಸಿ ಮಹಿಳಾ ಸಮುದಾಯಕ್ಕೆ ಮೇರಿ ಕ್ಯೂರಿ ಮಾದರಿಯಾದರು. ವಿಜ್ಞಾನದಲ್ಲಿಯ ಅಪಾರ ಆಸಕ್ತಿಯಿಂದಾಗಿ ದೇಶ ಬಿಟ್ಟು ಕಷ್ಟಗಳನ್ನು ಎದುರಿಸಿ ಕೋಶ ಓದಿ, ವಿಜ್ಞಾನ ಕ್ಷೇತ್ರವೇ ಬೆರಗಾಗುವಂತೆ ಸಾಧಿಸಿ ತೋರಿರುವರು.

ಪರಾಡಳಿತದ ಪದತಲದಲ್ಲಿ ತುಳಿದ ಸಣ್ಣದೇಶ ಪೋಲೆಂಡಿನ ವ್ಲಾಡಿಸ್ಲಾವ್ ಸ್ಕ್ಲೋಡೋವ್‌ಸ್ಕಿ ಹಾಗೂ ಬ್ರೊನಿಸ್ಲಾವಾ ಸ್ಕ್ಲೋಡೋವಸ್ಕಿ ದಂಪತಿಗಳಿಗೆ ಐದನೆಯ ಮಗುವಾಗಿ ಮೇರಿ ಜನಿಸಿದಳು. ಕಡುಬಡತನದಲ್ಲಿ ದುಡಿದು ಕಲಿತು, ಪ್ರತಿಕೂಲ ಪರಿಸ್ಥಿತಿಗಳನ್ನು ಮೀರಿ ಜಗತ್ ಪ್ರಸಿದ್ಧ ವಿಜ್ಞಾನಿಯಾದಳು. ಮೇರಿಯ ಜೀವನ ಸಾಧನೆ ಮಹಿಳಾ ಸಮುದಾಯಕ್ಕೆ ವಿಭಿನ್ನ ಮಾದರಿ. ಮಹಿಳೆ ಎಂದರೆ ದ್ವಿತೀಯ ದರ್ಜೆಯ ಪ್ರಜೆ ಎಂದು ಪರಿಗಣಿಸಿರುವ ಪುರುಷ ಪ್ರಧಾನ ಸಮಾಜದಲ್ಲಿ ಒಬ್ಬ ಮಹಿಳೆಯಾಗಿ ಪುರುಷರಿಗಿಂತಲೂ ಹೆಚ್ಚಿನ ಸಾಧನೆ ಮಾಡಿದ್ದಾಳೆ. ಇವರ ಸಾಧನೆ ಕೇವಲ ಮಹಿಳಾ ಸಮುದಾಯಕ್ಕೆ ಮಾತ್ರ ಮಾದರಿ ಯಾಗಿಲ್ಲ. ಸಮಸ್ತ ಮಾನವರಿಗೂ ಇವರ ಜೀವನವೇ ಪ್ರೇರಣೆಯಾಗಿದೆ. ಪೋಲೆಂಡಿನ ಜನರಿಗೆ ವಿಜ್ಞಾನ ನಿಷೇಧವಿತ್ತು. ವಿಜ್ಞಾನ ಹೆಣ್ಣು ಮಕ್ಕಳು ತಲೆ ಕೆಡಿಸಿಕೊಳ್ಳಬಾರದ ವಿಷಯ ಎಂಬ ಪೂರ್ವಾಗ್ರಹವಿತ್ತು. ಮೇರಿಯ ಅಗಮ್ಯ ಕುತೂಹಲದ ಮನಸ್ಸು ವಿಜ್ಞಾನಕ್ಕೆ ತುಡಿಯಿತು. ಎಲ್ಲವನ್ನೂ ತಿಳಿದುಕೊಳ್ಳುವ ಕುತೂಹಲ ಮೇರಿಗಿತ್ತು. ಪೋಲೆಂಡಿನ ಜನರನ್ನು ಕಟ್ಟಿ ಹಿಡಿದ ಕಾಯಿದೆಗಳಿಂದ ಬಿಡುಗಡೆ ಮಾಡುವ, ಹೆಣ್ಣು ಮಕ್ಕಳನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಹಿಡಿದಿಟ್ಟ ಕುರುಡು ಕಾನೂನುಗಳಿಂದ ಮುಕ್ತವಾಗುವ ಬಯಕೆ ಮೇರಿಯ ಕೌಟುಂಬಕ್ಕೆ. ತ್ಸಾರ್‌ನ ಅಡಿಯಲ್ಲಿದ್ದ ಪೋಲೆಂಡಿನಲ್ಲಿ ಮಹಿಳೆಯರಿಗೆ ಉನ್ನತ ಶಿಕ್ಷಣ ನಿಷೇಧವಿತ್ತು. ಮೇಧಾವಿ ಹೆಣ್ಣು ಮಕ್ಕಳು ವಿದೇಶಿ ವಿಶ್ವವಿದ್ಯಾನಿಲಯಕ್ಕೆ ತೆರಳಬೇಕಿತ್ತು. ಪೋಲೆಂಡಿನ ವಿಶ್ವವಿದ್ಯಾಲಯಗಳು ಮಹಿಳೆಯರಿಗೆ ಪ್ರವೇಶ ನಿರಾಕರಿಸಿದ್ದವು. ಉನ್ನತ ವ್ಯಾಸಂಗದ ಕನಸು ಕಂಡ ಮೇರಿಗೆ ಬಡತನದಿಂದಾಗಿ ಕಳೆದುಕೊಳ್ಳುವ ಆತಂಕ ಇರಲಿಲ್ಲ. ಆಸಕ್ತಿ ಹಾಗೂ ಶ್ರಮದಿಂದಾಗಿ ದೇಶಕ್ಕೆ ಕೊಡುಗೆ ಕೊಡುವ ಭರವಸೆ ಆಕೆಗಿತ್ತು. ದುಡಿದು ಬಾಳುವ, ಕಷ್ಟ ಎದುರಿಸುವ ಗತ್ತು, ಸಮಸ್ಯೆಯನ್ನು ನಿವಾರಿಸಿಕೊಳ್ಳುವ ಎದೆಗಾರಿಕೆ ಅಚಲವಾಗಿತ್ತು. ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಹೇಳುವ ಹಾಗೇ 'Low aim is crime' ಎನ್ನುವ ತರಹ ಮೇರಿಯ ಕನಸು ಸಣ್ಣದಾಗಿರಲಿಲ್ಲ. ಹೆಣ್ಣು ಮಕ್ಕಳು ಹೆಜ್ಜೆ ಇಡದ ಕ್ಷೇತ್ರದಲ್ಲಿಯೇ ಮೇರಿ ಛಾಪು ಮೂಡಿಸಿದಳು. ಮೇರಿಗೆ ಮೇರಿಯೇ ಸಾಟಿ. ಹೋಲಿಕೆಗೆ ಸಿಗದೇ ಸಾಧನೆಯ ಪಥದಲ್ಲಿ ಸಾಗಿದಳು.

ಬದುಕಿನ ಅನಿವಾರ್ಯದಲ್ಲಿ ದುಡಿಯುತ್ತಿದ್ದಂತೆಯೇ ಮೇರಿಯ ಎದೆಯಲ್ಲಿಯೂ ಪ್ರತಿ ಪೋಲನ ಹೃದಯದ ಮಿಡಿತವಿತ್ತು, ಸ್ವಾತಂತ್ರ್ಯದ ಕನಸಿತ್ತು. ಕೆಲವರು ದಂಗೆ ಎದ್ದು ಬದುಕನ್ನು ಪಣಕಿಟ್ಟಿದರೆ, ಮತ್ತೆ ಕೆಲವರು ಧರ್ಮದ ಪವಾಡಗಳನ್ನು ನಿರೀಕ್ಷಿಸುತ್ತಿದ್ದರು. ಒಂದಿಷ್ಟು ಮಂದಿ ಆತಂಕವಾದಕ್ಕಿಳಿದಿದ್ದರು. ಆದರೆ ಆ ಸಮಯದಲ್ಲೇ ವಿಚಾರವಂತರ ಬಲವಾದ ಸಂಘಟನೆಯೂ ಆರಂಭವಾಗಿತ್ತು. ಸ್ವಾತಂತ್ರ್ಯ ತತ್‌ಕ್ಷಣ ಕೈಗೆಟುಕುವ ಕನಸಾಗಿರಲಿಲ್ಲ. ಈ ವಿದ್ಯಾವಂತ ವರ್ಗ, ತಮ್ಮ ರಾಷ್ಟ್ರದ ಬೌದ್ಧಿಕ ಸಂಪತ್ತನ್ನು ಹೆಚ್ಚಿಸುವ, ಪ್ರತಿಯೊಬ್ಬನ ಎದೆಯಲ್ಲಿ ಜ್ಞಾನದ ಬೆಳಕನ್ನು ಹಚ್ಚಿಡುವ ಆಶಾವಾದಿಗಳು. ಮೇರಿ ಈ ಆಶಾವಾದಿಗಳ ಗುಂಪಿಗೆ ಸೇರಿದವಳಾಗಿದ್ದಳು. ತನ್ನ ಬದುಕಿನ ದುಡಿಮೆ ಯನ್ನು ತಾನೇ ಮಾಡುತ್ತಿದ್ದಳು. ತನ್ನ ದುಡಿಮೆಯ ಅನಿವಾರ್ಯದ ನಡುವೆಯೂ ಮೇರಿ ಬಡ ಹೆಂಗಸರಿಗೆ ಪಾಠ ಹೇಳಿಕೊಡುತ್ತಿದ್ದಳು. ಇದರ ಮೂಲಕ ಮಹಿಳೆಯರು ಶಿಕ್ಷಣ ಪಡೆಯಬೇಕು ಎಂಬ ನಿಲುವು ಮೇರಿಯದಾಗಿತ್ತು. ವಿಜ್ಞಾನವನ್ನು ಗುಪ್ತವಾಗಿ ರಹಸ್ಯ ತರಗತಿಗಳಲ್ಲಿ ಹೇಳಿಕೊಡತೊಡಗಿದಳು. ಪಾಠ, ಪ್ರವಚನ, ಹಸ್ತಪ್ರತಿಗಳು, ತಮ್ಮದೇ

ಬಗೆಯಲ್ಲಿ ಜಾಗೃತಿಯ ಪ್ರಯತ್ನಗಳಾದವು. ಅರಿವು, ಜಾಗೃತಿ ನೀಡುವುದು ಚಳುವಳಿಯ ಒಂದು ಭಾಗವಾದವು.

ಮೇರಿ ತನ್ನ ಆಸಕ್ತಿಗೆ ಮಾತ್ರ ಸೀಮಿತವಾಗದೇ ಅಕ್ಕನ ಆಶೆಗೆ ನೀರೆರೆದು ಮರವಾಗಿ ಬೆಳೆಸಿದಳು. ಪ್ಯಾರಿಸಗೆ ಹೋಗಿ ವೈದ್ಯಶಾಸ್ತ್ರ ಓದುವ ಆಸೆಯನ್ನು ಹೊಂದಿದ ಮೇರಿಯ ಅಕ್ಕನಾದ ಬ್ರೋನ್ಯಾಳ ಕನಸು ಕರಗುವುದನ್ನು ಮೇರಿ ನೋಡಿಯೂ, ಸುಮ್ಮನಾಗಲಿಲ್ಲ. ಆ ಸಮಯದಲ್ಲಿ ಮೇರಿ ನಾನು ಕೆಲಸ ಮಾಡುವೆ ಕನಿಷ್ಠ ದುಡಿಮೆಯ ಹಣವನ್ನು ನೀಡಬಹುದು. ನೀನು ಪ್ಯಾರಿಸ್‌ಗೆ ಹೋಗಿ ವೈದ್ಯರಂಗಕ್ಕೆ ದಾಖಲಾಗು, ನಿನಗೆ ಹಣ ಕಳುಹಿಸುವ ಜವಾಬ್ದಾರಿ ನನಗಿರಲಿ. ನನಗಿನ್ನೂ ಸಮಯವಿದೆ ಎಂದು ಹೇಳಿ ದುಡಿಯಲು ಹೊರಟಳು. ದುಡಿಯಲು ದೂರದ ಹಳ್ಳಿಗೆ, ಪಾಠ ಹೇಳಿಕೊಡುವ ಕೆಲಸ ಮೇರಿಯದು. ಮೇರಿ ದುಡಿದಳು, ಬೇಸಿಗೆಯ ರಜೆಯನ್ನೂ ತೆಗೆದುಕೊಳ್ಳದೆ. ಕೂಡಿದ ಹಣದ ಹನಿ ಹನಿಯೂ ಅವಳಿಗೆ ಬೇಕಿತ್ತು. ವಿಶ್ರಮಿಸುವುದು ಬೇಕಾಗಿರಲಿಲ್ಲ. ಕಲಿಸುತ್ತಿದ್ದಂತೆಯೇ ಅವಳೊಳಗಿನ ಕಲಿಯುವ ಕನಸೂ ಬಿಡದೆ ಕಾಡುತ್ತಿದ್ದವು. ಪಕ್ಕದ ಸಕ್ಕರೆ ಕಾರ್ಖಾನೆಯ ಗ್ರಂಥಾಲಯದಲ್ಲಿ ದೊರೆತ ಭೌತಶಾಸ್ತ್ರ, ಸಮಾಜಶಾಸ್ತ್ರಗಳ ಪುಸ್ತಕಗಳನ್ನೆಲ್ಲ ತಂದು ಓದಿದಳು. ತಂದೆಯೊಡನೆ ಪತ್ರ ಮುಖೇನ ತನ್ನ ಗಣಿತ ಜ್ಞಾನವನ್ನು ಹಿಗ್ಗಿಸಿಕೊಂಡಳು. ಕಾಣದ ಭವಿಷ್ಯಕ್ಕೆ ಸಾಧ್ಯವಿದ್ದಷ್ಟೂ ತಯಾರಿ ಮಾಡಿಕೊಳ್ಳುತ್ತಿದ್ದಳು. ಉನ್ನತ ಶಿಕ್ಷಣ ಪಡೆಯಬೇಕೆಂಬುದು ಮೇರಿಯ ದೃಢ ನಿರ್ಧಾರವಾಗಿತ್ತು. ಅದನ್ನು ತಲುಪಲು ಮೇರಿ ಕಷ್ಟ ಪಡುತ್ತಿದ್ದಳು. ಸ್ತ್ರೀಯರು ಸಾಂಪ್ರದಾಯಿಕ ಪಾತ್ರಗಳಿಂದ ಹೊರಬರಬೇಕು ಎಂಬುದನ್ನು ಮೇರಿ ಜೀವನ ಸಾಧಿಸಿ ತೋರಿಸಿದೆ. ತಂದೆಗೆ ಶಿಕ್ಷಣದ ಸಲುವಾಗಿ ಭಾರವಾಗದೇ, ಶಿಕ್ಷಣ ಪಡೆಯಬೇಕು ಎಂಬ ಹಟ ಹಿಡಿಯದೇ ತನ್ನ ಶಿಕ್ಷಣಕ್ಕಾಗಿ ತಾನೇ ಕಷ್ಟ ಪಡತೊಡಗಿದಳು.

ಅಕ್ಕ ತಂಗಿಯರು ಜ್ಞಾನದ ದಾಹ, ಪರಸ್ಪರರ ಬದುಕ ನೇವರಿಸುವ ಹಾದಿಯಲ್ಲಿ ಸಾಗಿದ್ದರು. ಅಕ್ಕನ ಓದು ಮುಗಿದೊಡನೆ ತಂಗಿಯ ಓದು ಪ್ರಾರಂಭವಾಯಿತು. ಪ್ಯಾರಿಸ ಸ್ವತಂತ್ರ ನೆಲದ ಸ್ವಚ್ಛಂದ ಹವೆಯನ್ನು ಹೀರಿಕೊಂಡಳು. ಸೋರ್ಬನ್ನಿನ ವಿಶ್ವವಿದ್ಯಾನಿಲಯದಲ್ಲಿ ನವೆಂಬರ 3ರ 1891ರಂದು ವಿಜ್ಞಾನದ ತರಗತಿಗಳು ಪ್ರಾರಂಭವಾದವು. ವಿಜ್ಞಾನವನ್ನು ಹಿಗ್ಗಿನ ತಾಣವಾಗಿಸಿದ ತರಗತಿಗಳು. ವ್ಯವಸ್ಥಿತ ಪ್ರಯೋಗಶಾಲೆ, ರಾಶಿ ರಾಶಿ ಪುಸ್ತಕಗಳ ಗ್ರಂಥಾಲಯ ಮೇರಿಯ ಉತ್ಸಾಹ ಇಮ್ಮಡಿಯಾಯಿತು. ವರ್ಷ ವರ್ಷಗಳ ತಪಸ್ಸು ಫಲಿಸಿತ್ತು. ಮೇರಿಯ ಮುಂದೆ ವಿಜ್ಞಾನದ ಕದ ತೆಗೆದು ಒಳಸೆಳೆದು ಬ್ರಹ್ಮಾಂಡವನ್ನೇ ತೆರೆದಿಟ್ಟಿತು. ಕಳೆದುಕೊಂಡ ಹೃದಯವನ್ನೆಂದೋ ಮರು ಪಡೆದ ಮೇರಿ, ತನ್ನೆಲ್ಲ ಆಸಕ್ತಿ ಉತ್ಕಟತೆಯ ವಿಜ್ಞಾನವೊಂದಕ್ಕೆ ಹಚ್ಚಿ ಮುನ್ನಡೆದಳು. ಅದುಮಿಟ್ಟ ವರ್ಷಗಳ ಜ್ಞಾನದ ಹಸಿವು, ಹಿಗ್ಗಿ ಬಾಯ್ತೆರೆಯಿತು. ವಿಜ್ಞಾನವನ್ನೆಲ್ಲ ಒಮ್ಮೆಗೇ ಕುಡಿವ ಬಯಕೆ ಮೇರಿಯದು. ಗಣಿತ ಭೌತಶಾಸ್ತ್ರ ಎರಡರಲ್ಲೂ ಸ್ನಾತಕೋತ್ತರ ಪದವಿ ಪಡೆದಳು. ಅವಳ ಬದುಕಿಗೆ ರಂಗು ರಂಗಿನ ಬಣ್ಣಗಳಿರಲಿಲ್ಲ, ಬಡತನದ ಕಪ್ಪು ಬಿಳುಪಿನ ಸರಳತೆ ಇತ್ತು. ಸರಳತೆಯಲ್ಲಿಯೆ ಸಾಧನೆಯ ಹಾದಿ ಸಾಗಿತ್ತು. ಕಷ್ಟವಾದರೂ ಇಷ್ಟಪಟ್ಟಿದುದ್ದರ ಕಡೆಗೆ ಅವರ ನಡೆ ಸಾಗಿತ್ತು.

ಭೌತರಸಾಯನ ಶಾಸ್ತ್ರಗಳ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಪಿಯರ ತನ್ನ ದಿನಚರಿಯಲ್ಲಿ ಬರೆದಿದ್ದ "ಮೇಧಾವಿ ಮಹಿಳೆಯರು ಅತಿ ವಿರಳ. ಸಾಧನೆಯ ಹಾದಿಯಲ್ಲಿ ಮಹಿಳೆಯರು ದೊಡ್ಡ ತೊಡಕಾಗುತ್ತಾರೆ." ಮೇರಿ ಹಾಗೂ ಪಿಯರ್ ಕ್ಯೂರಿ ನಡುವೆ ಅಂತರವಿತ್ತು, ದೇಶ, ಭಾಷೆ, ಪರಿಸರ, ಸಂಸ್ಕೃತಿಗಳ ಅಂತರ. ಆದರೆ ಈ ಇಬ್ಬರ ಹಿನ್ನೆಲೆಯಲ್ಲಿ ಸಾಮ್ಯವೂ, ಸೌಮ್ಯತೆಯೂ ಇತ್ತು. ಮೇರಿಯ ಹಿನ್ನೆಲೆ ಪಿಯರಿಯ ಹಿನ್ನೆಲೆಯೇ ಆಗಿತ್ತು. ಉನ್ನತ ಆದರ್ಶಗಳ ಗೌರವಾನ್ವಿತ ಕುಟುಂಬ. ಅದೇ ಪ್ರೀತಿಯ ಸೆಳೆ, ಅದೇ ವಿಜ್ಞಾನದತ್ತಲ ಅಗಾಧ ಆಸಕ್ತಿ ಇತ್ತು. ಜುಲೈ 26, 1895, ಯಾವುದೇ ಅಂಧ ಶ್ರದ್ಧೆಯಲ್ಲಿ, ಮತಾಚರಣೆಯಲ್ಲಿ, ಸಂಪ್ರದಾಯಗಳಲ್ಲಿ ನಂಬಿಕೆ ಇರಿಸದ ಈ ಇಬ್ಬರು ವಿಜ್ಞಾನಿಗಳು ಬೆರಳಿಗೊಂದು ಉಂಗುರ ತೊಡಿಸದೆಯೇ ವಿವಾಹವಾದರು. ಜಾತಿ, ಮತ, ಧರ್ಮಗಳು ಸ್ಪರ್ಶಿಸದ ಈ ಇಬ್ಬರು ಸ್ವತಂತ್ರ ಜೀವಿಗಳು, ತಮ್ಮ ಕೆಲವು ಆಪ್ತರೆದುರು, ಕುಟುಂಬದವರೆದುರು ಪತಿ–ಪತ್ನಿಯ ರಾದರು. ಧರ್ಮ, ಸಂಪ್ರದಾಯ, ಆಚರಣೆಗಳು ಮಹಿಳೆಯನ್ನು ಅಧೀನತೆಗೆ ತಳ್ಳುತ್ತವೆ ಎಂದು ಸ್ತ್ರೀವಾದಿಗಳ ವಾದವಾಗಿದೆ. ಈ (ಮೇರಿ) ಮಹಿಳೆಯೆ ಅದನ್ನು ನೇರವಾಗಿ ಧಿಕ್ಕರಿಸಿ ಹೊರಬರಲಿಲ್ಲ ಅವಳ ಬದುಕೆ ಸ್ತ್ರೀವಾದದ ಪ್ರತೀಕ. ಮನೆಯ ಕೆಲಸಗಳಲ್ಲಿ ಮೇರಿ ಉಳಿಯಲಿಲ್ಲ. ಅಪ್ಪಟ ವಿಜ್ಞಾನಿಯಂತೆ ಸಂಶೋಧಕಳಂತೆ ಶೋಧನೆಗೆ ಹೊರಟಳು. ಮೇರಿ ದಿನದಿನದ ಅನಿವಾರ್ಯಗಳನ್ನು ಆದಷ್ಟು ಹಗುರಾಗಿಸಿ, ಸಮಯ ಉಳಿಸುವ ಸಾಮರ್ಥ್ಯವಿತ್ತು. ಹಣವಿಲ್ಲದೆ ಉಸಿರಾಡಬಲ್ಲ ಕಲೆ ಕಲಿತಿದ್ದಳು, ಎಷ್ಟರಲ್ಲೂ ತೂಗಿಸಬಲ್ಲ ಜಾಣೆ. ಬಡತನವನ್ನು ಕಂಡ ಈಕೆಗೆ ಹಣದ ಹುಚ್ಚಿರಲಿಲ್ಲ. ಏನಿದ್ದರೂ ವಿಜ್ಞಾನದ ಆಸಕ್ತಿ ಕುಂದಲಿಲ್ಲ, ಕರಗಲಿಲ್ಲ. ಉದಾರವಾದಿ ಸ್ತ್ರೀವಾದಿ ಸಿದ್ಧಾಂತ ಹೇಳುವ ಹಾಗೆ ಮಹಿಳೆಯರು ಮನೆಗೆಲಸಕ್ಕೆ ಮಾತ್ರ ಸೀಮಿತವಾಗದೇ ಮನೆಯಿಂದ ಹೊರಬಂದು ಮನೆಯಾಚೆಗಿನ ಕೆಲಸಗಳಲ್ಲಿ ತೊಡಗಿಕೊಳ್ಳಬೇಕು ಎಂಬುವುದು ಮೇರಿಯ ನಿಲುವು ಸಹ ಆಗಿತ್ತು.

ಪಿಯರಿ ಮೇರಿಗೆ ಸಾಂಪ್ರದಾಯಿಕ ಗಂಡನಾಗಲಿಲ್ಲ. ಸ್ನೇಹಿತ, ಮಾರ್ಗದರ್ಶಕ, ಆತ್ಮೀಯ ಸಂಗಾತಿಯಾಗಿದ್ದ. ಮೇರಿಯ ವೇಗದ





ಸಂಶೋಧನೆಯನ್ನು ನಿಕಟವಾಗಿ ಗಮನಿಸಿದ್ದ. ಆಕೆಯ ಕೆಲಸದಲ್ಲಿ ನೇರವಾಗಿ ಪಾಲ್ಗೊಳ್ಳದಿದ್ದರೂ, ಪ್ರಶಂಸೆ ಪ್ರೋತ್ಸಾಹದ ಮಾತುಗಳಿಂದ ಹುರಿದುಂಬಿಸಿದ್ದ. ಸ್ವಂತ ಸಂಶೋಧನೆಯನ್ನು ತೊರೆದು, ಮೇರಿಯ ಮೂಲಧಾತುವಿನ ಹುಡುಕಾಟಕ್ಕೆ ಜೊತೆಯಾದ. ಇಂತಹ ಸಂಗಾತಿಗಳು ಇರುವುದು ವಿರಳ. ಪ್ರೇಮದಲ್ಲಿ ಒಂದಾದ ಈ ಅದ್ವಿತೀಯ ದಂಪತಿಗಳು ವಿಜ್ಞಾನದ ಹೊಸ ಅಧ್ಯಾಯ ಬರೆಯಲು ಜೊತೆಯಾದರು. ಎರಡು ಮಿದುಳು, ನಾಲ್ಕು ಕೈಗಳು ಸೇರಿದವು. ಒಂದು ಹೊಸ ಕಲ್ಪನೆಯ ಬೆನ್ನುಹತ್ತಿ ಹೊರಟರು, ಕನಸನ್ನು ದಿಟವಾಗಿಸುವ ಹಟದಲ್ಲಿ ಅವರ ಸಾಂಗತ್ಯ, ಪಾಲುದಾರಿಕೆ ಪರಿಪೂರ್ಣವಿತ್ತು. ಈ ಕ್ಷಣದಿಂದ ಅವರ ಜೊತೆ ಜೊತೆಯ ಸಂಶೋಧನೆಯಲ್ಲಿ, ದುಡಿಮೆಯಲ್ಲಿ, ಯಾರು ಏನು ಮಾಡಿದರೆಂದು ಬೇರ್ಪಡಿಸಲಾರದಷ್ಟು ಐಕ್ಯತೆಯಿತ್ತು. 1898ರ ಜುಲೈ ಹೊತ್ತಿಗೆ ಪಿಚ್ ಬ್ಲೆಂಡಿನಲ್ಲಿ ಒಂದಲ್ಲ, ಎರಡು ಹೊಸ ಮೂಲಧಾತುಗಳ ಇರುವು ಕಂಡು ಬಂದಿತು. ಅದರಲ್ಲೊಂದರ ಇರುವನ್ನು ಅವರ ಪ್ರಯೋಗಗಳನ್ನು ನಿಖರವಾಗಿ ತೋರಿದವು. ಪಿಯರ್ ಮೇರಿಗೆ ಇದಕ್ಕೊಂದು ಹೆಸರಿಡು ಎಂದು ಸಹಜವಾಗಿ ಹೇಳಿದಾಗ, ಮೇರಿಯ ಮನಸ್ಸು ತನ್ನ ತಾಯ್ನಾಡಿನತ್ತ ಹರಿಯಿತು. ಭೂಪಟದಿಂದ ಅಳಿಸಿ ಹಾಕಿದ ಪೋಲೆಂಡ, ಮೆಲ್ಲನೆ ಹೇಳಿದಳು 'ಪೊಲೋನಿಯಂ' ಎಂದು. ಮೇರಿಯ ಮಾತೃ ದೇಶದ ಅಭಿಮಾನವನ್ನು ಜಗತ್ತಿಗೆ ಮೆರೆದಿತ್ತು.

ಮೇರಿ ಪಿಯರಗೆ ವಿಜ್ಞಾನ, ಉದ್ಯೋಗವಾಗಿರಲಿಲ್ಲ. ತಿಂಗಳ ಸಂಬಳ ತರುವ ಸಲಕರಣೆಯೂ ಅದಲ್ಲ. ಸಂಶೋಧನೆ, ಅದರ ದೈಹಿಕ-ಬೌದ್ಧಿಕ-ಮಾನಸಿಕ ಅಂತಃಸತ್ವವನ್ನೆಲ್ಲಾ ಇಡಿ ಇಡಿಯಾಗಿ ಹೀರುವ ಹವ್ಯಾಸವಾಗಿತ್ತು. ಪಿಯರ ಮಹತ್ತರ ಸಂಶೋಧನೆಗಳ ಮೂಲಕ ಹೆಸರು ಮಾಡಿದ್ದ. ಆದರೆ ವ್ಯವಸ್ಥೆಯಲ್ಲಿ ಜಾಣರಿಗೆ ಅವಕಾಶ ಸಿಗುವುದು ಕಡಿಮೆ, ಅದೇ ತೆರನಾಗಿ ಸೋರ್ಬನ್ ವಿಶ್ವವಿದ್ಯಾಲಯ ದಲ್ಲೊಂದು ಪ್ರೊಫೆಸರ್ ಹುದ್ದೆ ದಕ್ಕುವುದು ಸುಲಭವಿರಲಿಲ್ಲ. ಪಿಯರನ ಪ್ರಸಿದ್ಧಿ ಪ್ಯಾರಿಸನ ಹೊರಗೂ ಹರಡಿತ್ತು. ಜೀನಿವಾದ ವಿಶ್ವವಿದ್ಯಾಲಯದಲ್ಲಿ ಸುವ್ಯವಸ್ಥಿತ ಪ್ರಯೋಗಶಾಲೆಯಲ್ಲಿ ಕೆಲಸ ಮಾಡಲು ಆಹ್ವಾನ ಬಂದಿತ್ತು. ಅವರ ಸದ್ಯದ ಆರ್ಥಿಕ ಸ್ಥಿತಿಯಲ್ಲಿ ಈ ಹುದ್ದೆ ಅವಶ್ಯಕ ಇತ್ತು, ಆದರೆ ಸಂಶೋಧನಾ ದಾಹದ ಮುಂದೆ ಸಂಶೋಧನೆ ಬಿಟ್ಟು ಹೊರಡಲಿಲ್ಲ. ಮೇರಿ ಸಂಸಾರದ ಭಾರವನ್ನು ಪಿಯರ ಹೆಗಲಿಗೆ ಹೇರಿ ಕೂಡುವ ಮಹಿಳೆಯಾಗಲಿಲ್ಲ. ಶಾಲೆಯೊಂದರಲ್ಲಿ ಭೌತಶಾಸ್ತ್ರದ ಉಪನ್ಯಾಸಕಿಯಾಗಿ ಕೆಲಸಕ್ಕೆ ಸೇರಿ ದುಡಿಯ ತೊಡಗಿದಳು. ಅವಕಾಶಗಳ ಬಗ್ಗೆ ಕೊರಗಲಿಲ್ಲ. ಪಾಳು ಕೊಟ್ಟಿಗೆಯಲ್ಲಿ ಅತ್ಯಮೂಲ ತುಣುಕುಗಳು ಮಿಣುಕು ಹುಳದಂತೆ ಮಿಂಚಿದವು. ನೀರವ ರಾತ್ರಿಯ ಕತ್ತಲಲ್ಲಿ ರೇಡಿಯಂನ್ನು ಕಂಡು ಹಿಡಿದಿದ್ದರು. ಬೆಳಕವನ್ನು ಅರಿಸಿ ಹೋದ ದಂಪತಿಗಳು ನಕ್ಷತ್ರ ಪುಂಜವನ್ನೇ ಹಿಡಿದು ತಂದಿದ್ದರು. ರೇಡಿಯಂಗೆ ಅಗಾಧ ಮಾರುಕಟ್ಟೆ ಏರ್ಪಟ್ಟಿತ್ತು. ಪಿಯರ ರೇಡಿಯಂ ತಯಾರಿಸುವ ವಿಧಾನವನ್ನು ಪೇಟೆಂಟ್ ಮಾಡಲು ಬಯಸಿದ, ಆದರೆ ಮೇರಿ ವೈಜ್ಞಾನಿಕ ಪ್ರವೃತ್ತಿಗೆ ವಿರುದ್ಧ ಎಂದು ನಿರಾಕರಿಸಿದಳು. ವಿಜ್ಞಾನ ಜ್ಞಾನದ ಪ್ರಸಾರದ ಸಾಧನ. ಬಡತನ ಸಿರಿತನಗಳ ಆಯ್ಕೆ ಎದುರಿಗಿದ್ದಾಗ, ಕ್ಷಣದಲ್ಲಿ ಶ್ರೀಮಂತಿಕೆಯನ್ನು ತಿರಸ್ಕರಿಸಿ ವಿಜ್ಞಾನಕ್ಕೆ ಕ್ಷೇತ್ರದಲ್ಲಿ ಶಕ್ತಿಯಾದರು. ವೈಯಕ್ತಿಕ ಬದುಕಿಗಿಂತ ಅವರ ವಿಚಾರಗಳ ಕುರಿತು ಜನರು ನೋಡಬೇಕು ಎಂದು ಹೇಳಿರುವುದು ಸಮಾಜಕ್ಕೆ ಕೊಡುಗೆ ನೀಡುವುದರ ಕುರಿತು.

ಏಪ್ರಿಲ್ 19, 1906ರಂದು ಪಿಯರ ಚಿರನಿದ್ರೆಗೆ ಜಾರಿದ್ದ. ಪ್ರಯೋಗಾಲಯದಲ್ಲೀಗ ದುಡಿವ ಎರಡೇ ಕೈಗಳು, ಒಂದೇ ಮಿದುಳು, ಒಂದಿಷ್ಟು ಸಂದೇಹಗಳು, ಸಮಸ್ಯೆಗಳು, ತನ್ನಲ್ಲೇ ಮಥಿಸಿ ಕಂಡುಕೊಳ್ಳ ಬೇಕಾದ ಪರಿಹಾರಗಳು. ಇವರ ನಡುವೆ ದುಡಿದು ತರುವ ಗಂಡ, ಮಾಡಿ ಹಾಕುವ ಹೆಂಡತಿಯ ಸಂಬಂಧವಿರಲಿಲ್ಲ. ನೂರು ಆಯಾಮ, ನೂರು ಸಾಧ್ಯತೆಗಳಿರುವ ಸಂಬಂಧ ಅವರದಾಗಿತ್ತು. ಸರಕಾರ ಮೇರಿಗೆ ವಿಧವೆ ರಾಷ್ಟ್ರೀಯ ಪಿಂಚಣಿ ನೀಡಲು ಮುಂದಾಯಿತು. ಮೇರಿ ಅದನ್ನು ತಿರಸ್ಕರಿಸಿದಳು. 'ನನಗೆ ಪಿಂಚಣಿ ಬೇಕಿಲ್ಲ. ನನ್ನಲ್ಲಿ ದುಡಿಯುವ ಶಕ್ತಿಯಿದೆ, ನನ್ನ ಮತ್ತು ನನ್ನ ಮಕ್ಕಳಿಗಾಗುವಷ್ಟು ದುಡಿಯಬಲ್ಲೆ' ಎಂದು ಹೇಳಿರುವುದು ಮೇರಿಯಲ್ಲಿನ ದುಡಿಯುವ ಶಕ್ತಿ, ಪರಾವಂಬಿತನವಿಲ್ಲದ ಬದುಕಿನ ಬಗೆಗೆ ತಿಳಿಸುತ್ತದೆ. ಮೇ 13, 1906ರಂದು ಮೇರಿಗೆ ಸೋರ್ಬನ್ನಿನ ವಿಶ್ವವಿದ್ಯಾಲಯದ ಪ್ರೊಫೆಸರ್ ಹುದ್ದೆಗೆ ಆಯ್ಕೆಯಾದ ಮೊಟ್ಟ ಮೊದಲ ಮಹಿಳೆ ಮೇರಿಯಾದಳು.

ಮೇರಿಯ ಪ್ರಸಿದ್ಧಿ ಎಲ್ಲ ಕಡೆ ಹರಡಿತ್ತು. ಗೌರವ ಸೂಚಕ ಡಿಗ್ರಿಗಳು, ಪ್ರಶಸ್ತಿಗಳು ಬಂದವು. ಮೇರಿ ಎಂದು ಅವುಗಳನ್ನು ಪ್ರದರ್ಶಿಸಲಿಲ್ಲ. ಹಣ, ಪ್ರಸಿದ್ಧಿ ಕಲಕದ ಹಿರಿಯ ವ್ಯಕ್ತಿತ್ವ ಅವರದು. ಫ್ರಾನ್ಸ್‌ನಲ್ಲಿ ವಿಜ್ಞಾನ ಅಕಾಡೆಮಿಗೆ ಮೇರಿಯನ್ನು ಆರಿಸಲು ಹೆಣ್ಣೆಂಬ ಒಂದೇ ಕಾರಣಕ್ಕೆ ನಿರಾಕರಿಸಿದ್ದರು. ಫ್ರಾನ್ಸ್‌ನ ವಿಜ್ಞಾನ ಅಕಾಡೆಮಿಯೊಳಗೆ ಮಹಿಳೆಗೆ ಪ್ರವೇಶವಿಲ್ಲ ಎಂದು ನಿರಾಕರಿಸಿದರು. ಮೇರಿ ಇದಕ್ಕೆ ನಿರಾಶೆ ಪಡಲಿಲ್ಲ, ತನ್ನ ಕರ್ತವ್ಯದಲ್ಲಿ ಮುಂದುವರೆದಳು. 1911ನೇ ಸಾಲಿನ ಶ್ರೇಷ್ಠ ಸಂಶೋಧನೆಗಳನ್ನು ಗುರುತಿಸಿ ರಸಾಯನಶಾಸ್ತ್ರದ ನೊಬೆಲ್ ಪಾರಿತೋಶಕವನ್ನು ನೀಡಲಾಯಿತು. ಇಲ್ಲಿಯವರೆಗೂ ಯಾವ ಹೆಣ್ಣಾಗಲಿ, ಗಂಡಾಗಲಿ ಎರಡು ಬಾರಿ ನೋಬೆಲ್ ಪಾರಿತೋಷಕವನ್ನು ಪಡೆದಿಲ್ಲ. ಮೇರಿ ಗಂಡು ರಂಗದಲ್ಲಿದ್ದವಳು. ಪುರುಷರು ಹಕ್ಕಿನಿಂದ ತಮ್ಮದೆಂದು ತಿಳಿದ ರಂಗದಲ್ಲಿ ಯಶಸ್ವಿಯಾದ ಏಕೈಕ ಮಹಿಳೆ ಮೇರಿಯಾದಳು.

1914ರಲ್ಲಿ ಪ್ಯಾರಿಸ ಮತ್ತು ಜರ್ಮನ್ ನಡುವೆ ಮೊದಲ ಮಹಾಯುದ್ಧ ಆರಂಭವಾಗಿತ್ತು. ಮೇರಿ ತನ್ನ ಸಂಶೋಧನೆಗಳನ್ನು ಸದ್ಯಕ್ಕೆ ನಿಲ್ಲಿಸಿಬಿಟ್ಟಳು. ತನ್ನ ಎರಡನೇ ತಾಯಿನಾಡಿನ ಸೇವೆಗೆ ಸಿದ್ಧವಾದಳು. ಮೇರಿ ಎಲ್ಲ ಮಹಿಳೆಯರಂತೆ ಬಿಳಿವಸ್ತ್ರಧರಿಸಿ ದಾದಿ ಸೇವೆ ಸಲ್ಲಿಸಲಿಲ್ಲ. 1895ರಲ್ಲಿ ರಾಂಟ್ಜನ್ ಕಂಡು ಹಿಡಿದ ಕ್ಷ-ಕಿರಣಗಳು ಶಸ್ತ್ರಕ್ರಿಯೆ ಇಲ್ಲದೆ ಮನುಷ್ಯನ ದೇಹದೊಳಗೆ ಇಣುಕಬಲ್ಲ ಸಾಧ್ಯತೆಯನ್ನು

ತಂದಿದ್ದವು. ಆದರೆ 1914ರಲ್ಲಿ ಇಡೀ ಫ್ರಾನ್ಸ್‌ನಲ್ಲಿ ಕ್ಷ-ಕಿರಣ ಸಲಕರಣೆಗಳಿರಲಿಲ್ಲ. ಫ್ರಾನ್ಸಿನ ಮಹಿಳಾ ಸಂಘದ ಸಹಾಯ ಪಡೆದು ಕ್ಷ-ಕಿರಣ ಸಜ್ಜಿತ ಕಾರುಗಳನ್ನು ಸಿದ್ಧಪಡಿಸಿದಳು. ಸಾಮಾನ್ಯ ಮೋಟಾರುಗಳಿಗೆ ರಾಂಟ್ಜನ್ ಉಪಕರಣಗಳನ್ನು ಅಳವಡಿಸಿ ತಯಾರಿಸಿದ ಸಂಚಾರಿ ಕ್ಷ-ಕಿರಣಾಲಯಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಓಡಾಡಿದವು. ಮೇರಿ ಕ್ಷ-ಕಿರಣ ಸಜ್ಜಿತ ಕಾರುಗಳನ್ನು ಏರಿ ಯುದ್ಧರಂಗಕ್ಕೆ ಮುನ್ನುಗ್ಗಿ, ತಡೆವ ಅಧಿಕಾರಿಗಳನ್ನು ಒಲಿಸಿಕೊಂಡು, ರೇಗಿದವರನ್ನು ಪೀಡಿಸಿ ಯಾದರೂ ಒಳಹೊಕ್ಕು ಗಾಯಾಳುಗಳ ಸೇವೆಗೆ ಧಾವಿಸು ತ್ತಿದ್ದಳು. ಗುಂಡುಹೊಕ್ಕ ಒಂದೊಂದು ದೇಹವನ್ನು ಕ್ಷ-ಕಿರಣಗಳಿಂದ ಪರೀಕ್ಷಿಸಿ, ವೈದ್ಯರಿಗೆ ಗುಂಡಿರುವ ಜಾಗವನ್ನು ಮೇರಿ ತೋರಿಸುತ್ತಿದ್ದಳು. ಮೇರಿಯ ವಿಜ್ಞಾನದ ಹಿನ್ನೆಲೆ, ಮುನ್ನುಗುವ ಧೈರ್ಯವಷ್ಟೇ ಆಕೆಯ ಶಕ್ತಿಯಾಗಿರಲಿಲ್ಲ ಎಂಥಾ ಪರಿಸ್ಥಿತಿಯಲ್ಲೂ ಎದೆಗುಂದದ, ಹೇಗಾದರೂ ನಿಭಾಯಿಸಬಲ್ಲ ಗಟ್ಟಿಗಿತ್ತಿಯಾಗಿದ್ದಳು. ಯಾರನ್ನು ಯಾವುದಕ್ಕೂ ಮೇರಿ ಕರೆಯುತ್ತಿರಲಿಲ್ಲ. ಯಾರ ಸಹಾಯಕ್ಕಾಗಿ ಕೈ ಚಾಚುತ್ತಿರಲಿಲ್ಲ. ಮೇರಿ ಸ್ವಯಂ ಕೆಲಸವನ್ನು ಮಾಡುತ್ತಿದ್ದಳು. ಯಾರ ಅವಲಂಬನೆಯಿಲ್ಲದೆ ಬದುಕಿ ಬಾಳಿದಳು. ಗಂಡಸರ ಕ್ಷೇತ್ರದಲ್ಲಿ ಗಂಡಸರಿಗಿಂತ, ಗಂಡಸರು ಗುರುತಿಸುವಂತೆ ಕೆಲಸ ಮಾಡಿದಳು. ಯುದ್ಧದ ವೆಚ್ಚಗಳು ಅತ್ಯಧಿಕವಿದ್ದು ಸರಕಾರ ನಾಗರೀಕರಲ್ಲಿ ತಮ್ಮಲ್ಲಿರುವ ಹಣ, ಚಿನ್ನವನ್ನು ನೀಡಲು ಪ್ರಾರ್ಥಿಸಿತ್ತು. ಮೇರಿ ತನ್ನ ಮಗಳಾದ ಐರಿನ್‌ನೊಡನೆ ಮಾತನಾಡಿ ದೇಶದ ಈ ತುರ್ತು ಸ್ಥಿತಿಯಲ್ಲಿ ತಮ್ಮಲ್ಲಿದ್ದ ಹಣ, ಬಂಗಾರವನ್ನೆಲ್ಲಾ ದೇಶಸೇವೆಗೆ ಮುಡಿಪಾಗಿರಿಸಿದಳು. ಸಂಶೋಧನೆಗೆ ದೊರೆತ ಪ್ರಶಸ್ತಿ ಪತ್ರಗಳನ್ನು, ಎರಡನೆಯ ನೋಬಲ್ ಪಾರಿತೋಷಕದ ಹಣವನ್ನಷ್ಟೂ ಸರಕಾರಕ್ಕೆ ಒಪ್ಪಿಸಿದಳು.

ಮಹಾ ಮಾನವತಾವಾದಿ ಮೇರಿಯ ನಡೆ ನುಡಿ ಸರಳವಾಗಿತ್ತು. ಯಾರ ಅವಲಂಬನೆ ಇಲ್ಲದ ಬದುಕನ್ನು ಮೇರಿ ಸಾಗಿಸಿದ್ದಳು. ಮೊದಲು ಪಿಯರ ಕ್ಯೂರಿಯಿಂದ ಮೇರಿಯ ಸಾಧನೆಯನ್ನು ಗುರುತಿಸುತ್ತಿಸುವ ಜನರಿಗೆ ಯಾವುದೇ ಉತ್ತರ ನೀಡದೇ, ಮಾತಿಗೆ ಮಾತು, ಚರ್ಚೆಗೆ ಚರ್ಚೆ ಬೆಳೆಸದೇ ಸಾಧಿಸಿ ತೋರಿಸಿ ಎರಡು ಬಾರಿ ನೋಬಲ್ ಪ್ರಶಸ್ತಿಯೇ ಉತ್ತರವಾಗಿತ್ತು. ಸ್ತ್ರೀವಾದವೇ ಬದುಕಿನ ದಾರಿ ಎನ್ನುವ ಹಾಗೇ ಮೇರಿಯ ಬದುಕು ಸ್ತ್ರೀವಾದಿ ಬದುಕಾಗಿದೆ ಎನ್ನುವುದರಲ್ಲಿ ಯಾವ ಸಂಶಯವಿಲ್ಲ. ❑

ಬೆಂಬಲಿಗರೇ,

ಈ ಸಂಚಿಕೆಯನ್ನು ಹೊರತರುವಲ್ಲಿ ನಮ್ಮೊಟ್ಟಿಗೆ ಕೈಜೋಡಿಸಿರುವ ಮಾನಸ ಬಳಗದವರಿಗೆ ಹಾಗೂ ಲೇಖನ, ಪತ್ರಗಳ ಮೂಲಕವೂ ನಮ್ಮ ಉತ್ಸಾಹವನ್ನು ಇಂಗದಂತೆ ನೋಡಿಕೊಳ್ಳುತ್ತಿರುವ ನಿಮ್ಮೆಲ್ಲರಿಗೂ ನಾವು ಸದಾ ಋಣಿ.

ಒಳಗುದಿ

ಮೌನದೊಳಗೆಲ್ಲೋ
ಸದ್ದಿನ ಮಾತು
ಕೊತ ಕೊತ ಕುದಿಯುತ್ತ
ಮನ ಮಂಕಾಯಿತು!

ಬೀಸಿ ಒಗೆದ ಸದ್ದು
ಎಲ್ಲ ಕಡೆ ತಲ್ಲಣ
ಹಿಡಿದು ಹೆಡೆ ಮುರಿ ಕುಕ್ಕಿ
ಸೆಳೆಯಿತದೋ ತಾಣ!

ಮಚ್ಚರಿಸುವ ಮನದೆದುರು
ಏನು ಸಾಂತ್ವನ, ಸಮಾಧಾನ?
ಕೂಗು ಕೂಗುತಲಿದ್ದರೂ ಕೂಡ
ಎಚ್ಚರವಾಗದಷ್ಟು ನಿಧಾನ!

ಓಡೋಡಿ ಬರುವ ಭಾವಗಳು
ದ್ವೀಪವಾಗುತಿವೆ ಒಳಗೆ
ಯಾರು ಏನೆಂದರೂ ಕೂಡ
ಓಗೊಡದಷ್ಟು ವ್ಯೆಲಿಗೆ

■ ಸಿಪಿಲೆ ಸತೀಶ್



Registered with Registrar of Newspapers of India under No. KARKAN/2007/22289
'NAMMA MANASA', REGD.No.: MAG(3) NPP/399(A)/2006-07 **Reg.KA/BGS/2074/2010-12**

ಆ ದಿನ ಕಂಡೇ ಕಾಣುತ್ತೇವೆ

ಎಂತಹ ನಿರಂಕುಶ ಪ್ರಭುತ್ವ
ಮಹಾರಥರ ದರ್ಪದ ಸಿಂಹಾಸನ
ರತ್ನಖಚಿತ ಪ್ರಭುಗಳ ಕಿರೀಟಕ್ಕೆ
ಬರಸಿಡಿಲು ಅಪ್ಪಳಿಸಬಹುದು
ಆ ದಿನ ಕಂಡೇ ಕಾಣುತ್ತೇವೆ.

ಮಣಿ, ಮುಕುಟ ಕಿರೀಟಗಳು
ಮಣ್ಣು ಪಾಲಾದವು,ಪದ್ಮನಾಭನ
ಗುಪ್ತಧನ, ಕನಕ ಬಯಲಾದವು
ಗದ್ದುಗೆಯ ನಂಟು ಕಡೆತನಕವಲ್ಲ
ಸಿಂಹಾಸನಗಳು ನುಚ್ಚು ನೂರಾಗುವ
ಆ ದಿನ ಕಂಡೇ ಕಾಣುತ್ತೇವೆ.

ನಿರ್ಲಜ್ಜ ಸುಳ್ಳು ಭರವಸೆಗಳು
ವರಸೆ ಮಾತುಗಳ ಪರಮಾವಧಿ,
ಗದ್ದುಗೆಗಳ ಬೇರು ಅದುರುತ್ತಿವೆ
ಭೂಮಿ ಮೇಲಿನ ಅರಮನೆಗಳು
ಬೆಂಕಿ ಪೊಟ್ಟಣಗಳಂತೆ ಧಗಧಗನೆ
ಭೀಕರ ಉರಿಯುವ ದೃಶ್ಯವ
ಆ ದಿನ ಕಂಡೇ ಕಾಣುತ್ತೇವೆ.

ಓತಿಕಾಟದಂತೆ ಬಣ್ಣ ಬದಲಿಸುವ
ಇವರ ಬಣ್ಣ ಬಯಲಾಗುತ್ತದೆ,
ಇಲ್ಲಿಯೇ ನಮ್ಮ ನಿಮ್ಮೆಲ್ಲರ ಮುಂದೆಯೇ
ನಿರಾಕರಿಸಲ್ಪಟ್ಟ ಅಪರಾಧಗಳು
ಸಾಬೀತಾಗುತ್ತವೆ ಎಲ್ಲರ ಮುಂದೆಯೇ
ಬೆತ್ತಲಾಗುತ್ತಾರೆ ಅವರು
ಆ ದಿನ ಕಡೇ ಕಾಣುತ್ತೇವೆ.

ಪ್ರಭುಗಳ ನೆತ್ತಿಯ ಮೇಲೆ
ಅಪಾಯದ ಕತ್ತಿ ಬೀಸುತ್ತಿದೆ
ಸುಳ್ಳು ಭರವಸೆಗಳು ಛಿದ್ರವಾಗಿ
ಪುಡಿಪುಡಿಯಾದ ಒಪ್ಪಂದಗಳು
ಗಾಳಿಯಲಿ ತರಗೆಲೆಯಾಗಿ ಹಾರುವ
ಆ ದಿನ ಕಂಡೇ ಕಾಣುತ್ತೇವೆ.

■ ಡಾ. ಕೆ. ಷರೀಫಾ

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018